ಕರ್ಮವೀರ

ಹುಬ್ಬಳ್ಳಿ ತಾ. ೨೪-೮-

ಸಂಪುಟ ೨೦] [ಸಂಚಿಕೆ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು—ಪ್ರಕಾಶಕರು:
ರಂ. ರಾ. ದಿವಾಕರ

ವೀರಸಂದೇಶ

೧

ಶಕ್ತಿಯೇ ಜೀವವೆಂಬುದು ಸತ್ಯಸಂಗತಿ. ನಿರ್ಬಲತೆ ಮರಣವೇ ಸೈ! ಬಲವೇ ಆದವ್ಯ, ಆನಂದ, ಅವಿರತ, ಅಮರ- ದುರ್ಬಲತೆ ದುಃಖ, ದುಃಸ್ಸಹ.

೨

ಕೃತಿ ಒಳ್ಳೆಯದು. ಆದರೆ ಅದರ ಬೇರು "ವಿಚಾರ" ದಲ್ಲಿದೆ. ಒಳ್ಳೆಯ ವಿಚಾರಗಳಿಂದ, ಉತ್ತಮ ಆದರ್ಶಗಳಿಂದ ಹಗಲು-ರಾತ್ರಿ ನಿಮ್ಮ ಮಿದುಳಲ್ಲಿ ತುಂಬಿರಿ. ಅದರಿಂದ ಒಳ್ಳೆಯ ಕೃತಿ ತಾನೇ ಹೊರಬರುತ್ತದೆ.

೩

ಜಗದ ಕ್ರೂರತನ, ಪಾಪಿತನ ಆಡಿಕೊಳ್ಳದಿರಿ. ಅವು ಇರಬೇಕಾದವೇ! ಸಹಾಯ ನೀಡುವ ಮನ ವಿದ್ದರೆ ಅವನ್ನು ತೆಗಳಿ ಪ್ರಯೋಜನವಿಲ್ಲ. ಪಾಪ, ದುಃಖ ಇವೆಲ್ಲ ದುರ್ಬಲತೆಯ ಪರಿಣಾಮಗಳೇ!

೪

ಚಿಕ್ಕಂದಿನಿಂದಲೆ ಆರೋಗ್ಯಕರವಾದ, ಬಲಯುತವಾದ, ಸಹಾಯಕವಾದ ವಿಚಾರಗಳೇ ನಿಮ್ಮ ತಲೆಯನ್ನು ಪ್ರವೇಶಿಸಲಿ. ಅನಿಷ್ಟವಾದ ಸಂಗತಿಗಳಿಗೆ ಎಡೆಗೊಡಲೇ ಬೇಡಿರಿ.

—ಸ್ವಾಮೀ ವಿವೇಕಾನಂದ



ಮಾನ್ಯ ಬಾಳಾಸಾಹೇಬ ಖೇರ

ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ. ಬಾಳಾಸಾಹೇಬ ಖೇರರವರ ಷಷ್ಠ್ಯಬ್ದಿ ಸಮಾರಂಭವು ಕಳೆದ ತಿಂಗಳು ೨೪ ನೆಯ ತಾರೀಕಿನಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಇವರು ಚಿರಾಯುಗಳಾಗುವಂತೆ ಪರಮಾತ್ಮನು ಅನುಗ್ರಹಿಸಲಿ.

ಮುನಿಸಿಪಾಲಿಟಿಯವರೇನು ಮೂರ್ಖರೆ ?

— ಪುಟ ೨

ಜಪಾನವನ ಆರ್ಥಿಕ ಚಟುವಟಿಕೆಗಳ ಸ್ಥೂಲ ನಿರೀಕ್ಷಣೆ

— ಪುಟ ೩

KARMAVEER KANNADA ILLUSTRATED WEEKLY HUBLI

ಚಿಕ್ಕಕತೆ

ರೂಪರಾಣಿ

— ಬರೆದವರು— ಶ್ರೀ "ಅರ್ಜುನ"

"ಅದೇನೋ ದೇವಿ, ಹೀಗೇಕೆ ಮುಖ್ಯಾಗಿ ಕ್ರಪವಿ ದಂಡಿಸಿಕೊಂಡು ಬಂದಿರಿ? ನಿಮ್ಮ ಸಮ್ಮಾನ ನಿಮ್ಮಾಸ ತಿಳಿಯಲೇ ಇಲ್ಲವೋ ಹೇಗೆ?" ಸ್ವಲ್ಪ ಅಳುಕು ಮುಖ ತಿರುಗಿಸಿ ಹೇಳಿದ ಪತಿಯಿಂದ ಕೇಳಿದಳು ರೂಪರಾಣಿ. ಆಗ ಬೆಳಿಗ್ಗೆ ೧೦ ಗಂಟೆ. ಮದನನು ಸ್ನಾನಕ್ಕೆ ಹೋಗಿ ಬಂದವನೇ ಸ್ನಾನಾದಿಗಳನ್ನು ತೀರಿಸಿ ಆಫೀಸಿಗೆ ಹೊರಡಲು ತಯಾರು ಮಾಡಬೇಕೆಂದು ಮನಸ್ಸಿನಲ್ಲಿ ಎಣಿಸಿ ನಾಳುತ್ತಾ ನಿಂತಿರುವಷ್ಟರಲ್ಲಿ ರಾಣಿ ಕಾಣಿಸಿಬಂದ ಮೇಲಿನ ಪ್ರಶ್ನೆ ಕೇಳಲ್ಪಟ್ಟಿತು.

ಸ್ವಲ್ಪ ಹೊತ್ತು ಮದನ ಹಾಗೇ ಅತ್ತಿಂದಿತ್ತ ತಿರುಗಿ ಅನಂತರ ಹೇಳಿದ:

"ಅಲ್ಲವೇ, ರೂಪಾ, ಮೊನ್ನೆ ನೀನು ನನ್ನ ಕೂಡಲು ಬಹಳ ಬೆಳೆದು ಸುರುಳಿ ಸುತ್ತಿಕೊಂಡಿದ್ದನ್ನು ಕಂಡು 'ಕರ್ಲ್ಸ' (Curls) ಎಂದು ಹಾಸ್ಯಮಾಡಲಿಲ್ಲವೆ? ಹಾಗೆ ತಲೆ ಬೆಳೆಸಿಕೊಂಡಿದ್ದರೆ ನಿನಗೆ ಚಂದ ಕಾಣಿಸದಿರಬಹುದೆಂದು ಈಗ ಸರಿ ಮಾಡಿಕೊಂಡು ಬಂದೆ."

"ಅಯ್ಯೋ, ನಾನು ಹಾಸ್ಯ ಮಾಡಿದ್ದಷ್ಟೆ, ಬಹಳ ಚೆನ್ನಾಗಿ ಕಾಣುವದೆಂದು ಮೆಚ್ಚಿ ಹೇಳಿದ್ದು. ಹೀಗೆಲ್ಲ ಮುಖ್ಯಾಗೆ ಮಾಡಿಕೊಂಡು ಬಂದು ಅಣಗಿಸಬೇಕೇ ನನ್ನನ್ನ ಅಪ್ಪಯ್ಯ?"

"ನನಗೆ ಗೊತ್ತೇ, ಯಾಕೆ ಸುಳ್ಳು ಹೇಳುವೆ? ನಿನಗಿಲ್ಲವಾದ್ದರಿಂದ ನನಗೇತಕ ಬೇಕೆಂದು" ಹೇಳಿದ್ದು ಕಾರಿ ಎದ್ದು ಹೇಳಿದ ಮಾತದು. ನನಗೇನೂ ಗೊತ್ತಾಗೋದಿಲ್ಲ ಅಂತ ಮಾಡಿದೆಯೋ? ನೀನು 'ಕರ್ಲ್ಸ' ಎನ್ನುತ್ತಿದ್ದಾಗ ನಿನ್ನ ನೋಟದಲ್ಲಿ ಮೋಲಿನ ಕಳೆಯನ್ನು ನಾನು ಕಂಡಿಲ್ಲವೆಂದು ಮಾಡಿದ್ದೆಯಾ?"

ರೂಪರಾಣಿ ಅಳು ಮೋರೆ ಹಾಕಿಕೊಂಡು ನಿಂತಿದ್ದಳು. ಮಾತಾಡಲಾರದೆ ಥೊಪ್ಪನೆ ಅಲ್ಲೇ ಕುಳಿತಳು. ಆಗ ಮದನನೆಂದ:

"ನೋಡಿ ಸಬೇಡ, ಮುಯಿಸಬೇಡ. ಚಿಕ್ಕ ಹೃದಯದವರಿಗೆ ಚಿಕ್ಕ ಚಿಕ್ಕ ಮನಸ್ಸಿರುವುದು ಸ್ವಾಭಾವಿಕ. ದೊಡ್ಡ ಹೃದಯದವರು ಆ ಮನಸ್ಸಿಗೆ ತೋರುವಂತೆ ಉದಾರ ನೀತಿಯಿಂದ ವರ್ತಿಸುವರು. ನೀನು ಈ ಊರಿನ ಹುಡುಗಿಯರಲ್ಲೆಲ್ಲ ಚೆಲುವೆ ಎಂಬುದು ನನಗೆ ಗೊತ್ತು. ಚೆಲುವೆ ಚೆಲುವನನ್ನು ಅರಿಸಿಕೊಳ್ಳುವುದು ಸ್ವಾಭಾವಿಕ. ಆದರೆ ನೀನು ಹಾಗೆ ಮಾಡದೆ ನನ್ನಂಥ ಸಾಮಾನ್ಯನನ್ನು ಆರಿಸಿಕೊಂಡೆ, ಏಕೆಂಬುದನ್ನು ನೀನು ನನಗೆ ಹೇಳಬೇಕೆ? ನನಗೆ ಗೊತ್ತೇ ಇತ್ತು. "ಗಂಡನು ಹೆಚ್ಚು ರೂಪವಂತನಿದ್ದರೆ ಅವನು ನನ್ನನ್ನು ಮೆಚ್ಚಿಕೊಳ್ಳಲಾರನು" ಎಂಬುದೇ ನಿನ್ನ ಕಲ್ಪನೆ; ಅದೇ ನಿನ್ನ ಹೆಮ್ಮೆ ದಿಬ್ಬ. ಅದರಿಂದಲೇ ನೀನು ಮೂರು ಹೊತ್ತು ಕನ್ನಡಿ ನೋಡುಕೊಳ್ಳುವಾಗ ನನ್ನನು ಕರೆಯುವೆ. ನನ್ನ ನಿನ್ನ ಮುಖಗಳನ್ನು ಹೋಲಿಸಿಕೊಂಡು ತೋರಿ ನಿನ್ನದೇ ಚಲ್ಯಗಿದೆಯೆಂದು ಒಳ ಹೊಳೆಗೇ ಹಿಗ್ಗುವೆ. ನಾನೆಲ್ಲಾದರೂ ದಣಿ ಬಣ್ಣ ಬೆಂಬುದು ರಕ್ತಹೀನತೆಯ ಲಕ್ಷಣ, ಸ್ತ್ರೀ ಸಹಜ, ಐಶ್ವರ್ಯ ಸೌಂದರ್ಯದಲ್ಲಿ ಪ್ರಧಾನ ಹೆಚ್ಚುವಲ್ಲ—ಎಂದರೆ ಸಪ್ಪೆ ಮೋರೆ ಮಾಡಿ ಕೊಂಡು ನೀನು ಗೋಣು ಹಾಕುತ್ತಿದ್ದುದನ್ನು ನಾನು ನೋಡಿಲ್ಲವೆ?"

ಇದನ್ನು ಕೇಳಿದಾಕ್ಷಣ ಕೋಪ ಮತ್ತು ದುಃಖಗಳ ಆವೇಶದಿಂದ ರೂಪರಾಣಿ ಅಳುತ್ತ ನಿಂತಿತು.

"ನಿನ್ನನ್ನು ಹೀಗೆಲ್ಲ ಮುಡಿಸಬೇಕೆಂದು ನಾನು ನಿನ್ನನ್ನು ಒಲಿಸಲಿಲ್ಲ. ನನ್ನಂತ ದೂರಾ ತಲೆ ನನಗೆ ಬರುವದಿಲ್ಲ. ನನ್ನನ್ನೇಕೆ ಬರಿದೆ ಹೀಗೆಲ್ಲ ಹಿಂಸೆ ಮಾಡುವಿರಿ? ನಾನು ನಿಮ್ಮ ವಿಚಿತ್ರ ಕಲ್ಪನೆಗಳೆಲ್ಲ ನಿಮ್ಮ ತಲೆ ತುಂಬಿ ಹುಟ್ಟುತ್ತವೆ. ಹಿಂದಕ್ಕೆ ನೂಕಿದಂತಾದರೆ ಅಷ್ಟು ಹುಡುಕುತ್ತೀರಿ. ನಾನು ಅಂಥ ಹೆಣ್ಣನ್ನು ಎಲ್ಲಿ ಹುಡುಕಲಿ? ಎಂದು ಅವನೊಳು ಕೇಳಿಕೊಳ್ಳುವಿರಿ. ಇದೆಲ್ಲ ನಿಮ್ಮ ಸ್ವಭಾವ!"

"ಆಗಲಾರದ ಕಿವಿ ಕಲ್ಲಾಗಲೇ ನನ್ನ ಹೃದಯ ಕಲ್ಲು ಮಾಡಿದೆ ಯಾಕೆ ಅಂತ ಕೇಳುವಿರಾ? — ಎಂದು ಬೇಡಿ ಹೆತ್ತಿದಳು. ಅದರ ಭಾವವೇನು? ಗಂಡನು ಚೆನ್ನಾಗಿ ಕಾಣಬೇಕೆಂದು, ಆಕೆಯಾದರೂ ಅದನ್ನು ಹೆಂಗಸು ಮೆಚ್ಚಬಾರದು? ಹೂವು ಗಂಧಗಳಲ್ಲಿ ಹೆಣ್ಣು ನವ್ಯ; ಹೆಣ್ಣೇ ಸೌಂದರ್ಯ ದೇವತೆ— ಎಂದು ನಿನ್ನ ಹೊಟ್ಟೆಯೊಳಗಿನ ಸಣ್ಣ ಆಸೆ ನುಡಿದು ಹೇಳುತ್ತಿದ್ದುದಲ್ಲವೇ ಆಗ?"

"ನಾನು ಹಾಗೆಲ್ಲ ತಿಳಿದುಕೊಂಡು ಹೇಳಿದ್ದಲ್ಲ. ಊರಲ್ಲೆಲ್ಲ ಗಂಡು ಹುಡುಗರು ಹೂವು ಮುಡಿದುಕೊಳ್ಳುವುದನ್ನು ನಾನು ನೋಡಿಲ್ಲ. ಅವರಿಗೆ ಬೇರೆ ಹುಟ್ಟಿದ್ದಿಲ್ಲ. ಅದಕ್ಕೇ ನಾನು ಹಾಗೆ ಹೇಳಿದೆ."

"ಆದರೆ ನಾನು ಆ ಕೂಡಲೆ ಆ ಗುಲಾಬಿಯನ್ನು ಅವನ ಕೋಟಿಗಂಟಿಸಿ ಸಮಾಧಾನ ಪಡಿಸಿದ್ದನ್ನು ಕಂಡೆಯಲ್ಲವೇ ನೀನು? ಹಿರಿಯ ಕೈಪ ಚಾಳಿ ಮುದಿಮಂದಿಗೆಲ್ಲ—ಎಂಬುದನ್ನು ನೀನು ಸಾರ್ಥಕ ಮಾಡಿದೆಯಲ್ಲವೆ? ಆ ಪುಟ್ಟ ಮಕ್ಕಳಲ್ಲಿ ಭೇದಭಾವ ಹುಟ್ಟಿಸಿ, ನಿನ್ನ ಮನಸ್ಸಿನ ಅಸಹನೆಯನ್ನು ಕ್ರೋಧದಿಂದ ಬೆದರಿಸಿ ಆ ಪುಟ್ಟ ಹುಡುಗನ ಮೇಲೆ ಕಾರಿ ಬಿಟ್ಟೆಯಲ್ಲವೆ? ಇದನ್ನು ಹೇಗೆ ಸುಳ್ಳೆಂದು ಹೇಳಬಲ್ಲೆ? ನ್ಯಾಯವಾಗಿ ಹೇಳಬೇಕಾಗಿದ್ದರೆ, ಅವನಿಗೆ ಅವನ ಗಂಡುತನದ ಗರುವಿಕೆಗೆ ಯೋಗ್ಯವಾದ ಉಡಿಗೆ ತೊಡಿಗೆ ಅಲಂಕಾರಗಳಲ್ಲಿ ಮನವೊಲಿಯುವಂತೆ ಅದನ್ನೇ ನೀನು ಮೆಚ್ಚಿ ಅವನಿಗೆ ಉಡಿಸಿತೊಡಿಸಿ ಆನಂದ ಪಟ್ಟಿದ್ದರೆ ಅವನಿಗೆ ಹಾಗೆ ನಿರಾಶೆಯುಂಟಾಗುತ್ತಿದ್ದಿಲ್ಲ; ಮನಸ್ಸಿಗೆ ಸೂಜಿ ಚುಚ್ಚಿದಂತಾಗುತ್ತಿರಲಿಲ್ಲ. ನೋಡು, ಆಗ ಆ ಮಗು ಎಷ್ಟು ಚಿಕ್ಕ ಮೋರೆ ಮಾಡಿಕೊಂಡಿತು! ಹೇಗೆ ಕಂದಿ ಕುಂದಿ ಹೋಯಿತು! ನಿನ್ನ ಕಣ್ಣಿಗೆ ಮತ್ಸರದ ಪರದೆ ಅಡ್ಡ ಬಂದಿಲ್ಲವಾಗಿದ್ದರೆ ಆ ಮರುಗಳಿಗೆಯಲ್ಲಾದರೂ ಅದನ್ನು ಕರೆದು ಸಮಾಧಾನದ ನಾಲ್ಕು ಮಾತುಗಳನ್ನಾದರೂ ಆಡುತ್ತಿದ್ದೆ. ಅದನ್ನೂ ನೀನು ಮಾಡಲಿಲ್ಲ; 'ಅಬ್ಬಾ' ಎಂದು ನಾನು ಹೆದರಿದೆ ನಿನ್ನ ಎದೆಯ ಕರ್ಕಶತೆಯನ್ನು ಕಂಡು!

ರೂಪರಾಣಿಯ ಮುಖವು ಕಮಲದಂತೆ ಕೆಂಪಾಗಿತ್ತು. ದೇವಗಂಗೆಯಂತೆ ಧಾರಾಕಾರವಾಗಿ ಕಣ್ಣೀರು ಕಪೋಲಗಳ ಮೇಲಿಂದ ಇಳಿದು ಬೀಳುತ್ತಿತ್ತು. ಸಾಮಾನು ಸಹಿತ ಸಿಕ್ಕಿಬಿದ್ದ ಕಳ್ಳನಂತಾಗಿತ್ತು ಅವಳ ಅವಸ್ಥೆ. ಮಾನಭಂಗಪೊಡನೆ ಗಂಡನ ಮನಸ್ಸು ಮುಳಿಗೊಳ್ಳುವಂತಾಯಿತೆಂಬ ಚಿಂತೆ, ತನ್ನ ತಪ್ಪು ಭಾವನೆಗಳ ಬಗ್ಗೆ ಪಶ್ಚಾತ್ತಾಪ ಈ ಎಲ್ಲ ಭಾವದ ಭಾರದಿಂದ ಕುಸಿದುಹೋಗಿ ಗಳಗಳನೆ ಅಳುತ್ತ ಗಂಡನ ಎದೆಗೆ ತಲೆ ಚಾಚಿದಳು. ವಿಶಾಲವಾದ ಅವನ ಎದೆ ಆ ಪುಟ್ಟ ತಲೆಗೆ ಆಶ್ರಯವಿತ್ತು, ಸಂತೈಸಿತು, ಕ್ಷಮೆ ಕೊಟ್ಟಿತು, ಆದರೆ ಅಲ್ಲಿಯವರೆಗೆ ತಾನು ಹೇಳಿದ್ದೆಲ್ಲ ಕೇವಲ ತನ್ನ ಕಲ್ಪನೆಯೇ ಇದ್ದರೂ ಇರಬಹುದೆಂದು ಕೊಂಡಿದ್ದ ಮದನನಿಗೆ ಹೆಂಡತಿಯ ಈ ತಪ್ಪೊಪ್ಪಿಗೆ ಮತ್ತಷ್ಟು ಪಶ್ಚಾತ್ತಾಪಮಾಡಿತು. ತನ್ನ ಹೆಂಡತಿ ಕೇವಲ ಮುಗ್ಧೆಯಲ್ಲದೆ ಇಂಥ ಮತ್ಸರ, ಮಾಯೆ, ಭೇದಗಳ ತವರೆಂಬುದನ್ನು ಒಪ್ಪಲು ಅವನ ಮನಸ್ಸು ಸಿದ್ಧವಿರಲಿಲ್ಲ. ಆದರೆ ಈಗ? ಎಲ್ಲವೂ ಬೆಳಕಿಗೆ ಬಂದಿತು. ಅನಿರೀಕ್ಷಿತವಾಗಿ ತನ್ನ ಕಲ್ಪನೆ ನಿಜವೆನಿಸಿತು, ಎಂದು ಚಿಂತಾಮಗ್ನನಾಗಿ ಅವನು ಅಳುತ್ತಿದ್ದನ್ನು ರೂಪರಾಣಿ ಕಾಣಲಿಲ್ಲ. ತನ್ನ ಭಾವೋದ್ರೇಕ. ಶಮನಕ್ಕಾಗಿ ಪತಿಯ ಎದೆಯನ್ನು ಆಶ್ರಯಿಸಿದ ಅವಳಿಗೆ ಅದರತ್ತ ಲಕ್ಷ್ಯವೇ ಇರಲಿಲ್ಲ.

ಮುಸಿನಗೆ ನಕ್ಕು ಪತ್ನಿಯನ್ನು ಸಂತೈಸಿದ ಮದನನು, ಊಟ ತೀರಿಸಿ ಆಫೀಸಿಗೆಂದು ಹೊರಬಿದ್ದನು. ಆಫೀಸಿಗೆ ರಜೆ ಬರೆದು ಕಳಿಸಿ, ಎತ್ತಲೋ ಕಾಲು ಎಳೆದತ್ತ ತಿರುಗಾಡುತ್ತ ಹೊರಟನು ನಗರದ ಹೊರಗಿನ ಪಾರ್ಕೊಂದನ್ನು ಪ್ರವೇಶಿಸಿ ಮಂಕನಂತೆ ಅಲ್ಲೇ ಕುಳಿತುಬಿಟ್ಟನು. ಮಧ್ಯಾಹ್ನವಾಯಿತು, ಸಂಜೆಯಾಯಿತು, ರಾತ್ರಿಯಾಯಿತು, ಬೆಳಗಾಯಿತು!

ರೂಪರಾಣಿ ಗಾಬರಿಯಾದಳು. ಅತ್ತಳು. ಆ ಬೀದಿ ಮನೆಯ ಹುಡುಗರನ್ನು ಆಫೀಸಿಗೆ ಕಳಿಸಿ ಇಲ್ಲವೆಂಬ ಉತ್ತರವನ್ನು ಎದುರಿಸಿ ಧೈರ್ಯಗುಂದಿದಳು. ತನ್ನ ಕ್ಷುದ್ರ ಭಾವನೆಗಳಿಗಾಗಿ ತನ್ನನ್ನೇ ತಾನು ಬೈದುಕೊಂಡಳು, ಶಪಿಸಿಕೊಂಡಳು. ಆದರೆ ದಿನದ ಮೇಲೆ ದಿನ ಉರುಳಿದರೂ ಗಂಡನ ಪತ್ತೆಯೇ ಇಲ್ಲ. ಪೋಲೀಸರ ಕಡೆ ಸೇರಿದರೂ ಪಾರ್ಕನ್ನು ಹಾರಿಯಲ್ಲಿ ಅವನು ಸುಗ್ಗಿದ್ದನು. ಅಲ್ಲೂ ಮದನನು ಇದ್ದಿರಲಿಲ್ಲ. ರೂಪರಾಣಿಯ ತಂದೆ ಮಗಳಿಂದ ಪತ್ರ ಬರದುದನ್ನು ಕಂಡು ಏನಾದರೂ ಅನಾಹುತ ಸಂಭವಿಸಿರಬಹುದೆಂದು ಊಹಿಸಿ ೨ ತಿಂಗಳಲ್ಲಿ ಮಗಳನ್ನು ಅಲ್ಲಿಂದ ಅತಿದುಃಖದಿಂದ ಮನೆಗೆ ಕರೆದೊಯ್ದರು. ಜಾತಕ ನೋಡಿಸಿದರು. ಮದನನಿಗೆ ಅವನ ಜಾತಕದ ಪ್ರಕಾರ ವೈರಾಗ್ಯಯೋಗವಿತ್ತು. ಅದನ್ನು ಪರಿಹರಿಸಲು ಶಾಂತಿಮಾಡಿಸಿದರು. ಏನು ಮಾಡಿದರೂ ಮದನನ ಸುಳಿವು ಪತ್ತೆಯಿಲ್ಲ.

ಇಷ್ಟಕ್ಕೆ ಮೂರು ವರ್ಷಗಳು ಜಾರಿದ್ದವು. ರೂಪರಾಣಿಯ ರೂಪಗರ್ವದ ಜೊತೆಗೆ ರೂಪವೇ ಮಾಯವಾಗಿ ಹೋಗಿತ್ತು. ಪಸುಗೂಸಿನಂತೆ ಅಳುವುದನ್ನು ಅವಳು ಅಂದಿಗೂ ಬಿಟ್ಟಿರಲಿಲ್ಲ.

ಜಾತಕದಲ್ಲಿದ್ದಂತೆ ಪಾರ್ಕಿನಲ್ಲಿ ಮದನನು ಕುಳಿತಿದ್ದಾಗ ವೈರಾಗಿಯೊಬ್ಬ ಭೆಟ್ಟಿಯಾಗಿ ಅವನನ್ನು ತನ್ನ ಜೊತೆಗೆ ತೀರ್ಥಯಾತ್ರೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದ. ೩ ವರ್ಷಗಳಲ್ಲಿ ಅವನು ಹಿಂದುಸ್ತಾನವನ್ನು ಒಂದು ಸುತ್ತು ಸುತ್ತಿ ಊರಿಗೆ ಅಭಿಮುಖನಾದನು. ಊರ ನೆನಪಾದಕೂಡಲೆ ಅಲ್ಲಿಗೆ ಹೋಗುವುದು ಬೇಡವೆನಿಸಿತ್ತು, ಆದರೆ ತನ್ನ ಔದಾರ್ಯವನ್ನು ಮೂಲೆಗೊತ್ತಿ ಹೊಸಗೇಡಿಯಂತೆ ಚಿಕ್ಕವಳಾಗಿದ್ದ ಹೆಂಡತಿಯನ್ನು ಮನೆಯಲ್ಲಿ ಅಸಹಾಯಳನ್ನಾಗಿ ಬಿಟ್ಟು ಹೋದದ್ದು ನೆನಪಾದ ಕೂಡಲೆ ವಾಯುವೇಗದಿಂದ ಮನೆಗೆ ನಡೆದ. ಅಲ್ಲಿ ಅವಳನ್ನು ಕಾಣದೆ ವಿಹ್ವಲನಾಗಿ ಮಾವನ ಮನೆಗೆ ಧಾವಿಸಿದ. ಗುರುತೇ ಸಿಗದ ಹಾಗಾಗಿದ್ದ ತನ್ನ ರೂಪರಾಣಿಯನ್ನು ಎತ್ತಿಕೊಂಡು ಸಂತೈಸಿದ. ಆಗ ರೂಪರಾಣಿಯು ನಿಜವಾದ ರೂಪರಾಣಿಯಾಗಿ ನಿರ್ಮಲತೆಯ ಕಳೆಯಿಂದ ತುಂಬಿತುಳುಕಿದಳು! "ನನ್ನ ರೂಪರಾಣಿ!" ಎಂದನು ಪ್ರೇಮೋಜ್ವಲ ಮುಖದಿಂದ. "ರೂಪವೆಂದರೆ ಈಗ ನಿನ್ನ ಮುಖದಲ್ಲಿ ಕಾಣುವ ಈ ನಿರ್ಮಲ ಭಾವವೇ—ನನ್ನ ರಾಣಿ!" ಎಂದು ಮದನನು ಸುರಿಸಿದ ಆನಂದಬಾಷ್ಪಗಳು ರೂಪರಾಣಿಯ ಕಪೋಲಗಳನ್ನು ತೊಳೆದವು!

ಹರಟೆ

ಮುನಿಸಿಪಾಲಿಟಿಯವರೇನು ಮೂರ್ಖರೆ?

ಬರೆದವರು: ಶ್ರೀ. ಮಾಧವ ಕೌಜಲಗಿ, ಬಿ. ಕಾಂ.

"ನಮ್ಮೂರ ಮುನಿಸಿಪಾಲಿಟಿಯವರು ಊರಲ್ಲಿಯ ನಾಗರಿಕರ ಸುಖ ಸೌಕರ್ಯಗಳ ಸಲುವಾಗಿ ಏನೂ ಲಕ್ಷ ಹಾಕುವದಿಲ್ಲ. ಸದಸ್ಯರು ಅಧ್ಯಕ್ಷರು ಚುನಾವಣೆಗಾಗಿಯೇ ಧಡಪಡಿಸುತ್ತಾರೆ. ಸಾರ್ವಜನಿಕರ ಹಣವನ್ನು ಅಲಕ್ಷ ಹಾಗೂ ಸಲಕ್ಷ ಪೂರ್ವಕವಾಗಿ ಅಪವ್ಯಯ ಮಾಡುತ್ತಾರೆ. ವೃತ್ತಪತ್ರಿಕೆಗಳು ಈ ವಿಷಯದಲ್ಲಿ ಹೆಚ್ಚು ಆಸ್ಥೆವಹಿಸಿ ಸನ್ಮಾರ್ಗಕ್ಕೆ ಎಳೆಯಬೇಕು."

ಓರ್ವ ಸಂತ್ರಸ್ತನಾಗರಿಕ

ಎಂದು ಬರೆದ ಒಂದು ಲೇಖದನ್ನು ವೃತ್ತಪತ್ರದಲ್ಲಿ ನೋಡಿದೆ. ಆ ಸಂತ್ರಸ್ತ ಪರದೇಶಿ ನಾಗರಿಕನ ಸಲುವಾಗಿ ಬಹಳ ಕನಿಕರ ಉಂಟಾಯಿತು. ನಾನೂ ಖಾದಿಧಾರಿ ಇದ್ದುದ್ದರಿಂದ ನನಗೆ ಕಳ್ಳನಿದ್ದಷ್ಟು, ಅಹಿಂಸಾರೀತಿಯಲ್ಲಿ ಆ ನಾಗರಿಕನ ಅನಾನುಕೂಲತೆಗಳನ್ನು ನಿವಾರಣೆ ಮಾಡಿ, ಪದರಿಗೆ ಬಂದಷ್ಟು ಸಾರ್ವಜನಿಕ ಕಾರ್ಯದ ಶ್ರೇಯಸ್ಸನ್ನು ಪಡೆಯಬೇಕೆಂದು ನಿಶ್ಚಯಿಸಿದೆ. (ಈ ಸಾರ್ವಜನಿಕ ಸೇವೆಯ ಪ್ರತಿಫಲವು ನನಗೆ ಇದೇ ಲೋಕದಲ್ಲಿ ಹಾಗೂ ಇದೇ ಜನ್ಮದಲ್ಲಿ ಸಿಕ್ಕೇ ಸಿಗುವದೆಂದು ನನಗೆ ಪೂರ್ಣವಿಶ್ವಾಸ ಮುಂದೆ ನಾನು ಮಾಡಿದ ಸ್ವಲ್ಪ ಕಾರ್ಯವನ್ನು ಹತ್ತುಪಟ್ಟು ಹೊಗಳಿ ಕಡ್ಡಿಯನ್ನು ಗುಡ್ಡ ಮಾಡುವ ನಮ್ಮ ಕೆಲವು ವೃತ್ತಪತ್ರಗಳೂ ಈ ಕೆಲಸದಲ್ಲಿ ಸೇರಬಹುದೆಂದು ನನ್ನ ತಿಳುವಳಿಕೆಯಿತ್ತು. ಅದರಿಂದ ನನ್ನ ಮುಂದಿನ ಆಶೆ ಆಕಾಂಕ್ಷೆಗಳಿಗೂ ಸೋಪಾನಗಳಾಗುತ್ತಿತ್ತು ಮತ್ತು ಆ ವೃತ್ತಪತ್ರಗಳಿಗೂ "ಅತ್ಯಂತ ಜನಪ್ರಿಯ" ಅಥವಾ "ಉಜ್ವಲ ರಾಷ್ಟ್ರೀಯ" ಮುಂತಾದ ಬಿರುದು ಬಾವಲಿಗಳು ಸಿಗಬಹುದಾಗಿತ್ತು.

ಇಷ್ಟೆಲ್ಲ ಮನಸಿನ ಮಂಡಿಗೆಗಳನ್ನು ಮಾಡಿಕೊಂಡು ಒಳ್ಳೆ ಧೈರ್ಯಮಾಡಿ ಅಂದು ಮುನಸಿಪಾಲಿಟಿ ಅಧ್ಯಕ್ಷರನ್ನು ಎದುರಿಸಿ ಅವರಿಗೆ ನಗರ ಸ್ವಚ್ಛತೆ, ನಾಗರಿಕ ಸುಖ ಸೌಕರ್ಯ, ಇಂಗ್ಲಂಡ ಅಮೇರಿಕಾ, ರಶಿಯಾದಲ್ಲಿ (ನನ್ನ ಕಲ್ಪನೆಗೆ, ತೋಚಿದಂತೆ) ಇರುವ ಮುನಿಸಿಪಾಲಿಟಿ ಮುಂತಾದ ವಿಷಯಗಳ ಒಂದು ಭಾರಿ ಉಪನ್ಯಾಸವನ್ನೇ ಬಿಟ್ಟುಬಿಟ್ಟೆ.

ಅವರು ನಡುವೆ ಬಾಯಿಹಾಕಿ ನನ್ನನ್ನೇನೂ ತಡೆಯಲಿಲ್ಲ. ಅದರಿಂದ ನನ್ನ ಭಾಷಣದ ಪರಿಣಾಮ ಚೆನ್ನಾಗಿ ಆಗಹತ್ತಿದೆಯೆಂದು ನಾನು ತಿಳಿದು ಮತ್ತಷ್ಟು ಉತ್ಸಾಹದಿಂದ ಹೇಳತೊಡಗಿದೆ. ಕಡೆಗೊಮ್ಮೆ ಮುಗಿಸಿದೆ.

ಅಧ್ಯಕ್ಷರು ತಮ್ಮ ಚಾಳೀಸನ್ನು ಹಣೆಯ ಮೇಲೆ ಸರಿಸಿ ಹೀಗೆ ಹೇಳಲು ಉಪಕ್ರಮಿಸಿದರು.

"ನೀವನ್ನುವದೆಲ್ಲ ತಿಳಿತರಿ, ತಿಳಿದು ಭಾಳ ದಿನಾ ಆತು ಮುನಸಿಪಾಲಿಟಿ ಅಧ್ಯಕ್ಷನಿಗೆ ಅಷ್ಟೂ ತಿಳಿಯುದಿಲ್ಲಂತ ತಿಳಿದೀರೇನು ನೀವು?

"ಆದರ ನಮಗ ಇನ್ನೂ ಅನೇಕ ವಿಷಯಗಳನ್ನು ವಿಚಾರ ಮಾಡಬೇಕಾಗತದ, ಇಂಗ್ಲಂಡ ಅಮೇರಿಕಾದಾಗ ಹಿಂಗ ಇರತದ ಹಾಂಗ ಇರತದ ಅಂತ ಏನು ಹೇಳಿದಿರಲಾ ಅದು ನಮಗೂ ಗೊತ್ತಿರತದ; ನಮ್ಮ ಲಾಯಬ್ರರಿಯಾಗ ಅದರ ಮ್ಯಾಲ ಎಷ್ಟು ಪುಸ್ತಕ ಅವ ತೋರಿಸಲೇನು ನಿಮಗ ಬೇಕಾದರೆ? ವರ್ಷಕ ಸಾವಿರ ರೂಪಾಯಿ ಪುಸ್ತಕದ ಹೆಸರಲೆ ಖರ್ಚು ಅದ. ಆದರ ಅವು ಅಮೇರಿಕಾ ಇಂಗ್ಲಂಡ ಅಧರ ನಮ್ಮದು ಹಿಂದುಸ್ತಾನರೆಪಾ; ಅದು ರೊಳಗೂ ಕರ್ನಾಟಕ! ಅವರದು ಅವರಿಗೆ ನಮ್ಮದು ನಮಗ. ಖರೆ ಖರೆ ಅಂದರ ಹಿಂದಸ್ತಾನದಾಗಿನ ಅದರೊಳಗೂ ಕರ್ನಾಟಕದಾಗಿನ ಮುನಸಿಪಾಲಿಟಿ ಪ್ರಸಿಡೆಂಟರು ಅಮೇರಿಕಾದ ಪ್ರಸಿಡೆಂಟ ಟ್ರೂಮನಗಿಂತಾ ಹೆಚ್ಚು ವಿಚಾರ ಮಾಡಿ ಕೆಲಸ ಮಾಡಬೇಕಾಗತದ. ಗೊತ್ತದ ಏನು ನಿಮಗ?

ಭೂಗತ ಗಟಾರದ ಯೋಜನೆ

"ಈಗ ನಿಮಗ ಹೇಳತೀನಿ ಕೇಳರಿ. ಹಿಂದೊಮ್ಮೆ ನಾವು ಈ ಊರಾಗ Under ground drainage ನೆಲಮನಿ ಗಟಾರ ಮಾಡಬೇಕೆಂದು ವಿಚಾರ ಮಾಡಿದೆವು. ಆಗ ಅನೇಕ ಸಂಘ ಸಂಸ್ಥೆಗಳ ಹಾಗೂ ನಮ್ಮ ವಿರೋಧಿ ಪಕ್ಷದ ಸಭಾಸದರಿಂದ, "ಮೊದಲು, ಓಣಿಗೆ ಹತ್ತು ಪಾಯಿಖಾನೆಗಳನ್ನು ಕಟ್ಟಿ ನಂತರ ಬೇಕಾದರೆ ನಿಮ್ಮ ನೆಲಮನಿ ಗಟಾರ ಮಾಡಿಕೊಳ್ಳಿರಿ ಎಂದು ಮನವಿಗಳು ಬಂದವು. ಅದಕ್ಕೆ ನಾವು ಆ ವಿಚಾರವನ್ನು ನಿರುಪಾಯವಾಗಿ ಬಿಡಬೇಕಾಯಿತು.

ಅಗಲ ರಸ್ತೆಯ ಯೋಜನೆ

"ಒಮ್ಮೆ ನಮ್ಮೂರೊಳಗಿನ ಓಣಿಗಳನ್ನು ಹೆಚ್ಚು ಅಗಲವಾಗಿ ಮಾಡಿಸಬೇಕೆಂದು ವಿಚಾರ ಮಾಡಿದೆವು. ಆಗ ನಮ್ಮ ಮೆಂಬರರೊಳಗಿನ ಬಹುಸಂಖ್ಯಾಕರ ಸ್ವಂತ ಮನೆಗಳು ಸಣ್ಣ ಓಣಿಗಳಲ್ಲಿಯೇ ಇದ್ದುದ್ದರಿಂದ, ಆ ಠರಾವಿಗೆ ಬಹುಮತ ಸಿಗಲಿಲ್ಲ. ಅದರಿಂದ ಅದೂ ಬಿದ್ದುಹೋಯಿತು.

ನಗರ ಸ್ವಚ್ಛತೆಯ ಯೋಜನೆ

"ಊರಲ್ಲಿಯ ಕಸದ ಕೊಳಚಿ ಮುಂತಾದವುಗಳನ್ನು ಅಲ್ಲಲ್ಲಿ ಒಗೆಯುವದನ್ನು ನಿಲ್ಲಿಸಬೇಕೆಂದು, ಕೆಲವು ಅಂತರದ ಮೇಲೆ ಕಸದ ಕೂಪಗಳನ್ನು ಕಟ್ಟಿಸಬೇಕೆಂದು ನಿಶ್ಚಯಿಸಿದೆವು. ಅದಕ್ಕೆ ಕೆಲವು ಸಭಾಸದರು 'ನಾವು ಹಾಗೆ ಮಾಡಿದರೆ, ಊರಲ್ಲಿಯ ನಾಯಿ ಕತ್ತೆ ಇತರ ಪ್ರಾಣಿಗಳು ಆಹಾರವಿಲ್ಲದೆ, ಹಾಹಾಕಾರವನ್ನೆಬ್ಬಿಸಬಹುದೆಂದು ಅಭಿಪ್ರಾಯ ಕೊಟ್ಟರು. ದೂರ ದೂರ ಅಂತರದಲ್ಲಿ ಕಸದ ಕೂಪಗಳನ್ನು ಕಟ್ಟಿಸಿದರೆ ಜನರಲ್ಲಿ ಕಸವನ್ನು ಹೊರಗೆ ಚೆಲ್ಲುವ ಪ್ರವೃತ್ತಿಯೇ ಕಡಿಮೆಯಾಗಿ, ದೇಶದಲ್ಲಿ ಕೆಲವು ಪ್ರಮಾಣದಿಂದ ಗೊಬ್ಬರದ ಕೊರತೆ ಬೀಳಬಹುದು. ಅದರಿಂದ ಸರಕಾರದ 'ಹೆಚ್ಚು ಬೆಳೆಯಿರಿ' ಯೋಜನೆಗೆ ಭಂಗ ಬರಬಹುದೆಂದು ಕೆಲವರು ಹೇಳಿದರು. ಅಂತೂ ಅದೂ ಉರುಳಿತು.

ಡಾಂಬರ ರಸ್ತೆಯ ಯೋಜನೆ

"ಊರೊಳಗಿನ ಬೀದಿಗಳು ಸರಿಯಾಗಿಲ್ಲವೆಂದು ನಿಮ್ಮಂತೆ ಅನೇಕರು ನಮಗೆ ಹೇಳಿದ್ದಾರೆ. ಟಾರ ರೋಡ (ಡಾಂಬರ ರಸ್ತೆ) ಮಾಡಿದರೆ ಸರಿ ಅಂತ ನೀವು ಹೇಳತೀರಿ. ಮಾಡಿದ್ನ್ಯಾದರಿ ಅಂತ ಟಾಂಗಾದವರು ಹೇಳತಾರ. ಡಾಂಬರ ರಸ್ತೆಯೊಳಗೆ ಕುದರಿ ಕಾಲು ಜಾರಿ ಬೀಳುವ ಸಂಭವ ಹೆಚ್ಚು; ಅದಕ್ಕೆ ಅಂಥಾದ್ದೇನು ಮಾಡಬಾರದೆಂದು ಅವರು ಅಗ್ರಹದ ವಿನಂತಿ ಮಾಡಿಕೊಂಡಿದ್ದಾರೆ. ಅದಕ್ಕಾಗಿ ನಮ್ಮೂರೊಳಗೆ ನ್ಯಾಯಾರ್ಕಪಣೆ, ಜನರು ಶಾಂತ

—"ಗಣೇಶ ಪುಟಿಕೆ"

ದೇಶಾಂತರಗಳಿಂದ

ಸಂಯುಕ್ತ ಯುರೋಪು?

ಇಂಟರ್‌ಲೇಕನ್ನಿನಲ್ಲಿ ಕೂಡಿದ ಯುರೋಪಿಯನ್ ಪಾರ್ಲಿಮೆಂಟರೀ ಕಾಂಗ್ರೆಸ್ಸು ಈಗ ಕೊನೆಗೊಂಡಿತು. ಆ ಕಾಂಗ್ರೆಸ್ಸಿಗೆ ಮಾರ್ಶಲ್ ಯೋಜನೆಗೆ ಒಪ್ಪಿಗೆಯಿತ್ತ ಐರೋಪ್ಯ ರಾಷ್ಟ್ರಗಳು ಮತ್ತು ಪಶ್ಚಿಮ ಜರ್ಮನಿಯ ೨೦೦ ಪ್ರತಿನಿಧಿಗಳು ಹಾಜರಿದ್ದರು. ಅವರು ಒಂದು ಯೋಜನೆಯನ್ನು ತಯಾರಿಸಿ ಅದರ ವಿಮರ್ಶೆಗಾಗಿ ಐರೋಪ್ಯ ಸಭೆಯೊಂದನ್ನು ಕೂಡಿಸಬೇಕೆಂದಿದ್ದಾರೆ. ಯೋಜನೆಯಲ್ಲಿ ೧೦ ವಿಷಯಗಳಿವೆ.

(೧) ಮೊದಲು ಮಾರ್ಶಲ್ ಯೋಜನೆಯನ್ನು ಸ್ವೀಕರಿಸುವ ೧೬ ರಾಷ್ಟ್ರಗಳು ಮತ್ತು ಪಶ್ಚಿಮ ಜರ್ಮನಿ ಇವು ಐರೋಪ್ಯ ಸಂಯುಕ್ತ ಸರಕಾರವೊಂದನ್ನು ಸ್ಥಾಪಿಸತಕ್ಕದ್ದು. ಅನಂತರ ಉಳಿದ ಯಾವ ರಾಷ್ಟ್ರವೇ ಆದರೂ ಅದರ ಸದಸ್ಯತ್ವ ಪಡೆಯಬಹುದು.

(೨) ಸಮಸಂಖ್ಯಾಕ ಸದಸ್ಯರುಳ್ಳ ೨ ಮನೆಗಳಿರುವ ಯುರೋಪಿಯನ್ ಪಾರ್ಲಿಮೆಂಟನ್ನೂ ಒಂದು ಶಿಷ್ಟಮಂಡಲವನ್ನೂ ರಚಿಸತಕ್ಕದ್ದು.

(೩) ಪಾರ್ಲಿಮೆಂಟಿಗೆ ಸಂಯುಕ್ತರಾಜ್ಯದ ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಆಡಳಿತ ಇವುಗಳ ಸಲುವಾಗಿ ಕಾಯದೆಗಳನ್ನು ರಚಿಸುವ ಅಧಿಕಾರವಿರತಕ್ಕದ್ದು.

(೪) ಎರಡೂ ಮನೆಗಳಿಂದ ಆರಿಸಲ್ಪಟ್ಟ ಸದಸ್ಯರ ಸಂಯುಕ್ತ ಸಮಿತಿಗೆ ಕಾರ್ಯನಿರ್ವಾಹಕ ಅಧಿಕಾರವಿರಬೇಕು.

(೫) ನ್ಯಾಯನಿರ್ಣಯಕ ಅಧಿಕಾರವು ಒಂದು ಸುಪ್ರೀಂ ಕೋರ್ಟಿಗಿರತಕ್ಕದ್ದು.

(೬) ಸುಂಕದ ಖಾತೆಯನ್ನು ಸಂಯುಕ್ತ ಸರಕಾರ ವಶಪಡಿಸಿಕೊಂಡು ಏಕರೂಪದ ಸುಂಕವನ್ನು ಅಮಲಿಗೆ ತರಲಾಗುವುದು.

(೭) (ಕ) ಸಂಯುಕ್ತ ಸರಕಾರದ ಪಾರ್ಲಿಮೆಂಟಿನ ಒಪ್ಪಿಗೆಯಿಲ್ಲದೆ ಯಾವ ಸದಸ್ಯರಾಜ್ಯವೂ ಭೂಜಲವಾಯು ಬಲವನ್ನು ಕಟ್ಟಕೂಡದು, ಇಟ್ಟುಕೊಳ್ಳಲೂಕೂಡದು.

(ಖ) ಸಂಯುಕ್ತರಾಜ್ಯದ ಎಲ್ಲ ನಾಗರಿಕರೂ ಸಮಾನ ನಾಗರಿಕ ಹಕ್ಕುಗಳನ್ನು ಅನುಭವಿಸುವವರಾಗಬೇಕು.

(೮) ಐರೋಪ್ಯ ಸಭೆಯು ಒಂದು ಸಮಿತಿಯನ್ನು ನಿಯಮಿಸಿ ಅದನ್ನು ಸಂಯುಕ್ತ ರಾಜ್ಯಕ್ಕೆ ಸೇರಿದ ರಾಜ್ಯಗಳ ಸಾಗರೋತ್ತರ ಮಾಂಡಲಿಕ ರಾಜ್ಯಗಳ ಸಮಸ್ಯೆಗಳನ್ನು ಅಭ್ಯಸಿಸಲು ಕಳಿಸಲಾಗುವುದು.

(೯) ಪಾರ್ಲಿಮೆಂಟು ಹೊಸ ರಾಜ್ಯಗಳಿಗೆ ಪ್ರವೇಶ ಕೊಡಬಹುದು.

(೧೦) ಎರಡೂ ಮನೆಗಳ ಸಂಪೂರ್ಣ ಬಹುಮತವಿಲ್ಲದೆ ರಾಜ್ಯಘಟನೆಯಲ್ಲಿ ಯಾವ ಬದಲಾವಣೆಯನ್ನೂ ಮಾಡಲಾಗದು.

ಹಂಗುದೊರೆದ ಯುಗೋಸ್ಲೇವಿಯ

ಯುಗೊಸ್ಲೇವಿಯದ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯದರ್ಶಿಯಾದ ಮಿಲೋವನ್ ಡಿಲಾಸನು ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಸಂಘದ ಎಲ್ಲ ಸಂಬಂಧವನ್ನೂ ಕಡಿದುಕೊಂಡು ತಮ್ಮ ಪಕ್ಷ ಸ್ವತಂತ್ರವಾಯಿತೆಂದು ಸಾರಿದ್ದಾನೆ ಎಂದು ಅಲ್ಲಿಯ [illegible] ಪತ್ರಿಕೆ ಪ್ರಕಟಿಸಿದೆ.

"ಸ್ವಶಕ್ತಿಯಿಂದಲೇ ತನ್ನ ದೇಶವು ಸಾಮ್ಯತತ್ವವನ್ನು ಸಾಧಿಸಿಕೊಳ್ಳುತ್ತದೆ, ನಮ್ಮ ಕೇಂದ್ರಸಮಿತಿಯನ್ನು ಯಾವ ಶಕ್ತಿಯೂ ಒತ್ತಾಯವೂ ಅದ್ದಾದಿಸಿದಂತೆ ಮಾಡಲಾರದು. ನಾವೆಂದೂ ಮಾರ್ಕ್ಸಿಜಂ ಮತ್ತು ಲೆನಿನಿಜಂ ಬಿಟ್ಟುಹೋಗತಕ್ಕವರಲ್ಲ" ಎಂದು ಕಾರ್ಯದರ್ಶಿ ತನ್ನ ಒಂದು ಭಾಷಣದಲ್ಲಿ ಹೇಳಿದ್ದಲ್ಲದೆ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಸಂಘ ಹೊರಿಸಿದ ಆಪಾದನೆಗಳೆಲ್ಲ ನೀಚಬುದ್ಧಿಜನ್ಯವೆಂದು ಧಿಕ್ಕರಿಸಿದನು.

ಸಿಂಕ್ಯಾಂಗಿನಲ್ಲಿ ಸೋವಿಯಟ್ ಪ್ರವೇಶ?

ಚೀನದ 'ಸಕ್ಸ' ಎಂಬ ಸುದ್ದಿ ಸಂಸ್ಥೆ ಸೋವಿಯಟ್ ದಲವೊಂದು ವಾಯವ್ಯ ಚೀನದ ಸಿಂಕ್ಯಾಂಗ್ ಪ್ರಾಂತವನ್ನು ಆಕ್ರಮಿಸಿದೆ ಎಂದು ಪ್ರಕಟಿಸಿದೆ.

ಸೋವಿಯಟ್ ಗುರುತಿನ ವಿಮಾನಗಳು ಪ್ರಜಾರಾಜ್ಯದ ಬಲವನ್ನು ಬೆನ್ನಟ್ಟುತ್ತಿಂಬ ದೂರನ್ನು ರಶಿಯ ಅಲ್ಲಗಳೆದಿದೆ.

ಚೀನೀ ಮಿಲಿಟರಿ ಸುದ್ದಿ ಶಾಖೆಯು ಅಂಥ ಅಧಿಕೃತ ವರದಿ ಬಂದಿಲ್ಲವೆಂದು ಹೇಳಿದೆ.

ದಿನೇ ದಿನೇ ಚೀನದ ಸರಕಾರ ದುರ್ಬಲವಾಗುತ್ತಿದೆ. ಮೊನ್ನೆ ಮೊನ್ನೆ ಮಡಿದ ಪ್ರಸಿದ್ಧ "ಕ್ರಿಶ್ಚನ್ ಜನರಲ್" ಎನಿಸಿದ ಫೆಂಗ್ ಯುಹ್ಸ್ಯಾಂಗನ ಸಂಘದವರು ಕಮ್ಯುನಿಸ್ಟ್ ಪಡೆಯನ್ನು ನಡೆಸುತ್ತಿದ್ದಾರೆ. ಕಮ್ಯುನಿಸ್ಟರ ಬಳ್ಳವನ್ನು ಒಡೆಯಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಈ ಯಾದವಿಯ ದೆಸೆಯಿಂದ ಮುಗ್ಧಜನತೆ ಮನೆಯಲ್ಲೇ ಮಡಿವಷ್ಟು ದುಃಸ್ಥಿತಿ ದೇಶಕ್ಕೆ ಬಂದಿದೆ.

ಬ್ರಹ್ಮೀ ಪರಿಸ್ಥಿತಿ

ಬ್ರಹ್ಮದೇಶದಲ್ಲಿ ಸರಕಾರವು ಕಮ್ಯುನಿಸ್ಟ್ ದಂಗೆಗಾರರೊಡನೆ ಅವಿಶ್ರಾಂತ ಹೋರಾಟ ಸಾಗಿಸಿರುವುದು ವಿದಿತವಿದೆ. ಈಗ ರಂಗೂನಿನಿಂದ ವಾಯವ್ಯಕ್ಕಿರುವ ಪ್ರೋಂ ಪಟ್ಟಣದತ್ತ ಸರಕಾರೀ ದಲ ಧಾವಿಸುತ್ತಿದೆ. ಆದರೆ ಮಳೆ ಮೋಡಗಳು ಹೆಚ್ಚಾಗಿ ಅದರ ಓಟ ಮಂದವಾಗುವಂತಾಗಿದೆ.

೫೦೦ ಜನ ದಂಗೆಗಾರರಿಗೂ ಸರಕಾರೀ ದಲಕ್ಕೂ ತಾಂತಾಬಿನ್ನಿನಲ್ಲಿ ಕೈ ಕೈ ಶುರುವಾಗಿ ಶತ್ರುಗಳಲ್ಲಿ ೩೩ ಜನ ಮಡಿದರು. ರಂಗೂನಿಗೂ ಪ್ರೋಮಿಗೂ ನಡುವಣ ೨೦೦ ಮೈಲು ವಿಸ್ತಾರದ ತರವಾಡಿ ಪ್ರದೇಶದಲ್ಲಿ ಈಗ ಶಾಂತಿ ನೆಲೆಗೊಳ್ಳುತ್ತಿದೆ ಎಂದು ಸರಕಾರೀ ಸುದ್ದಿ ಬಂದಿದೆ.

ಸರಕಾರದ 'ಕಾರೆನ್' ದಲ ಯುದ್ಧಕಾಲದಲ್ಲಿ ಬ್ರಿಟಿಶಪರವಾಗಿತ್ತು. ಈಗ ಸರಕಾರದ ಭಕ್ತ ಎನಿಸಿ ಶೌರ್ಯದಿಂದ ದಂಗೆಗಾರರನ್ನು ಎದುರಿಸುತ್ತಿದೆ.

ಬರ್ಲಿನ್ ಪಾಡಿಕ

ಬರ್ಲಿನ್ನಿನ ಪಾಶ್ಚಾತ್ಯ ಭಾಗಗಳ [illegible] ನಗರದ [illegible] ಬರ್ಲಿನ್ನನ್ನು [illegible] ಇತ್ತೀಚೆಗೆ ಪ್ರಯತ್ನಿಸಿದ ಸುದ್ದಿ ಬಂದಿದೆ. ಈ ಸಭೆಯಲ್ಲಿ [illegible] ಅಮೇರಿಕದ [illegible] ಬರ್ಲಿನ್ ಬಿಟ್ಟುಹೋಗುವುದಿಲ್ಲ "ಮುಕ್ತ ನಗರ [illegible]" ಎಂದು [illegible] ತಿಳಿಯಬಹುದಾಗಿದೆ.

ಚತುರ್ರಾಷ್ಟ್ರಗಳ ಸೇನಾಪತಿಗಳ ಸಮಿತಿಯು ಸಭೆ ಸೇರಿ ಇಡೀ ಬರ್ಲಿನ್ನಿನಲ್ಲಿ ರಶಿಯದ ಮಾರ್ಕ್ ನಾಣ್ಯಗಳನ್ನೇ ಬಳಸುವ ವಿಷಯವನ್ನು ಚರ್ಚಿಸಿತು. ಆದರೆ ಅವರ [illegible] ಒಪ್ಪಂದವಾಗಲಿಲ್ಲ. ಸೋವಿಯಟ್ ಜರ್ಮನಿಯ ವ್ಯಾಪಾರಪತ್ರಿಕೆಯೊಂದರ ಪ್ರಕಾರ ಆ ಸಮಿತಿ ಪಾಶ್ಚಾತ್ಯ ಮಾರ್ಕುಗಳನ್ನು ತಿರುಗ ಹಾಕಿ ರಶಿಯನ್ ಮಾರ್ಕುಗಳನ್ನು ಬಳಕೆಗೆ ತರುವ ಕೆಲಸವನ್ನು ಒಪ್ಪಿದೆಯೆಂದು ತಿಳಿಯುತ್ತದೆ.

ಕಳೆದ ೬ ರಲ್ಲಿ ರಶಿಯನ್ ಪೋಲೀಸರು ಬರ್ಲಿನ್ ನಗರಭವನವನ್ನು ಒಡೆದು ನುಗ್ಗಿ ಅಲ್ಲಿದ್ದ ಪಾಶ್ಚಾತ್ಯವಲಯದ ಪೋಲೀಸರಿಗೆ ಬೇಡಿ ಹಾಕಿ ಕರೆದೊಯ್ದರು. ಅಮೇರಿಕದ ವರ್ತಮಾನಪತ್ರಗಳನ್ನು ಪರಿಶೀಲಿಸಲು ರಶಿಯದ ಯೋಧರೂ ಅಲ್ಲಿ ಹೊಕ್ಕರು. ಇದಕ್ಕೆಲ್ಲ ಅಲ್ಲಿದ್ದ ಸಾಮಾನ್ಯ ಉಡುಪಿನವರ ಮೇಲೆ ರಶಿಯನ್ನರಿಗೆ ಬಂದ ಸಂಶಯವೇ ಕಾರಣ. ಅಮೇರಿಕದವರು ಅವರನ್ನು ಅಲ್ಲಿಂದ ದೂರ ಒಯ್ಯುವೆವೆಂದಿದ್ದರಲ್ಲದೆ, ಪರೀಕ್ಷೆಗೆ ಗುರಿಪಡಿಸಲು ತಯಾರಿದ್ದಿಲ್ಲ ಎಂಬುದನ್ನು ತಿಳಿದ ಮೇಲೆ ರಶಿಯನ್ನರು ಮೇಲೆ ಹೇಳಿದಂತೆ ಬಲಪ್ರಯೋಗ ಮಾಡಿದರು.

ದಕ್ಷಿಣ ಆಫ್ರಿಕದ ಸತ್ಯಾಗ್ರಹ

ರೈಲಿನಲ್ಲಿ ಸವರ್ಣ ವಿವರ್ಣರಿಗೆ ಬೇರೆ ಬೇರೆ ತಪ್ಪೆಗಳನ್ನು ಡಾ. ಮಾಲನ್ನರ ಬಿಳಿಸರಕಾರ ವ್ಯವಸ್ಥೆಗೊಳಿಸಿದ್ದರ ವಿರುದ್ಧವಾಗಿ ದಕ್ಷಿಣ ಆಫ್ರಿಕದ ಸವರ್ಣರು ಸತ್ಯಾಗ್ರಹ ಹೂಡಿದ್ದಾರೆ. ಗಾಡಿ, ರೈಲು, ಮುಂತಾದ ಬಿಳಿಯರಿಗೇ ಎಂದು ಮೀಸಲಿಟ್ಟ ವಾಹನಗಳಲ್ಲಿ ಅವರು ಅಗ್ರಹ ಪೂರ್ವಕ ಪ್ರವೇಶಿಸತೊಡಗಿದ್ದಾರೆ. ಪೋಲೀಸರು ನೋಡಿದರೂ ಸುಮ್ಮನಿದ್ದರು. ಬಿಳಿಯ ಕೆಲಸಗಾರರಲ್ಲಿ ಕೆಲವು ಪಕ್ಷದವರು ಈ ಸವರ್ಣರ ಸತ್ಯಾಗ್ರಹವನ್ನು ಬೆಂಬಲಿಸುತ್ತಾರೆ. ಹೀಗೆ ಅನ್ಯಾಯವನ್ನು ಪ್ರತಿಭಟಿಸಲು ಬಣ್ಣದವರು ನಡೆಸಿರುವ ಸತ್ಯಾಗ್ರಹವನ್ನು ಹೂಡಿರುವುದು ಧೀರೋದಾತ್ತ ನೀತಿಯಾಗಿದೆ. ಮಹಾತ್ಮರು ಹಾಕಿಕೊಟ್ಟ ಶಸ್ತ್ರ, ಅಹಿಂಸೆಗಳ ಮಾರ್ಗ ಅವರಿಗೆ ಜಯದೊರಕಿಸಿಕೊಡದಿರದು.

ಅರಬರ ಅಗ್ನಿಶಸ್ತ್ರ

ಅರಬ ಮುಖಂಡರೊಡನೆ ಮಾತಾಡಲೆಂದು ಸಂ. ರಾ. ಸಂಘದ ಮಧ್ಯಸ್ಥರಾದ ಕೌಂಟ್ ಬರ್ನಡೊಟ್ಟೆಯವರು ಅಲೆಕ್ಸಾಂಡ್ರಿಯಕ್ಕೆ ಹಾರಿದರು. ಅಲ್ಲಿ ಅರಬ್ ಲೀಗಿನ ಪ್ರಧಾನ ಕಾರ್ಯದರ್ಶಿಗಳಾದ ಅಜ್ಜಂ ಪಾಷಾರನ್ನು ನೋಡಲಿದ್ದಾರೆಂದು ಸುದ್ದಿಬಂದಿದೆ. ಅಲ್ಲಿ ಮಾತು ಮುಗಿಸಿಕೊಂಡು ಅವರು ನ್ಯೂಗೂ ಅನಂತರ ಟೆಲ್ ಅವೀವಿಗೂ ಹೋಗುವರಂತೆ.

ಇಸ್ರೇಲಿನ ವಾರ್ತೆಯ ಪ್ರಕಾರ ಜೆರೂಸಲೇಮಿನ ದಕ್ಷಿಣಭಾಗದಲ್ಲಿ ಅರಬದಲಗಳು ಮೆಶಿನ್‌ಗನ್ನುಗಳನ್ನು ಹಾರಿಸಿದವೆಂದು ತಿಳಿಯುತ್ತದೆ. ಆದರೆ ಯಾರೂ ಸತ್ತ ಸುದ್ದಿಯಿಲ್ಲ.



ಬರ್ಲಿನ್ನಿಗೆ ಹಾದಿಯಿಲ್ಲ— ಎಲ್ಬನದಿಯ ಮೇಲೆ ಕಟ್ಟಿದ ಸೇತುವನ್ನು ಮುಚ್ಚಿದ್ದರಿಂದ ಆಚೆದಡದನ್ನು [illegible] ರಶಿಯನ್ನರು ತಡೆದಿರುವುದರಿಂದ ಪ್ರಜೆಗಳಿಗೆ ಅತ್ತಿಂದಿತ್ತ ಸಂಚರಿಸಲು ಸಾಧ್ಯವಿಲ್ಲವಾಗಿದೆ.

ವಿಚಿತ್ರವಿಶ್ವ

ಕೊಂಬಿಲ್ಲದ ಪಶುಗಳು !


[illegible] ಕೊಂಬಿಲ್ಲದ [illegible] ಹುಟ್ಟಿಸಲಾಗಿದೆ. [illegible] ಕುರಿ, ಹಸು, [illegible] ಇನ್ನೂ ಎರಡು ಕಾಲಿನ ಪಶುಗಳಿಗೊ ಅಲ್ಲ [illegible] ಕೊಂಬಿಲ್ಲದ [illegible] ಪಶುಗಳು [illegible] ಈಗ ಕಂಡುಬಂದಿವೆ.

ಹಿಂದೆ ಕೊಂಬುಗಳು ಅವುಗಳಿಗೆ [illegible] ರಕ್ಷಣೆಗಾಗಿತ್ತು. ಆದರಿಂದೀಗ ಒಳ್ಳೆಯ ಜಾತಿಯ ಪಶು ಮತ್ತು [illegible] ಕೊಂಬುಗಳಲ್ಲದೆ ಅವನ್ನು [illegible] ಸಾಧನಗಳಿಂದ [illegible] ಕೊಡಲು ಸುಳಭವಿದೆ [illegible] !

ಇಂದಿನ ಹೊಸ [illegible] ಕೊಂಬಿಲ್ಲದ [illegible] ಹುಟ್ಟಿಸಿ [illegible] ತಿಳಿದಿಲ್ಲ. [illegible] ಅವುಗಳನ್ನು [illegible] ಉಳಿದ ಪಶುಗಳ [illegible] ಕರುಗಳಿಗೆ [illegible] ಹುಟ್ಟಿದೊಡನೆಯೇ [illegible] ಕೊಂಬು ಮೂಡುವ [illegible] ದರೆ ಸಾಕು, ಅದಕ್ಕೆ ಕೊಂಬೇ ಹುಟ್ಟುವುದಿಲ್ಲ.

* * *

ದಿವ್ಯದರ್ಶಿ



[illegible] ಬೇರಿಲ್ಲ ಪಾಲಕನು [illegible] ರಾಜನಾಗಿದ್ದನು. ಬಾಲ್ಯದಲ್ಲಿ ಅವನನ್ನು ಕದ್ದೊಯ್ದು ೧೬ ವರ್ಷಗಳ ಕಾಲ [illegible] ಕತ್ತಲು ಕೋಣೆಯಲ್ಲಿ ಬಂಧಿಸಿ ಇಡಲಾಯಿತು. [illegible] ಕೋಣೆಯಲ್ಲೇ ತಿರುಗುತ್ತಿದ್ದಾಗ ಎಲ್ಲಿಂದಲೋ ಎದ್ದ ಬೆಳಕನ್ನು ಕಂಡನು. ಅವನು [illegible] ಅವನ ಬುದ್ಧಿ ೩ ವರ್ಷದ ಮಗು [illegible]. ಅವನ [illegible] ಬಹು ವಿಚಿತ್ರವಾಗಿ ತೋರುತ್ತಿತ್ತು. ಅವನು [illegible] ನಕ್ಷತ್ರಗಳನ್ನು ಕಾಣಬಲ್ಲವನಾಗಿದ್ದನು !

* * *

ಸತ್ತು ಎದ್ದವನು !

[illegible] ವರ್ಷ ವಯಸ್ಸಿನ ಒಬ್ಬ [illegible] ಮಂಚದಮೇಲಿದ್ದ [illegible] ಸತ್ತಂತೆ ಇದ್ದನು. [illegible] ಆ ಅತಿ [illegible] ಕೋಣೆಗೆ [illegible]. ಅವನು [illegible] !

* * *

ಗೃಹಲಕ್ಷ್ಮಿಯರು

[illegible]

* * *

[illegible]



ಮನುಷ್ಯನ ಮೇಲ್ಮೆ

ಮಗೂ,

ಹಿಂದಿನ ಸಲ ನೀರಿನಲ್ಲಿ ಇರುವ ಪ್ರಾಣಿಗಳಿಂದ ನೆಲದ ಪ್ರಾಣಿಗಳ ಬೆಳವಣಿಗೆಯಾಗಿ ರೂಪಾಂತರ ಹೊಂದುತ್ತ ಹೊಂದುತ್ತ ಮನುಷ್ಯ ಹೇಗೆ ರೂಪಿಸಲ್ಪಟ್ಟನು ಎಂಬುದನ್ನು ತಿಳಿದೆ. ಇದು ಡಾರ್ವಿನ್ ಎಂಬ ಅಜ್ಜನ ವಿಚಾರ. ದೇಹವು ಈ ರೀತಿ ಪ್ರಾಣಿಗಳ ಸ್ಥಿತಿಯಿಂದ ಬದಲಾಗಿ ಬಂದಂತೆ ಮನಸ್ಸಾದರೂ ಬದಲಾಗಿ ಬಂದಿದೆ ಎನ್ನಬೇಕಲ್ಲವೆ?

ಕೆಲವು ಮಕ್ಕಳನ್ನು ಚೆನ್ನಾಗಿ ನೋಡು. ಅವರ ನಡತೆ, ಮಾತು ಮತ್ತು ಮುಖಭಾವಗಳನ್ನು ಗಮನಿಸು. ಒಬ್ಬನು ತಿನಿಸನ್ನು ಕಂಡನೆಂದರೆ ನಾಯಿಯಂತೆ ಬಾಯಿ ನೀರು ಸುರಿಸುವನು. ಒಬ್ಬಳು ತನ್ನ ಸಾಮಾನುಗಳಲ್ಲಿ ಒಂದನ್ನು ನೀನು ಮುಟ್ಟಿದ ಕೂಡಲೆ ಬೆಕ್ಕಿನಂತೆ ಪರಚಿಬಿಡುವಳು, ನಿನಗೇ ಚಿವುಟಿ ತಾನು ಕಿರಿಚುವಳು! ಒಬ್ಬನು ಕುದುರೆಯಂತೆ ಎಲ್ಲದರಲ್ಲೂ ಮುಂದೆ ನುಗ್ಗುವನು. ಒಬ್ಬಳು ಕತ್ತೆಯಂತೆ ಎಷ್ಟು ಹಾಕಿದರೂ ಏನು ಹಾಕಿದರೂ ತಿಂದುಬಿಡುವಳು! ಇಂತಹ ಪ್ರಾಣಿಸ್ವಭಾವಗಳು ಮಕ್ಕಳಲ್ಲಿ ಬರಲು ಕಾರಣವೇನು? ಅನೇಕಾನೇಕ ವರ್ಷಗಳ ಮೊದಲು ಮನುಷ್ಯರು ಪ್ರಾಣಿಗಳಾಗಿರಬೇಕೆಂಬುದು ನಿಜವೆನಿಸುವುದಿಲ್ಲವೆ?

ಕಪಿಯ ವರೆಗಿನ ಎಲ್ಲ ಪ್ರಾಣಿಗಳಿಗೂ ಆಲೋಚನೆ ಮಾಡಿ ಅದರಿಂದ ಸಂತೋಷಪಡುವ ಶಕ್ತಿಯಿಲ್ಲ. ಕಣ್ಣಿಗೆ ಕಾಣುವ ಮತ್ತು ಕಿವಿಗೆ ಕೇಳುವಂಥವುಗಳು ಅವುಗಳ ಮನಸ್ಸು ಆ ಕ್ಷಣಕ್ಕೆ ತಮಗೆ ಬೇಕಾದಂತೆ ಕೆಲಸ ಮಾಡಲು ಪ್ರೇರಿಸುತ್ತವೆ. ಮನುಷ್ಯನಾದರೆ ಹಾಗಲ್ಲ. ಕಣ್ಣು ಕಿವಿಗಳನ್ನು ಮುಚ್ಚಿಕೊಂಡು ಮೂಲೆಯಲ್ಲಿ ಕುಳಿತರೂ ನಿನ್ನೆ ತಾನು ಮಾಡಿದ್ದೇನು ನಾಳೆ ಮಾಡುವುದೇನು? ಎಂಬ ವಿಚಾರಗಳನ್ನು ಮನಸ್ಸಿನಲ್ಲಿ ಆಲೋಚಿಸಬಲ್ಲನು. ಅಕಸ್ಮಾತ್ತಾಗಿ ಈ ಶಕ್ತಿ ಮನುಷ್ಯನಿಗೆ ಹೇಗೆ ಬಂತು? ಇದನ್ನು ಯಾರಿಗೂ ಹೇಳಲು ಸಾಧ್ಯವಾಗಿಲ್ಲ.

ಮನುಷ್ಯನು ಈ ವಿಚಾರಶಕ್ತಿಯ ಸಹಾಯದಿಂದ ತನ್ನೆದುರಿನವುಗಳ ಒಳಗೇನಿದೆ ಎಂಬುದನ್ನು ಊಹಿಸಬಲ್ಲವನಾದನು. ನಿನ್ನ ಗೆಳೆಯನೊಬ್ಬನ ಮುಖ ಕೆಂಪಾಗಿದ್ದರೆ ಅದು ಕೋಪದಿಂದ ಆದುದೆಂದೂ ಗೆಳತಿಯೊಬ್ಬಳ ಮುಖ ಕೆಂಪಾಗಿದ್ದರೆ ನಾಚಿಕೆಯಿಂದ ಎಂದೂ ಸುಲಭವಾಗಿ ಹೇಳಬಿಡಬಲ್ಲೆ; ಅವನು ಹೊಡೆದರೆ ಅವನಿಗೆ ನಿರಾಶೆಯಾಗಿ ದುಃಖವಾಗಿದೆ ಎಂಬುದನ್ನೂ ಅವಳು ಅತ್ತರೆ ಅವಳಿಗೆ ಮಿತಿ ಮೀರಿದ ಕೋಪ ಮತ್ತು ಅಸಹಾಯತೆ ಉಂಟಾಗಿದೆ ಎಂಬುದನ್ನೂ ನೀನು ಕಂಡ ಕೂಡಲೆ ತಿಳಿದುಕೊಳ್ಳಬಲ್ಲೆ. ಪ್ರಾಣಿಗಳು ಹಾಗೆ ತಿಳಿದುಕೊಳ್ಳಲಾರವು. ಅವುಗಳಿಗೆ ಆ ಕಾರಣದಿಂದಲೇ ಇದು ಸರಿ, ಇದು ತಪ್ಪು ಎಂಬ ತಿಳುವಳಿಕೆ ಇಲ್ಲ.

ಬೆಕ್ಕು ಬೆಳ್ಳಗಿದ್ದ ಒಂದು ನೀರು ಪದಾರ್ಥವನ್ನು ಹಾಲೆಂದು ಕುಡಿಯಹೋಗಬಹುದು. ಆದರೆ ನೀನು ಅದನ್ನು ಪರೀಕ್ಷಿಸಿ, ಮೂಸಿ, ಅಷ್ಟಕ್ಕೂ ಗೊತ್ತಾಗದಿದ್ದರೆ ಒಂದೇ ಒಂದು ತೊಟ್ಟನ್ನು ತುಟಿಗೆ ತಗುಲಿಸಿ ನೋಡಿ ನಿಜವನ್ನು ತಿಳಿದು ಆ ಮೇಲೆ ಅದನ್ನು ಉಪಯೋಗಿಸುವೆ. ಬೆಕ್ಕಾದರೆ ಸುಣ್ಣದಲ್ಲಿ ಪೂರಾ ಬಾಯಿ ಹಾಕಿ ಸುಟ್ಟುಕೊಂಡೀತು.

ಅಭ್ಯಾಸದಿಂದ ಪ್ರಾಣಿಗಳು ಕೆಲ ಕೆಲವು ವಿಷಯಗಳನ್ನು ಕಲಿಯುವುದಿಲ್ಲವೆಂದಲ್ಲ. ಆದರೆ ಅವಕ್ಕೆ ಹೇಳಿ ತಿಳಿಸಲು ಸಾಧ್ಯವಿಲ್ಲ. ಹೇಳಿದ್ದು ಅವಕ್ಕೆ ಅರ್ಥವಾಗದು. ಒಮ್ಮೆ ಯಾದರೂ ಬಿಸಿ ಹತ್ತದೆ ಬಿಸಿ ಹಾಲಿನಿಂದ ದೂರ ಇರಲಾರದು. ಅತಿ ಚಿಕ್ಕ ಮಕ್ಕಳೂ ಅವೂ ಒಂದೇ ಮಟ್ಟದ ಬುದ್ಧಿಯುಳ್ಳವು. ನೀನಾದರೆ "ಬೆಳ್ಳಗಿರುವುದೆಲ್ಲ ಹಾಲಲ್ಲ" ಎಂದು ಹೇಳಿದ ಕೂಡಲೆ ತಿಳಿದು ಬಿಡುತ್ತದೆ!

× × ×

ವಸ್ತುಸಂಗ್ರಹಾಲಯಗಳು

ಮುಂಬಯಿ, ಬರೋಡ, ಮೈಸೂರು ಮುಂತಾದ ಸ್ಥಳಗಳಲ್ಲಿ ವಸ್ತುಸಂಗ್ರಹಾಲಯ ಎಂಬ ದೊಡ್ಡ ಮನೆಗಳಿರುತ್ತವೆ. ಅವುಗಳಲ್ಲಿ ಹಳೆಯ ಕಾಲದ ವಿಚಿತ್ರ ಸಾಮಾನುಗಳನ್ನು ಇಟ್ಟಿರುತ್ತಾರೆ. ನಮ್ಮಿಂದ ಅನೇಕ ವರ್ಷಗಳ ಹಿಂದೆ ನಮ್ಮ ಹಿರಿಯರು ಹೇಗಿದ್ದರು, ಅವರು ಎಂಥೆಂಥ ಸಾಮಾನುಗಳನ್ನು ಬಳಸುತ್ತಿದ್ದರು?—ಎಂಬುದು ಅಲ್ಲಿಗೆ ಹೋದರೆ ತಿಳಿಯುತ್ತದೆ.

ಇಜಿಪ್ತದಲ್ಲಿ ಕೆಲವು ಮದ್ದುಗಳ ಮೂಲಕ ಸಾವಿರಾರು ವರ್ಷಗಳ ಹಿಂದೆ ಆಳಿದ ಅರಸ ಅರಸಿಯರ ಹೆಣಗಳನ್ನು ಪೆಟ್ಟಿಗೆಯಲ್ಲಿ ಹಾಕಿ ನೆಲದಲ್ಲಿ ಹೂಳಿ ಇಟ್ಟಿದ್ದನ್ನು ಇಂಥ ವಸ್ತುಸಂಗ್ರಹಾಲಯದಲ್ಲಿ ನಮಗೆ ನೋಡಲು ತಂದಿಟ್ಟಿದ್ದಾರೆ. ಅನೇಕ ವರ್ಷಗಳ ಹಿಂದೆ ನೀರಿನಲ್ಲಿ ಎಂಥೆಂಥ ದೊಡ್ಡ ದೊಡ್ಡ ಮೊಸಳೆಗಳಿದ್ದವು—ಎಂಬುದನ್ನು ಅಲ್ಲಿಟ್ಟ ಅವುಗಳ ಅಸ್ಥಿಪಂಜರಗಳಿಂದ ಅರಿಯಬಹುದು. ಅನೇಕ ಬಗೆಯ ಜಲಚರಗಳ ಮತ್ತು ಸ್ಥಲಚರಗಳ ಅಪೂರ್ವವಾದ ಅಸ್ಥಿಪಂಜರಗಳು ಅಲ್ಲಿರುತ್ತವೆ.

ದೇಶವಿದೇಶಗಳ ಶಿಲ್ಪಿಗಳು ಕೆತ್ತಿದ ಕಲ್ಲಿನ ಮೂರ್ತಿಗಳನ್ನು ಅಲ್ಲಿ ಕಾಣಬಹುದು. ಅಮೃತಶಿಲೆ, ಕರಿಗಲ್ಲು ಮುಂತಾದ ನಾನಾ ಬಣ್ಣದ ಕಲ್ಲುಗಳ ಮೂರ್ತಿಗಳು ಅಲ್ಲಿರುತ್ತವೆ. ಆಯಾ ದೇಶದವರು ಎಷ್ಟು ಚೆನ್ನಾಗಿ ಗೊಂಬೆಗಳನ್ನು ತಯಾರಿಸಿದ್ದಾರೆ—ಎಂಬುದು ಅದರಿಂದ ತಿಳಿಯುತ್ತದೆ.

ಬಣ್ಣದ ಪಟಗಳು ಬೇರೆ ಇರುತ್ತವೆ. ನಾನಾ ದೇಶದ ದೊಡ್ಡ ಮನುಷ್ಯರ ಸುಖಚಿತ್ರವನ್ನೂ ಸಣ್ಣ ಮನುಷ್ಯರ ದುಃಖಚಿತ್ರವನ್ನೂ ಅಲ್ಲಿ ಕಾಣಬಹುದು. ಪ್ರಾಣಿಗಳ, ಮನುಷ್ಯರ ಮತ್ತು ಕಾಡುಮೇಡುಗಳ ಚಿತ್ರಗಳನ್ನೂ ಸಾಲಾಗಿ ಇಟ್ಟಿರುತ್ತಾರೆ.

ನಾಣ್ಯಗಳದೊಂದು ಬೇರೆ ಕಪಾಟು. ದೇಶವಿದೇಶಗಳ ಹಳೆಯ ನಾಣ್ಯಗಳನ್ನೂ ಬೇರೆ ಬೇರೆಯ ಹರಳುಗಳನ್ನೂ ಚಿಪ್ಪುಗಳನ್ನೂ ಕವಡೆಕಲ್ಲುಗಳನ್ನೂ ಬೇರೆ ಬೇರೆ ಕಪಾಟುಗಳಲ್ಲಿ ಕಾಣಬಹುದು.

ವಿಚಿತ್ರವೆನಿಸುವ ಮೃಗ ಪಕ್ಷಿಗಳ ಚರ್ಮದೊಳಗೆ ಹತ್ತಿ ಮುಂತಾದ್ದನ್ನು ತುಂಬಿ ನಿಜರೂಪವಾಗಿ ತೋರುವಂತೆ ಮಾಡಿ ಇಟ್ಟಿರುತ್ತಾರೆ.

ಹೀಗೇ ಹೇಳುತ್ತ ಹೋದರೆ ಈ ಜಾಗ ಸಾಕಾಗಲಾರದು. ಒಮ್ಮೆ ನೀನು ಹೋಗಿ ನೋಡುವುದು ಉತ್ತಮ. —ಮಾಮ

ಹೈದರಾಬಾದ ರಕ್ಷಣೆಗಾಗಿ ಹಿಂದೀ ಸೈನ್ಯ

ಹಿರಿಯೋಲಗದಲ್ಲಿ ಮುಖ್ಯ ಮಂತ್ರಿಗಳ ಭಾಷಣ

ಹೈದರಾಬಾದದ ಸಮಾಚಾರಗಳು

ನಿಜಾಮರು ಹಾದಿ ತಪ್ಪಿ ನಡೆದುದರ ಫಲವಾಗಿ ಈಗ ತಲೆ ಕೆಟ್ಟವರಂತೆ ವರ್ತಿಸುವ ಪ್ರಸಂಗ ಬಂದಿದೆ. ತಪ್ಪೆಂದು ತಿಳಿದಿದ್ದರೂ ತಮ್ಮದು ಸರಿಯಾದ ಧೋರಣವೇ ಎಂದು ಸಮರ್ಥಿಸಿಕೊಳ್ಳುತ್ತ ತಮ್ಮನ್ನೂ ಲೋಕವನ್ನೂ ವಂಚಿಸುತ್ತ ಸಾಗಿದ್ದಾರೆ. ಹೈದರಾಬಾದದ ಪ್ರಶ್ನೆಯನ್ನು ಯುಕ್ತರಾಷ್ಟ್ರ ಸಂಘದ ಮುಂದೆ ಮಂಡಿಸಿದರೆ ಅದಕ್ಕೊಂದು ನ್ಯಾಯಬದ್ಧವಾದ ಗಾಂಭೀರ್ಯವು ಪ್ರಾಪ್ತವಾಗುವದೆಂಬ ಭ್ರಮೆಯು ನಿಜಾಮರಿಗೆ ಉಂಟಾಗಿ ಈ ಸಮಸ್ಯೆಯನ್ನು ಯುಕ್ತ ರಾಷ್ಟ್ರಸಂಘದ ಎದುರು ಇರಿಸುವದಾಗಿ ಹಿಂದುಸ್ತಾನ ಸರಕಾರಕ್ಕೆ ಈಗ ಕೆಲದಿನಗಳ ಹಿಂದೆ ತಿಳಿಸಿದರು. ಹಿಂದುಸ್ತಾನದ ಮತ್ತು ಯುಕ್ತರಾಷ್ಟ್ರ ಸಂಘದ ಹಾಗೂ ಅಂತರ್‌ರಾಷ್ಟ್ರೀಯ ಪ್ರತಿಕ್ರಿಯೆಯು ಇದಕ್ಕೆ ಅಷ್ಟು ಅನುಕೂಲವಾಗಿಲ್ಲವೆಂಬುದನ್ನು ಎಲ್ಲರೂ ಅರಿತಂತೆ ನಿಜಾಮರ ಮುಖ್ಯ ಮಂತ್ರಿ ಮೀರ ಲಾಯಕ ಅಲ್ಲಿಯವರೂ ಅರಿತರು. ತಾ. ೪ ರಂದು ಹೈದರಾಬಾದ ಶಾಸನ ಸಭೆಯಲ್ಲಿ ಈ ಬಗ್ಗೆ ಮಾತನಾಡುತ್ತ ಯುಕ್ತರಾಷ್ಟ್ರ ಸಂಘವು ಹೈದರಾಬಾದದ ಮೊರೆ ಕೇಳದಿದ್ದರೂ ತಿರಸ್ಕರಿಸಿದರೂ ತಾವು ತಮ್ಮ ಸ್ವಾತಂತ್ರ್ಯದ ಆಶೆಯನ್ನು ಬಿಡುವದಿಲ್ಲವೆಂದು ಬಡಿವಾರ ಕೊಚ್ಚಿದ್ದಾರೆ. ಪ್ರಜಾಪೀಡನಕ್ಕೂ ಅರಾಜಕತೆಗೂ ಸ್ವಾತಂತ್ರ್ಯವೆಂಬ ದೊಡ್ಡ ಹೆಸರು ಕೊಟ್ಟು, ತಪ್ಪಿನ ಮೇಲೆ ತಪ್ಪನ್ನು ಮಾಡುತ್ತಿರುವಂತಹ ದುರಾಗ್ರಹಕ್ಕೆ ತುತ್ತಾಗುತ್ತಿದ್ದಾರೆ. ಯುಕ್ತ ರಾಷ್ಟ್ರದಲ್ಲಿ ತನ್ನ ಪರವಾಗಿ ಪ್ರಕರಣವನ್ನು ಮಂಡಿಸುವವರ ಮಾಲಿಕೆಯಲ್ಲಿ ಕೆಲ ಹಿಂದುಗಳ ಹೆಸರನ್ನು ಸೇರಿಸಿ ಹಿಂದುಗಳ ಕಣ್ಣಿಗೆ ಮಣ್ಣೆರಚುವ ಪ್ರಯತ್ನವನ್ನೂ ನಿಜಾಮರು ಮಾಡದೆ ಬಿಟ್ಟಿಲ್ಲ. ಇಷ್ಟೇ ಅಲ್ಲ, ಲಿಂಗಾಯತ ಸಮಾಜದ ಏಳಿಗೆಗಾಗಿ ೫೦ ಲಕ್ಷ ರೂಪಾಯಿ ಕೊಡುವದಾಗಿಯೂ ನಿಜಾಮರು ಸಾರಿ ಹಿಂದುಗಳ ಬಗ್ಗೆ ಕೃತಕ ಸಹಾನುಭೂತಿಯನ್ನು ತೋರಿದ್ದಾರಲ್ಲದೆ ತಾವೂ ರಜಾಕಾರರು ಹಿಂದುಗಳ ಮೇಲೆ ಮಾಡಿದ ಅತ್ಯಾಚಾರದ ಮೇಲೆ ಸುಣ್ಣ ಬಳಿಯಲು ಹವಣಿಸಿದ್ದಾರೆ.

ಈ ದುರಾಗ್ರಹಿಗಳ ಅವಿಚಾರದಿಂದ ಸಂಸ್ಥಾನಕ್ಕೆ ೧೯೪೭-೪೮ ರ ಮುಂಗಡಪತ್ರಿಕೆಯಲ್ಲಿ ೩ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಕೊರತೆಯು ಬಂದಿದೆ. ಆರ್ಥಿಕ ದಿಗ್ಬಂಧನದಿಂದಲೂ ಗಡಿಯ ಘಟನೆಗಳಿಂದಲೂ ಈ ಕೊರತೆಯುಂಟಾಯಿತೆಂದೂ ಇದಕ್ಕೆ ಹಿಂದುಸ್ತಾನವೇ ಹೊಣೆಯೆಂದೂ ತನ್ನ ಪಾಪದ ಫಲವನ್ನೆಲ್ಲ ಇನ್ನೊಬ್ಬರ ಕೊರಳಿಗೆ ಕಟ್ಟಲು ನಿಜಾಮ ಸರಕಾರವು ಯತ್ನಿಸಿದೆ.

ರಜಾಕಾರರ ಅತ್ಯಾಚಾರಗಳು ದಿನ ದಿನ ಹೆಚ್ಚುತ್ತಿರುವವಲ್ಲದೆ ತಗ್ಗುತ್ತಿಲ್ಲ. ನಾಲಗೊಂಡಾ ಜಿಲ್ಹೆಯಲ್ಲಿ ೫೦೦ ಜನರನ್ನು ಬಹಿರಂಗವಾಗಿ ಗುಂಡಿಕ್ಕಿ ನಿಜಾಮ ಸೈನಿಕರೂ ರಜಾಕಾರರೂ ಕೊಂದರೆಂದು ಕಣ್ಣಾರೆ ಕಂಡು ಅಲ್ಲಿಂದ ಓಡಿಬಂದವರು ವರದಿ ಮಾಡಿದ್ದಾರೆ.

ಇತ್ತ ಹೊಸದಿಲ್ಲಿಯಲ್ಲಿ ಇದನ್ನೆಲ್ಲ ಕಣ್ಣಲ್ಲಿ ಎಣ್ಣೆ ಹಾಕಿ ಸುಮ್ಮನೆ ನೋಡುತ್ತ ಕುಳಿತಿಲ್ಲವೆಂಬುದು ತಾ. ೭ ರಂದು ಹಿರಿಯೋಲಗದಲ್ಲಿ ಹೈದರಾಬಾದದ ಬಗ್ಗೆ ಮುಖ್ಯಮಂತ್ರಿ ಪಂ. ಜವಾಹರಲಾಲರು ಕೊಟ್ಟ ಹೇಳಿಕೆಯಿಂದ ತಿಳಿದುಬರುತ್ತದೆ. ಹೈದರಾಬಾದದ ಪ್ರಜೆಗಳ ರಕ್ಷಣೆಗಾಗಿ ಹಿಂದುಸ್ತಾನ ಸರಕಾರವು ಸಿಕಂದರಾಬಾದದಲ್ಲಿ ತನ್ನ ಸೈನ್ಯವನ್ನು ನೆಲೆಗೊಳಿಸಲು ನಿರ್ಧರಿಸಿದೆಯೆಂದು ಮುಖ್ಯ ಮಂತ್ರಿಗಳು ಸಾರಿದರು. ಇದನ್ನು ಹರ್ಷೋದ್ಗಾರಗಳಿಂದ ಓಲಗವು ಸ್ವಾಗತಿಸಿತು. ಮುಖ್ಯ ಮಂತ್ರಿಗಳು ಹೈದರಾಬಾದದ ಬಗ್ಗೆ ಹೇಳಿಕೆ ಕೊಡುವಾಗ ರಜಾಕಾರರು ಇತ್ತೀಚೆ ಎಸಗಿದ ಅತ್ಯಾಚಾರಗಳ ಉಲ್ಲೇಖವನ್ನು ಮಾಡಿದರಲ್ಲದೆ ಈ ಬಗ್ಗೆ ಕೆಲ ಅಂಕಗಳನ್ನೂ ತಿಳಿಸಿದರು.

ಅವು ಅಧಿಕೃತವಾಗಿರುವದರಿಂದ ಕೆಳಗೆ ಕೊಡಲಾಗಿದೆ.

ಹೈದರಾಬಾದದ ಒಂದು ಹಳ್ಳಿಯ ಜನರು ಊರ ಗೌಡನ ಮುಖಂಡತ್ವದಲ್ಲಿ ಪುಂಡರನ್ನು ಎದುರಿಸಿದರು. ಆದರೆ ಅವರ ಬಳಿಗಿದ್ದ ಮದ್ದು ಮುಗಿದದ್ದರಿಂದ ಅವರ ಪ್ರತಿಭಟನೆಗೆ ಯಶ ಸಿಗಲಿಲ್ಲ. ರಜಾಕಾರರು ವಿರೋಧಿಗಳನ್ನೆಲ್ಲ ಸಂಹರಿಸಿ ಊರನ್ನು ಸುಟ್ಟು ಗೌಡನ ರುಂಡವನ್ನು ಕೋಲಿಗೆ ಚುಚ್ಚಿ ಮೆರೆಸಿದರು.

ಇನ್ನೊಂದು ಕಡೆಗೆ ರಜಾಕಾರರು ಊರ ಹುಡುಗರು ಹೆಂಗಸರು ಗಂಡಸರು ಎಲ್ಲರನ್ನೂ ನಿಲ್ಲಿಸಿ ಗುಂಡಿಕ್ಕಿ ಕೊಂದರು. ಹಿಂದೀ ಒಕ್ಕೂಟಕ್ಕೆ ಪ್ರಾಣರಕ್ಷಣೆಗಾಗಿ ಓಡಿಬರುತ್ತಿದ್ದ ಒಂದು ದೊಡ್ಡ ಸಮುದಾಯವನ್ನು ರಜಾಕಾರರು ಮುತ್ತಿ ಎಲ್ಲರನ್ನೂ ಹೊಡೆದು ಸ್ತ್ರೀಯರನ್ನು ಹೊತ್ತುಕೊಂಡು ಹೋದರು. ಇನ್ನೊಂದು ಕಡೆಗೆ ರೇಲ್ವೆ ಗಾಡಿಯನ್ನು ನಿಲ್ಲಿಸಿ ಪ್ರಯಾಣಿಕರನ್ನು ಲೂಟಿಮಾಡಿ ಡಬ್ಬಿಗಳನ್ನು ಸುಟ್ಟರು. ಒಕ್ಕೂಟದ ನಡುಗಡ್ಡೆಯ ಪ್ರದೇಶಕ್ಕೆ ಹೊರಟ ಹಿಂದಿ ಸೈನ್ಯದ ಮೇಲೆ ರಜಾಕಾರರು ಹಲ್ಲೆ ಮಾಡಿದರು ಮತ್ತು ಒಕ್ಕೂಟದ ಗಡಿಯಲ್ಲಿ ಅತಿಕ್ರಮಣ ಮಾಡಿದರು. ತಾ. ೬ ರ ವರದಿಯಂತೆ ಹೈದರಾಬಾದ ಸೈನಿಕರು ಯುದ್ಧದ ಮೋಟಾರುಗಳಲ್ಲಿ ಒಕ್ಕೂಟ ಪ್ರದೇಶದಲ್ಲಿ ಹೊಕ್ಕು ಹಿಂದೀಸೈನ್ಯದ ಮೇಲೆ ಏರಿಬಂದರು. ಆದರೆ ಅವರನ್ನು ಓಡಿಸಲಾಯಿತು. ಆಗ ಒಬ್ಬ ಸೈನ್ಯಾಧಿಕಾರಿಯನ್ನೂ ೮೫ ಸೈನಿಕರನ್ನೂ ಬಂಧಿಸಲಾಯ್ತು. ಈ ವರೆಗೆ ಬಂದ ವರದಿಗಳಿಂದ ಕೆಳಗಿನ ಅಂಶಗಳು ತಿಳಿಯುತ್ತವೆ.

ಸಂಸ್ಥಾನದಲ್ಲಿ ೭೦ ಕ್ಕಿಂತ ಹೆಚ್ಚು ಹಳ್ಳಿಗಳ ಮೇಲೆ ಹಲ್ಲೆಯಾಗಿದೆ. ಒಕ್ಕೂಟ ಪ್ರದೇಶದ ಮೇಲೆ ೧೫೦ ಸಲ ಅತಿಕ್ರಮಣ ಮಾಡಲಾಗಿದೆ. ನೂರಾರು ಜನ ಕೊಲ್ಲಲ್ಪಟ್ಟಿದ್ದಾರೆ. ಅಸಂಖ್ಯಾತರಿಗೆ ಗಾಯಗಳಾಗಿವೆ. ಅನೇಕ ಸ್ತ್ರೀಯರನ್ನು ಅಪಹರಿಸಲಾಗಿದೆ. ೧೨ ರೇಲ್ವೆ ಗಾಡಿಗಳ ಮೇಲೆ ಹಲ್ಲೆಯಾಗಿದೆ. ೧ ಕೋಟಿ ರೂ. ಬೆಲೆಗೆ ಮಿಕ್ಕಿ ಆಸ್ತಿಯ ಲೂಟಿಯಾಗಿದೆ. ಹೈದರಾಬಾದದಿಂದ ಕೋಟಿಗಟ್ಲೆ ಜನರು ಆಶ್ರಯಕ್ಕಾಗಿ ಒಕ್ಕೂಟಕ್ಕೆ ಓಡಿಬಂದಿದ್ದಾರೆ.

ಈ ಪಾಶವೀ ಅತ್ಯಾಚಾರಗಳನ್ನು ಹತ್ತಿಕ್ಕಲು ಮತ್ತು ಹೈದರಾಬಾದದಲ್ಲಿ ಶಾಂತಿಯನ್ನು ನೆಲೆಗೊಳಿಸಲು ಸಿಕಂದರಾಬಾದದಿಂದ ಹಿಂತೆಗೆದುಕೊಂಡ ಸೈನ್ಯವನ್ನು ಮತ್ತೆ ಅಲ್ಲಿ ಕಳಿಸಿಕೊಡದೆ ಗತ್ಯಂತರವಿಲ್ಲವೆಂದು ಮೊದಲಾಗಿ ಸರಕಾರದ ನಿರ್ಧಾರವನ್ನು ಅರುಹುತ್ತ ಪಂ. ಜವಾಹರಲಾಲರು ಹೀಗೆ ಹೇಳಿದರು.

"ಶಾಂತಿ ಸುವ್ಯವಸ್ಥೆಗಾಗಿ ಸಿಕಂದರಾಬಾದಕ್ಕೆ ಸೈನ್ಯ ಕಳಿಸಲಾಗುವದು. ಅಲ್ಲಿಯ ಎಲ್ಲ ಜಾತಿಯ ಜನರ ಸಂರಕ್ಷಣೆಯೇ ನಮ್ಮ ಗುರಿ. ಈ ಕಾರ್ಯಕ್ಕೆ ಯಾವ ಜಾತಿಯವರಿಂದಾಗಲೀ ಆತಂಕ ಉಂಟಾದರೆ ಈ ಜಾತೀಯ ಗಲಭೆಯನ್ನು ಹತ್ತಿಕ್ಕಲು ಉಗ್ರ ಕ್ರಮ ಕೈಕೊಳ್ಳಬೇಕೆಂದು ಸ್ಪಷ್ಟ ಆಜ್ಞೆ ಕೊಡಲಾಗುವದು. ಅಲ್ಲಿಯ ನಮ್ಮ ಚಟುವಟಿಕೆಗಳು ಜಾತ್ಯತೀತವಾಗಿ ನಡೆಯುವವು" ಎಂದು ಮೊದಲಾಗಿ ಸಾರಿದರು. ಹಾಗೇ ಅವರು ಮುಂದುವರಿಯುತ್ತ ಅಲ್ಲಿಯ ಜನರು ಹೆದರಿ ಓಡಿಬರಬಾರದೆಂದೂ ಅಲ್ಲಿಯೇ ಇದ್ದು ಅನ್ಯಾಯವನ್ನು ಪ್ರತಿಬಂಧಿಸುವಂತೆ ಸಂಘಟನೆ ಮಾಡಿಕೊಳ್ಳಬೇಕೆಂದೂ ಪ್ರಸಂಗಾವಧಾನದಿಂದ ನಡೆಯಬೇಕೆಂದೂ ಬೇಡಿಕೊಂಡರು.

ಹೈದರಾಬಾದವು ಹೀಗೆ ಚಿನ್ನಾಟಕೆಯಿಂದ ಆದೆಂದೂ ಸ್ವತಂತ್ರವಾಗದೆಂದೂ ಈ ಮೊದಲಾದರೂ ಅದಕ್ಕೆ ರಾಜಕೀಯವಾದ ಸ್ವಾತಂತ್ರ್ಯವೆಂಬುದೇ ಇರಲಿಲ್ಲವೆಂದೂ ಇನ್ನಾದರೂ ಅದು ಬಯಸುತ್ತಿರುವ ವಿಚಿತ್ರ ಹಾಗೂ ಜಾತೀಯ ಮದಾಂಧತೆಯ ಹೇಯ ಮತ್ತು ಪ್ರಜಾಹಿತ ಘಾತಕವಾದ ಸ್ವೈರ ರಾಜ್ಯಭಾರದ ಸ್ವಾತಂತ್ರ್ಯ ಅದಕ್ಕೆಂದೂ ದೊರೆಯದೆಂದೂ ಘಂಟಾಘೋಷವಾಗಿ ಹೇಳಿದರು.

ಈ ಹೇಳಿಕೆಯ ಪ್ರತಿಕ್ರಿಯೆಯ ರೂಪದಲ್ಲಿ ತಾ. ೭ ರಂದು ಹೈದರಾಬಾದದ ಉಪಮುಖ್ಯ ಮಂತ್ರಿ ಶ್ರೀ ಪಿಂಗಳಿ ವೆಂಕಟರಾಮರೆಡ್ಡಿಯವರು, ಯಥಾಸ್ಥಿತಿ ಒಪ್ಪಂದದಂತೆ ಹಿಂದುಸ್ತಾನಕ್ಕೆ ಸಿಕಂದರಾಬಾದದಲ್ಲಿ ಸೈನ್ಯ ಇಡುವ ಅಧಿಕಾರವೇ ಇಲ್ಲವೆಂದೂ ಹೀಗೆ ಒಪ್ಪಂದ ಮುರಿದು ಸೈನ್ಯ ಕಳಿಸಿದ್ದೇ ಆದರೆ ಅದರ ಪರಿಣಾಮಕ್ಕೆ ಹಿಂದುಸ್ತಾನ ಸರಕಾರವೇ ಹೊಣೆಯೆಂದೂ ಹೇಳಿದರು.

ಆರ್ಥಿಕ ಮಂತ್ರಿ ಶ್ರೀ ಕೆ. ಸಿ. ನಿಯೋಗಿಯವರ ಸುಂಕಸುಧಾರಣಾ ಮಸೂದೆಯನ್ನು ಸ್ವೀಕರಿಸಿ ಅಪಾರ ಮಂತ್ರಿಗಳು ಮಂಡಿಸಿದ ಭೂಸುಧಾರಣಾ ಮಸೂದೆಯನ್ನು ತಜ್ಞ ಸಮಿತಿಗೆ ಒಪ್ಪಿಸಿ ತಾ ೭ ರಂದು ಹಿಂದುಸ್ತಾನದ ಹಿರಿಯೋಲಗವು ಅನಿಯಮಿತ ಅವಧಿಯ ವರೆಗೆ ಮುಂದುವರಿಯಿತು.

ಮಾನವನ ಆರ್ಥಿಕ ಚಟುವಟಿಕೆಗಳ ಸ್ಥೂಲ ನಿರೀಕ್ಷಣೆ

ತನ್ನ ಸಲುವಾಗಿ ಆಹಾರ ಮತ್ತು ಆಶ್ರಯವನ್ನು ಪಡೆವುದಕ್ಕಾಗಿ ಮಾನವನ ಆರ್ಥಿಕ ಚಟುವಟಿಕೆ ಪ್ರಾರಂಭವಾಯಿತು. ಮೊದ ಮೊದಲು ನಿಸರ್ಗದತ್ತವಾದ ಮೀನುಗಾರಿಕೆ, ಬೇಟೆ, ಲಭ್ಯವಾದುವರ ಸಂಗ್ರಹ ಮೊದಲಾದವುಗಳಿಂದಲೇ ಅವನು ತನ್ನ ಬೇಡಿಕೆಗಳನ್ನು ಪೂರಯಿಸಿಕೊಳ್ಳುತ್ತಿದ್ದನು.

ಆದರೆ ನಾಗರಿಕತೆ ಬೆಳೆಯುತ್ತ ನಡೆದಂತೆ ಅವನು ತನ್ನ ಬೇಕು ಬೇಡಿಕೆಗಳಿಗಾಗಿ ತನ್ನ ಅನುಕೂಲತೆ ಮತ್ತು ಪರಿಸ್ಥಿತಿಗೆ ಒಗ್ಗುವಂತೆ ನಿಯಂತ್ರಿತ ಮಾರ್ಗಗಳಿಂದ ನಿಸರ್ಗದ ಕೂಡ ಸಹಕರಿಸ ಹತ್ತಿದನು. ನಾಗರಿಕತೆಯು ಈ ಮಟ್ಟದಲ್ಲಿ ಒಕ್ಕಲುತನದಿಂದ ಉಪಜೀವಿಸುವವರು ನಿಸರ್ಗದ ಕೂಡ ಸಹಕರಿಸಿ ತಮ್ಮ ಬೇಕುಗಳನ್ನು ಪೂರಯಿಸಿಕೊಳ್ಳಹತ್ತಿದರು. ಮಾನವನು ಮಳೆ, ಗಾಳಿ, ಬಿಸಿಲುಗಳನ್ನನುಲಕ್ಷಿಸಿ ಭೂಮಿಯ ಗುಣಾವಗುಣಗಳನ್ನು ತಿಳಿದುಕೊಂಡು ವಾತಾವರಣಕ್ಕೆ ಸರಿಹೋಗುವಂತೆ ಕಾರ್ಯಪದ್ಧತಿಯನ್ನು ಕೈಕೊಳ್ಳುವದು. ಉಳುವವನ ಅಭಿವೃದ್ಧಿ, ಜ್ಞಾನ ಮತ್ತು ಅನುಭವಗಳಿಗಾಗಿ ನಾವು ಇಲ್ಲಿ ಶಾಸ್ತ್ರಕ್ಕೆ ಶರಣು ಹೊಗಬೇಕಾಗುವದು.

ಇಂತು ದೊರೆತ ಜ್ಞಾನದಲ್ಲಿ ತನ್ನ ಬುದ್ಧಿ-ಶಕ್ತಿಯನ್ನು ಕೂಡಿಸಿ ಮಾನವನು ನಿಸರ್ಗದ ಉತ್ಪಾದನೆಗಳನ್ನು ತನಗೆ ಬೇಕಾದ ಉಪಯುಕ್ತ ವಸ್ತುಗಳಲ್ಲಿ ಪರಿವರ್ತಿಸಿಕೊಂಡನು. ಈ ಮೂರನೇ ಮಟ್ಟದಲ್ಲಿಯೇ ಒಕ್ಕಲುತನದಿಂದ ಉದ್ಯೋಗ ಧಂದೆಗಳ ಅಭಿವೃದ್ಧಿಗೆ ಪ್ರಾರಂಭವಾಯಿತು. ಸಾಮಾನ್ಯವಾಗಿ ಔದ್ಯೋಗಿಕ ಯುಗದಲ್ಲಿ ಕೆಲಸಗಾರನೂ ತನ್ನ ಉಪಯೋಗಕ್ಕಾಗಿಯೆ ತನ್ನ ಶ್ರಮದ ಹೆಚ್ಚಿನ ಫಲವನ್ನು ಅನುಭೋಗಿಸಲು ಸಮರ್ಥನಾಗುವನು. ಈ ಉದ್ಯೋಗ ಧಂದೆಗಳು ನಗರ ಪಟ್ಟಣಗಳಲ್ಲಿ ಅಂದರೆ ಶಿಕ್ಷಣದ ಸಾಮಾನ್ಯ ಮಟ್ಟದ ಮತ್ತು ಹಕ್ಕು ಬಾಧ್ಯತೆಗಳ ಅರಿವು ಹೆಚ್ಚುತ್ತ ನಡೆದ ಸ್ಥಳಗಳಲ್ಲಿ ಈ ಉದ್ದಿಮೆಗಳು ಹಬ್ಬಿದ್ದರಿಂದ ಇದು ಸಾಧ್ಯವಾಯಿತು. ಆದರೆ ಭೂಮಿಗಳಲ್ಲಿ ಕೆಲಸ ಮಾಡುವವರಿಗೆ ಸಂಘ ಸಂಸ್ಥೆಗಳಿಲ್ಲ; ಅಲ್ಲದೆ ತಮಗಾಗಿಯೆ ತಮ್ಮ ಪರಿಶ್ರಮದ ಫಲಗಳೆಲ್ಲ ಸಿಕ್ಕತಕ್ಕದ್ದೆಂಬ ಸ್ವಾರ್ಥವೂ ಅವರಲ್ಲಿ ಅಷ್ಟೊಂದು ಹೆಚ್ಚಿಗಿಲ್ಲ. ತತ್ಪರಿಣಾಮವಾಗಿ ಒಕ್ಕಲುತನದಿಂದ ಲಾಭವಿಲ್ಲ ಎಂಬ ಪರಿಸ್ಥಿತಿ ಪ್ರಾಪ್ತವಾಗಿದೆ. ಆದರೆ ಈ ಬಗೆಯ ಪರಿಸ್ಥಿತಿಗೂ ಒಕ್ಕಲುತನಕ್ಕೂ ಯಾವದೇ ಬಗೆಯ ಸಂಬಂಧವಿಲ್ಲ. ಒಕ್ಕಲತನವು ಸಾಧಾರಣವಾಗಿ ಸರ್ವ ಸಂಪತ್ತಿನ ಸಾಧನವಾಗಿರುವದರಿಂದ್ಯ ಪ್ರತಿಯೊಬ್ಬ ಮನುಷ್ಯನಿಗೆ ದೊರೆಯತಕ್ಕ ಸಂಪತ್ತಿನ ಲಾಭವನ್ನು ನಿಯಂತ್ರಿಸುವ ಅಧಿಕಾರ ಅದಕ್ಕಿರಬೇಕೆಂಬುದು ಯುಕ್ತಿಯುಕ್ತವಾದುದು; ಒಕ್ಕಲತನದ ಉತ್ಪಾದನೆಗಳನ್ನು ಯೋಗ್ಯರೀತಿಯಿಂದ ವಿನಿಮಯಿಸಿ ಹಂಚಿಕೆ ಮಾಡಿದ್ದಾದರೆ ಅವನು ಸ್ವತಃ ಸಂಪತ್ಸಮೃದ್ಧನಾಗಬಲ್ಲನು.

ಆದರೆ ಈವರೆಗೆ ಸದ್ಯದ ಪರಿಸ್ಥಿತಿಯಲ್ಲಿ ಯಾವ ದೇಶದಲ್ಲಿಯೂ ಒಕ್ಕಲಿಗ ತನಗೆ ತಕ್ಕ ಲಾಭಾಂಶವನ್ನು ಪಡೆದಿಲ್ಲೆಂದು ಸಲ್ಲ ಹೇಳಬಹುದು ಅದರಲ್ಲಿಯೂ ಅಜ್ಞಾನ ಮತ್ತು ದಾರಿದ್ರ್ಯದಲ್ಲಿ ಮುಳುಗಿದ ನಮ್ಮ ದೇಶಕ್ಕಂತೂ ಇದು ಹೆಚ್ಚಾಗಿ ಅನ್ವಯಿಸುವದು. ಒಕ್ಕಲಿಗನು ಸಾಮಾನ್ಯವಾಗಿ ತಳಹದಿಯಂತಿದ್ದು ಅವನ ಮೇಲೆಯೆ ಇಡೀ ಆರ್ಥಿಕ ರಚನೆಯು ಕಟ್ಟಲ್ಪಟ್ಟಿಂತಿದೆ ಅಲ್ಲದೆ ಲೂಟಿಯಲ್ಲಿ ಪಾಲು ಪಡೆಯದೆಯೇ ಯುದ್ಧದ ಭಾರವನ್ನು ಹೊರುವದು ಅವನ ಪಾಲಿಗೆ ತಪ್ಪಿದ್ದಲ್ಲ.

ಅನೇಕ ದೇಶಗಳಲ್ಲಿ ಉದ್ಯೋಗ ಧಂದೆಗಳಲ್ಲಿಯ ಕೆಲಸಗಾರರ ಪರಿಸ್ಥಿತಿ ಭೂಮಿಗಳಲ್ಲಿ ಕೆಲಸ ಮಾಡುವ ಕೆಲಸಗಾರರ ಪರಿಸ್ಥಿತಿಗಿಂತ ಬಹಳ ಸುಧಾರಣೆ ಹೊಂದಿದೆ. ಆದರೀಗ ಕಾಂಗ್ರೆಸ್ಸು ಭೂಮಿಗಳಲ್ಲಿ ಕೆಲಸ ಮಾಡುವವರ ಪರಿಸ್ಥಿತಿಯ ಸುಧಾರಣೆಯತ್ತ ಗಮನಿಸಿದ್ದು ಅಭಿನಂದನೀಯವಾಗಿದೆ ಈ ವರೆಗೆ ಸರಕಾರದವರು, ಭೂಮಿ ಮಾಡುವದರಿಂದ ತಮಗೆ ತೀರ್ವೆಸಿಕ್ಕುವದೋ ಇಲ್ಲವೋ ಇಷ್ಟನ್ನೇ ನೋಡುತ್ತಿದ್ದರಲ್ಲದೆ ಅವರಸ್ಥಿತಿಗತಿ ಸುಧಾರಿಸುವದಕ್ಕಾಗಿ ಏನನ್ನೂ ಮಾಡಲಿಲ್ಲ; ಅವರ ಶ್ರಮದ ಪ್ರಯೋಜನವನ್ನು ಎರಡನೆಯವರು ಪಡೆಯುತ್ತಿರುವದನ್ನೂ ತಡೆಯಲಿಲ್ಲ. ಈ ವರೆಗೆ ಸರಕಾರದ ಧೋರಣವು ಈ ರೀತಿಯಿದ್ದುದರಿಂದ ಒಕ್ಕಲಿಗರಿಂದ ತೆರಿಗೆಯನ್ನು ವಸೂಲಿ ಮಾಡುವದಕ್ಕಾಗಿ ಅವರು ದಲ್ಲಾಳರನ್ನು ನೇಮಿಸಿದರು. ಈ ದಲ್ಲಾಳರ ಸ್ಥಾನಮಾನಗಳು ಬೆಳೆದು ವರ್ಚಸ್ಸು ಮತ್ತು ಅಧಿಕಾರ ಹೆಚ್ಚಿ, ಕೊನೆಯಲ್ಲಿ ಪರಕೀಯ ಆಳರಸರ ಆಡಳಿತದಲ್ಲಿ ಅದೊಂದು ಶಕ್ತಿಸಂಪನ್ನ ಜಮೀನದಾರ ವರ್ಗವೇ ಆಗಿ ಪರಿಣಮಿಸಿತು. ಸರಕಾರ ಮತ್ತು ಉಳುವವರ ಮಧ್ಯದಲ್ಲಿ ಇರುವ ಈ ದಲ್ಲಾಳರನ್ನೇ ನಿರ್ಮೂಲಗೊಳಿಸಲು ಅತ್ಯಂತ ಧೈರ್ಯದಿಂದ ಕಾಂಗ್ರೆಸ ಸರಕಾರವು ಈಗ ಸನ್ನದ್ಧವಾಗಿದೆ.

ದಲ್ಲಾಳರನ್ನು ನಿರ್ಮೂಲಗೊಳಿಸಿದ ನಂತರ, ಉಳುವವರಿಗೇ ಪರಿಶ್ರಮದ ಲಾಭವೆಲ್ಲ ಉಳಿಯುವಂತೆ ಉಪಾಯ ಯೋಜನೆ ಮಾಡುವದು ಸರಕಾರದ ಕರ್ತವ್ಯವಾಗಿದೆ. ಈ ಉಪಾಯಗಳು ಅನೇಕ ವಿಧವಾಗಿವೆ. ಮೊದಲನೆಯದಾಗಿ ಅವನು ಉಳುತ್ತಿರುವ ಭೂಭಾಗವು ಅವನ ನಿಯಂತ್ರಣದಲ್ಲಿ ಕಾಯದೆಯಿಂದ ಅವನ ವಶದಲ್ಲಿಯೆ ಉಳಿಯತಕ್ಕದ್ದು. ನಮ್ಮ ದೇಶದಲ್ಲಿ ಭೂಸಾಗುವಳಿ ಪದ್ಧತಿಗಳು ಪ್ರಾಂತ ಪ್ರಾಂತಗಳಲ್ಲಿ ಬೇರೆಯಾಗಿರುವವಲ್ಲದೆ ಸ್ಥಳ ಸ್ಥಳಗಳಲ್ಲಿಯೂ ವಿಭಿನ್ನವಾಗಿವೆ. ಅದುದರಿಂದ ಜನತೆಯ ಅವಶ್ಯಕತೆಗಳನ್ನನುಲಕ್ಷಿಸಿ ಇಡೀ ದೇಶದಲ್ಲಿ ಒಂದೇ ಬಗೆಯಾದ ಭೂಸಾಗುವಳಿ ಪದ್ಧತಿಯನ್ನು ಗೊತ್ತುಪಡಿಸುವದು ಅವಶ್ಯವಾಗಿದೆ. ಜಮೀನದಾರಿ ನಿರ್ಮೂಲನದ ನಂತರ ಯಾವ ಯಾವ ಬಗೆಯ ಸುಧಾರಣೆಗಳನ್ನು ಮಾಡತಕ್ಕದ್ದು ಎಂಬುದರ ಬಗ್ಗೆ ಸಂಗತಿಗಳನ್ನು ತಿಳಿದುಕೊಳ್ಳುವದಕ್ಕಾಗಿ ಸಾಗುವಳಿ ಸುಧಾರಣಾಸಮಿತಿಯು ದೀಗ ದೇಶದಲ್ಲಿ ಸಂಚರಿಸುತಿದೆ. ಅದು ಈ ಕೆಲಸವನ್ನು ಮಾಡಬೇಕಾಗಿದೆ.

ಒಕ್ಕಲಿಗನಿಗೆ ನ್ಯಾಯ್ಯವಾಗಿ ಸಲ್ಲತಕ್ಕದ್ದೆನ್ನೆಲ್ಲ ಅನೇಕ ವಿಧವಾಗಿ ಅವನಿಂದ ಕಸಿದುಕೊಳ್ಳಲಾಗಿದೆ. ದಲ್ಲಾಳಿಯು ನಡುವೆ ಬಂದದ್ದರಿಂದ ಭೂಮಿಯ ಮೇಲಿನ ಅವನ ಒಡೆತನವೇ ಹಾರಿಹೋದುದು ಇದರ ಒಂದು ಉದಾಹರಣೆ. ಅವರು ಲಾವಣಿಯೆಂದು ವಸೂಲ ಮಾಡುವ ಹಣದಲ್ಲಿಯೆ ಉತ್ಪಾದಕನ ಪರಿಶ್ರಮದ ಲಭ್ಯಾಂಶವು ಹೊರಟು ಹೋಗುತ್ತದೆ.

ಬೆಲೆಗಳನ್ನು ಮತ್ತು ಹಣದ ಸಾಧನಗಳನ್ನು ಬಳಕೆಯಲ್ಲಿ ತಂದುದು ಅವನ ಸಂಪತ್ತನ್ನು ಬಳೆದುಕೊಳ್ಳುವಲ್ಲಿ ಉಪಯೋಗಿಸಿದ ಎರಡನೆಯ ಪದ್ಧತಿಯು. ಈ ಪದ್ಧತಿಯಿಂದ ಒಕ್ಕಲಿಗರ ಉತ್ಪಾದನೆಯು ಬಹಳ ದೂರ ದೂರದ ಸ್ಥಳಗಳನ್ನು ಆಕರ್ಷಿಸಿದೆ ಮತ್ತು ಅದಕ್ಕೆ ವಿನಿಮಯವಾಗಿ ಬಹಳ ಕಡಮೆ ತರದ ಪ್ರತಿಫಲವು ಅಗ್ಗಧಾರಣೆಗಳ ರೂಪದಲ್ಲಿ ಅವರಿಗೆ ದೊರೆತದ್ದಾಗಿದೆ. ಈ ಅಗ್ಗಧಾರಣೆಗಳಾದರೋ ಉತ್ಪಾದಕರಿಗೆ ತಿಳಿಯದಂತೆ ಉತ್ಪಾದನೆಯ ವಿನಿಮಯ ಸಂಸ್ಥೆಗಳಿಂದ ಗೊತ್ತುಮಾಡಲ್ಪಟ್ಟದ್ದುಂಟು. ಉದಾಹರಣಾರ್ಥವಾಗಿ ಹಿಂದುಸ್ತಾನದಲ್ಲಿಯ ಉತ್ಪಾದನೆಯ ಧಾರಣೆಗಳು ಲಿವರಪೂಲ ಮತ್ತು ಚಿಕ್ಯಾಗೋದಲ್ಲಿಯ ಪೇಟೆಗಳಲ್ಲಿ ಗೊತ್ತುಮಾಡಲ್ಪಟ್ಟದ್ದುಂಟು. ಒಕ್ಕಲಿಗನ ಬೇಕು ಬೇಡಿಕೆಗಳಿಗೂ ಅವನ ವೆಚ್ಚ ಮತ್ತು ಬೆಲೆಗೂ ಯಾವ ಬಗೆಯ ಸಂಬಂಧವೂ ಇಲ್ಲ. ಸ್ವಾಭಾವಿಕವಾಗಿ ಇಂಥ ಪರಿಸ್ಥಿತಿಯಲ್ಲಿ ನಮ್ಮ ಒಕ್ಕಲಿಗರ ಆರ್ಥಿಕ ಅಜ್ಞಾನದ ದುರ್ಲಾಭಪಡೆದು ಅವನ ಉತ್ಪಾದನೆಯಲ್ಲಿ ನ್ಯಾಯ್ಯವಲ್ಲದ ಪಾಲನ್ನು ಹೊಡೆಯಬಹುದಾಗಿದೆ. ಹಿಂದುಸ್ತಾನದಲ್ಲಿಯ ಒಕ್ಕಲಿಗನೆಂದರೆ ಸಣ್ಣ ಕೂಸು ಇದ್ದಂತೆ. ಅವನಲ್ಲಿದ್ದ ಬೆಳ್ಳಿಯ ಬಟ್ಟಲದ ಬದಲು ಒಂದು ಆಟದ ಬೊಂಬೆಯನ್ನು ಕೊಟ್ಟು ಸಮಾಧಾನಪಡಿಸುವಂತೆ ಒಕ್ಕಲಿಗನ ಸ್ಥಿತಿಯಾಗಿದೆ. ಅರ್ಥಪದ್ಧತಿ ಗೊತ್ತುಪಡಿಸಿ ಮತ್ತು ಸಾರಿಗೆ ಸೌಕರ್ಯಗಳನ್ನು ಹೆಚ್ಚಿಸುವದರಿಂದ ಇದು ಸಾಧ್ಯವಾಗಿದೆ. ಈ ಸೌಕರ್ಯಗಳಾದರೋ ಹಿಂದುಸ್ತಾನದ ಭೂಮಿಗಳ ಬೆಳವಣಿಗೆಗೆ ಬಹಳ ಸಹಾಯಕವೆಂದು ಹೇಳಿಕೊಳ್ಳಲಾಗುತ್ತದೆ. ವಸ್ತುತಃ ಇವು ಪಕ್ಷಿಗಳಲ್ಲಿಯ ಜನತೆಯ ರಕ್ತವನ್ನು ಹೀರುವದಕ್ಕೆ ಉಪಯೋಗಿಸಿದ ಜಂಜ್ಜುಮುಳ್ಳಿನಲ್ಲಿಯ ಸೂಜಿಗಳಿದ್ದಂತೆ. ಹಣಕಾಸು ಮತ್ತು ಬೆಲೆಗಳ ಸಾಧನವು ನ್ಯಾಯ್ಯವಾದ ಮತ್ತು ಸಮಂಜಸ ರೀತಿಯಲ್ಲಿ ಉಪಯೋಗಿಸಲ್ಪಡುವಂತೆಮಾಡಬೇಕಾದರೆ ಈ ವಿಷಯವನ್ನು ಬಹಳ ಲಕ್ಷಪೂರ್ವಕ ಗಮನಿಸಬೇಕಾಗುತ್ತದೆ. ಮತ್ತು ಅದನ್ನು ಕಾರ್ಯರೂಪದಲ್ಲಿ ತರಬೇಕಾಗುತ್ತದೆ ಉದಾಹರಣಾರ್ಥವಾಗಿ, ಕೆಲವು ಸ್ಥಳಗಳಲ್ಲಿ ಕೆರೆಗಳಿದ್ದು ಬೇಕಾದಷ್ಟು ಮೀನುಗಳು ಅಲ್ಲಿ ಸಿಕ್ಕುತ್ತವೆ. ಆದರೆ ಸರಕಾರವು ತನ್ನ ಆದಳಿತಕ್ಕೆ ಬೇಕಾಗುವ ಹಣಕಾಸಿಗಾಗಿ ಕಂಟ್ರ್ಯಾಕ್ಟದಾರರಿಗೆ ಈ ಕೆರೆಗಳನ್ನು ಲಿಲಾವುಗಳಲ್ಲಿ ಕೊಟ್ಟುಬಿಡುವದುಂಟು. ಈ ಕಂಟ್ರ್ಯಾಕ್ಟದಾರರು ಮೀನುಗಳಿಗೆ ಹೆಚ್ಚು ಬೆಲೆ ಬರುವ ದೂರ ಸ್ಥಳಗಳಲ್ಲಿ ಅವನ್ನು ಮಾರುತ್ತಾರೆ. ಇದಕ್ಕಾಗಿ ಸರಕಾರದವರು ಸಾರಿಗೆ ಸೌಕರ್ಯವನ್ನು ಮೀನುಗಳನ್ನು ಸುಸ್ಥಿತಿಯಲ್ಲಿಡುವ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ಜನತೆಗೆ ನ್ಯಾಯ್ಯವಾಗಿ ದೊರೆಯತಕ್ಕ ಆಹಾರವನ್ನು ಅವರಿಂದ ಕಸಿದುಕೊಂಡು ನಡುವಿನ ದಲ್ಲಾಳರ ಮತ್ತು ಉತ್ಪಾದಕರಲ್ಲದವರ ಜೊಜ್ಜು ಬೆಳೆಸುವದಕ್ಕಾಗಿ ದೂರದ ಸ್ಥಳಗಳಿಗೆ ಕಳಿಸುವದಕ್ಕೆ ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆ. ಮಹಾಯುದ್ಧದ ಅನ್ಯಾಯವಿದು ಅದೇ ರೀತಿಯಾಗಿ ಒಕ್ಕಲಿಗರ ಹಾಲು ಮತ್ತು ಅತ್ಯಾವಶಕವಾಗಿ ಬೇಕಾಗುವ ಉಳಿದ ಪದಾರ್ಥಗಳನ್ನೂ ನೊದಲು ಅವರಿಗೆ ಪೂರೈಯಿಸದೆ ಅನುತ್ಪಾದಕರ ಕೈಗೆ ಅವು ದೊರೆಯುವಂತೆ ಮಾಡಿ ದೂರದ ಸ್ಥಳಗಳಲ್ಲಿ ಮಾರಲ್ಪಡುವಂತೆ ಯೋಜಿಸಲಾಗುತ್ತದೆ. ಅದುದರಿಂದ ಸ್ಥಳೀಯರ ಉತ್ಪಾದನೆಯು ಅವರ ಬೇಕು ಬೇಡಿಕೆಗಳಿಗಾಗಿಯೆ ಉಪಯೋಗಿಸಲ್ಪಡುವಂತೆ ಮತ್ತು ಅವರ ಬೇಡಿಕೆಗಳಿಗೆ ಪ್ರಥಮ ಪ್ರಾಶಸ್ತ್ಯ ಕೊಡುವಂತೆ ಮತ್ತು ಹೆಚ್ಚಾಗಿ ಉಳಿದ ಉತ್ಪಾದನೆಯನ್ನು ಮಾತ್ರ ನಗರ ಪಟ್ಟಣಗಳಿಗೆ ಕಳಿಸುವಂತೆ ಅತ್ಯಾಸನ ಬೇಕಾಗಿದೆ. ಉತ್ಪಾದಕರ ನ್ಯಾಯ್ಯವಾದ ಬೇಡಿಕೆಗಳನ್ನುಪೂರೈಸಿ ಹೆಚ್ಚಿಗೆ ಉಳಿದದೆಯೆಂಬುದನ್ನೂ ಖಾತ್ರಿ ಮಾಡಿಕೊಳ್ಳುವದೂ ಅವಶ್ಯ. ಸಮಾಜದ ವಿವಿಧ ಅಂಗಗಳಲ್ಲಿ ಪದಾರ್ಥಗಳ ಹಂಚಿಕೆ ಮಾಡುವಲ್ಲಿ ಅರ್ಥಪದ್ಧತಿಗೆ ಅವಶ್ಯಕವಾದ ಲಾಭದೃಷ್ಟಿಗೆ ಮಹತ್ವವನ್ನು ಕೊಡತಕ್ಕದ್ದಲ್ಲ.

(ಹರಿಜನ)

ಜೆ. ಸಿ. ಕುಮಾರಪ್ಪಾ ಅವರಿಂದ

ಇಂದಿನ ಮಹಾವ್ಯಕ್ತಿಗಳು

ಮುತ್ಸದ್ದಿತನದಲ್ಲಿ ಚರ್ಚಿಲ್, ಸ್ಟಾಲಿನ್, ಸ್ಮಟ್ಸ್, ಮಾಂಟಗೋಮೆರಿ, ಶಾ, ಐಸೆನ್ ಹಾವೆರ್, ಮೌಂಟಬ್ಯಾಟನ್, ಬೆವಿನ್, ಮೊಲಟೋವ್ ಮತ್ತು ಮಾರ್ಶಲ್.

ರಾಜತಂತ್ರದಲ್ಲಿ ಟ್ಲಂದಿಗಾಲೆ, ಫ್ರಾಂಕೋ, ಬೆನೆಸ್, ನೆಹ್ರು, ಪಿಜೀನ್, ಡಿವೆಲರಾ, ಚಾಯ್ನಾ ಅರ್ ಮತ್ತು ಬಿಯಾಂಗ್.

ವಿನೋದದಲ್ಲಿ ಚಾಪ್ಲೇನನೊಬ್ಬನೇ ಮೆಚ್ಚಿಗೆಗೆ ಅರ್ಹನು. ನಟನೆಯಲ್ಲಿ ಅಲಿವರ್ ಒಬ್ಬನೇ. ಬರಹಗಾರರಲ್ಲಿ ಶಾ, ಮೇಸ್ ಫೀಲ್ಡ್, ಮಾಗಂ, ಪ್ರೀಸ್ಟ್ಲಿ, ತ್ರಿವೇಲ್ಯನ್, ಓನೀಲ್, ಓಕೇಸಿ ಮತ್ತು ಥಾಮಸ್‌ಮ್ಯಾನ್.

ವಿಜ್ಞಾನದಲ್ಲಿ ಈನ್‌ಸ್ಟೈನ್, ವಾಗನ್ ವಿಲಿಯಮ್ಸ್, ಸ್ಟ್ರಾವಿನ್‌ಸ್ಕಿ. ಸಂಗೀತಗಾರರಲ್ಲಿ ಸ್ಟ್ರಾಸ್, ಸೈಬೆಲಿಯಸ್ ಮತ್ತು ಕ್ರೀಸ್ಲರ್.

ತತ್ವಶಾಸ್ತ್ರಜ್ಞರಲ್ಲಿ ಕ್ರೋಚೆ. ಮತ್ತು ಬರ್ಟರಾಂಡ್ ರಸ್ಸೆಲ್ಲರೊಬ್ಬರೇ. ಚಿತ್ರಕಾರರಲ್ಲಿ ಪಿಕಾಸೋ ಮತ್ತು ಜಾನ್; ಮತ್ತಾರೂ ಜಗತ್ಪ್ರಸಿದ್ಧರಲ್ಲ. ಆಟಗಾರರಲ್ಲಿ ಹಾಬ್ಸ್, ಬ್ರ್ಯಾಡ್‌ಮನ್, ಜೋಲೂಯಿ ಮತ್ತು ಗಾರ್ಡನ್ ರಿಚರ್ಡ್ಸ್.

ಮೇಲಿನ ಯಾವ ವರ್ಗದಲ್ಲಿ ಸೇರಿಸಬೇಕೆಂದರೂ ಒಬ್ಬ ಹೆಂಗಸೂ ನಮ್ಮ ದೃಷ್ಟಿಯಲ್ಲಿ ಎಷ್ಟೇ ತರ್ಕಿಸಿದರೂ ಅರ್ಹಳೆನಿಸಲಿಲ್ಲ, ಎಂದು "ನ್ಯೂಸ್‌ಕ್ರಾನಿಕಲ್" ಪತ್ರಿಕೆಯಲ್ಲಿ ಆಯಾನ್ ಮ್ಯಾಕ್ಲೇ ಬರೆಯುತ್ತಾನೆ.



ಜಗತ್ತಿನಲ್ಲಿಯೆ ಅತಿ ಸ್ಥೂಲ ದಂಪತಿಗಳು- ಇವರು ಬಾರ್ನಿ- ಹಾಗು ಬಾಯಿ- ಅಸ್ಲೇಲಿಯರ್ ದಂಪತಿಗಳಿದ್ದು ಜಗತ್ತಿನಲ್ಲಿಯೇ ಅತಿ ಸ್ಥೂಲರಾಗಿರುವರು. ಬಾರ್ನಿಯವರ ತೂಕವು ಸುಮಾರು ೫೦೦ ಪೌಂಡು, ಬಾಯಿ ಅವರ ತೂಕವು ೪೬೦ ಪೌಂಡು ಇದ್ದು ಇಂಗ್ಲಂಡದಲ್ಲಿ ಈಗ ನಡೆದಿರುವ ಸುಪ್ರಸಿದ್ಧ ಮಿಚ್ಯಾಮ ಜಾತ್ರೆಯಲ್ಲಿ ಇವರು ಪ್ರದರ್ಶಿಸಲ್ಪಟ್ಟಿರುವರು. ನಡುವೆ ನಿಂತ ಎಡಿಥ್ ಬಾರ್ಲೆ ಇವಳು ಜಗತ್ತಿನಲ್ಲಿಯೆ ಅತಿ ಗಿಡ್ಡಳಿದ್ದು ಅವಳ ತೂಕವು ೧೭ ಪೌಂಡು, ಎತ್ತರ ೩೨ ಇಂಚು ವಯಸ್ಸು ೩೦ ಇರುವದು.

ವಿ ವಿ ಧ ಪ್ರ ಪಂ ಚ

ತುಪ್ಪ

ಭಾರತದಲ್ಲಿ ವರ್ಷಂಪ್ರತಿ ವರ್ಷಕ್ಕೆ ೭೭ ಕೋಟಿ ರೂಪಾಯಿ ಬೆಲೆಯ ೨೫ ಲಕ್ಷ ಟನ್ ತುಪ್ಪ ತಯಾರಾಗುತ್ತದೆ. ಇದರಲ್ಲಿ ನೂರಕ್ಕೆ ೬೨ ಅಂಶ ಹಿಂದೀ ಪ್ರಾಂತಗಳಲ್ಲೂ ಉಳಿದ ಅಂಶ ಸಂಸ್ಥಾನಗಳಲ್ಲೂ ತಯಾರಾಗುತ್ತದೆ. ಪಂಜಾಬ್, ಸಂಯುಕ್ತಪ್ರಾಂತ, ಮದ್ರಾಸ್, ಬಿಹಾರಗಳು ಅನುಕ್ರಮವಾಗಿ ನೂರಕ್ಕೆ ೧೫, ೭, ೧೩, ೮, ೯, ೮ ಮತ್ತು ೫-೪ ಅಂಶ ತುಪ್ಪವನ್ನು ಪೂರಯಿಸುತ್ತವೆ. ಹೀಗೆ ಒಟ್ಟಿನಲ್ಲಿ ಐದನೆಯ ಮೂರಂಶ ತುಪ್ಪ ಉತ್ತರ ಮತ್ತು ಪಶ್ಚಿಮ ಹಿಂದುಸ್ತಾನದಿಂದಲೇ ಬರುತ್ತದೆ. ಉಳಿದ ಐದನೆಯ ಎರಡಂಶ ಹಿಂದುಸ್ತಾನದ ಉಳಿದ ಭಾಗಗಳಿಂದ ಬರುತ್ತದೆ. ಇಡೀ ದೇಶವನ್ನು ತೆಗೆದುಕೊಂಡರೆ ಭಾರತವು ಒಂದು ಚದುರ ಮೈಲಿಗೆ ೮-೯ ಮಣ, ಹಳ್ಳಿಯೊಂದಕ್ಕೆ ೨೧.೪ ಮಣ ಮತ್ತು ನೂರುಜನಕ್ಕೆ ೩.೬ ಮಣ ತುಪ್ಪವನ್ನು ಉತ್ಪಾದಿಸುತ್ತದೆ. ಗ್ವಾಲಿಯರಿನಲ್ಲಿ ಪ್ರತಿಯೊಬ್ಬನೂ ಹೆಚ್ಚು ಪರಿಮಾಣದಲ್ಲಿ ತುಪ್ಪ ತಿನ್ನುತ್ತಾನೆ; ಸಿಂಧದಲ್ಲೂ ಹಾಗೇ; ಮೊದಲಿನವರಲ್ಲಿ ೧೫೫ ಎರಡನೆಯವರಲ್ಲಿ ೧೧೨ ಸೇರುಗಳಷ್ಟು; ಹೈದರಾಬಾದಿನಲ್ಲೂ ಬಂಗಾಲದಲ್ಲೂ ೧-೧ ಮತ್ತು ೧-೩ ರಷ್ಟು, ಅಂದರೆ ೮೩ ಕಡಿಮೆ.



ಲಂಡನ್ನಿನಿಂದ ಪ್ಯಾರಿಸ್ಸಿಗೆ ೩೪ ನಿಮಿಷಗಳಲ್ಲಿ ಹಾರಬಲ್ಲ ಬ್ರಿಟಿಶ್ ಜೆಟ್ ಲೈನರ್ !

ಒಟ್ಟು ಉತ್ಪಾದಿಸಿದ ತುಪ್ಪದಲ್ಲಿ ಉತ್ಪಾದಕರು ತಮ್ಮ ಖರ್ಚಿಗಾಗಿ ನೂರರಲ್ಲಿ ೪೦ ಅಂಶದಷ್ಟನ್ನು ಇಟ್ಟುಕೊಂಡು ಉಳಿದ ೬೦ ಅಂಶವನ್ನು ಮಾರುತ್ತಾರೆ. ಈ ಶತಮಾಂಶ (Percentage) ಬೇರೆ ಬೇರೆ ಭಾಗಗಳಲ್ಲಿ ಭಿನ್ನ ಭಿನ್ನ ಇರುತ್ತದೆ. ಹಾಗೆ ಭಿನ್ನವಾಗಿರಲು ಉತ್ಪಾದಕನ ಬಗೆ, ಸ್ಥಾನ, ಪೇಟೆಯ ಸಾಮಿಪ್ಯ, ಊಟದ ಪ್ರಾದೇಶಿಕ ರೀತಿ ಇವೇ ಕಾರಣ.

ಭಾರತವು ೬೬ ಸಾವಿರ ಮಣ ತುಪ್ಪವನ್ನು ಭೂಮಾರ್ಗದ ಮೂಲಕ ನೇಪಾಳದಿಂದ ತರಿಸುತ್ತದೆ. ಆದರೆ ಇತ್ತೀಚಿಗೆ ಆ ಆಯಾತಾಂಶ ಕಡಿಮೆಯಾಗುತ್ತ ಬಂದಿದೆ. ಅದೇ ಮೇರೆಗೆ ಸುಮಾರು ೪೦ ಲಕ್ಷ ರೂಪಾಯಿ ಬೆಲೆಬಾಳುವ ೬೬ ಸಾವಿರ ಮಣ ತುಪ್ಪವನ್ನು ಅದು ಸ್ಟ್ರೇಟ್ ಸೆಟ್ಲ್‌ಮೆಂಟ್, ಬ್ರಹ್ಮದೇಶ, ಸಂಯುಕ್ತ ಮಲಯ ಸಂಸ್ಥಾನ, ಮತ್ತು ಅಫ್ರಿಕಗಳಿಗೆ ನಿರ್ಯಾತವಾಗುತ್ತದೆ. ಪರಿಸ್ಥಿತಿ ಹದಕ್ಕೆ ಬಂದೊಡನೆಯೇ ನಿರ್ಯಾತವನ್ನು ಇನ್ನೂ ಹೆಚ್ಚಿಸುವುದು ಸಾಧ್ಯವಿದೆಯೆನ್ನಲಾಗಿದೆ. ಹೀಗೆ ಮಾಡಬೇಕಾದರೆ, ಮೊದಲು ಸ್ವದೇಶಕ್ಕೆ ಸಾಕೆಂಬಷ್ಟು ಉತ್ಪಾದನೆ ಮಾಡಿ ಆ ಬಳಿಕ ಒಳ್ಳೆಯ ವರ್ಗೀಕೃತ ತುಪ್ಪವನ್ನೇ ನಿರ್ಯಾತಕ್ಕೈದುವಂತೆ ನೋಡಿಕೊಳ್ಳಬೇಕು.

೧೯೪೪ ರಲ್ಲಿ ಭಾರತದಲ್ಲಿ ಒಟ್ಟು ೫೯ ವರ್ಗೀಕರಣ ಕಾರ್ಯಾಲಯಗಳಿದ್ದವು. ಅವು ೫ ಕೋಟಿ ೬೦ ಲಕ್ಷ ರೂಪಾಯಿಯ ತುಪ್ಪವನ್ನು ವರ್ಗೀಕರಿಸಿದವು. ಆದರೂ ಅದು ಒಟ್ಟಿನಲ್ಲಿ ಕೇವಲ ೪.೫ ಶತಮಾಂಶ ತುಪ್ಪವನ್ನಷ್ಟೇ ಗುರುತು ಮಾಡಲು ಸಾಧ್ಯವಾಯಿತು. ಉತ್ಪಾದಕರ ಅನುಕೂಲಕ್ಕಾಗಿ ಸಹಕಾರ ತತ್ವದಂತೆ ವರ್ಗೀಕರಣವನ್ನು ಕೈಗೊಳ್ಳಬೇಕು.

ಇದಲ್ಲದೆ ಹಿಂದೀ ಸರಕಾರದ ಮಾರಾಟ ಮತ್ತು ಪರಿಶೀಲನ ಶಾಖೆಯು ಈ ಕೆಳಗಿನ ಸಲಹೆಗಳನ್ನು ಮಾಡಿದೆ :

೧. ಹಳ್ಳಿಗಳಲ್ಲಿ ಹಾಲಿನ ಮತ್ತು ಬೆಣ್ಣೆಯ ಉತ್ಪಾದನೆಯನ್ನು ಸುಧಾರಿಸಿದ ಪದ್ಧತಿಗಳಿಂದ ಹೆಚ್ಚುಮಾಡಿ ತುಪ್ಪದ ತಯಾರಿಕೆ ಮತ್ತು ಬಳಕೆಗಳನ್ನು ಹೆಚ್ಚಿಸಬೇಕು.

೨. ತೂಕ ಅಳತೆಗಳ ಕಾಯದೆಯನ್ನು ಬಿಗಿಯಾಗಿ ಅಮಲಿಗೆ ತಂದು, ಮಾರುವ ಮೂಲ ಪರಿಣಾಮಗಳನ್ನು ಒಂದು ಸಾಮಾನ್ಯ ಮಟ್ಟಕ್ಕೆ ತರಬೇಕು.

೩. ನಿಯಂತ್ರಿತ ಪೇಟೆ ಮತ್ತು ಸುಲಭವಾಗಿ ಸಿಕ್ಕುವ ಅನುಕೂಲಗಳನ್ನು ಸ್ಥಾಪಿಸಿ ತುಪ್ಪದ ಪೇಟೆಗಳನ್ನು ಕ್ರಮಬದ್ಧವಾದ ನಿಯಂತ್ರಣಪದ್ಧತಿಗೆ ಒಳಪಡಿಸಬೇಕು.

೪. ಆಹಾರ ನಿಯಂತ್ರಣದ ಕಾನೂನುಗಳನ್ನು ಭಿನ್ನ ಭಿನ್ನ ಪ್ರಾಂತಗಳಲ್ಲೆಲ್ಲ ಒಂದೇ ಸಮವಾಗಿ ಅಮಲಿನಲ್ಲಿರುವಂತೆ ನೋಡಿಕೊಳ್ಳಲು ಆರೋಗ್ಯದೃಷ್ಟಿಯಿಂದ ಆಹಾರದ ಉತ್ಪಾದನೆ ವಿತರಣ ಮತ್ತು ಮಾರಾಟದ ಬಗ್ಗೆ ಕೇಂದ್ರ ಕಾಯಿದೆಯನ್ನು ಜಾರಿಗೆ ತರಬೇಕು.

ಸೂರ್ಯಶಕ್ತಿ ಸಂಗ್ರಹ

ಕೆಲಕಾಲದ ಹಿಂದೆ ಡಾ. ಸಿ ಜಿ. ಅಬ್ಬಾಟರು ಭವಿಷ್ಯ ನುಡಿದಂತೆ ಅವರೀಗ ೨೦ ಅಂಗುಲ ಉದ್ದ ಮತ್ತು ೧೫ ಅಂಗುಲ ಅಗಲವುಳ್ಳ ಕನ್ನಡಿಯೊಂದರ ಮೂಲಕ ಸೂರ್ಯಶಾಖವನ್ನು ಹಿಡಿದು ಬಿಸಿಲಿದ್ದಾಗ ೫ ಗ್ಯಾಲನ್ ನೀರನ್ನು ೪೦ ನಿಮಿಷದಲ್ಲಿ ಕಾಯಿಸುತ್ತಾರೆ.

ಮುಕ್ಕೊಬ್ಬ ನವನಿರ್ಮಿತಿಕಾರನು ಮನೆಯ ಮಾಡಿನಲ್ಲಿ ಬಿಸಿಲನ್ನು ಸಂಗ್ರಹಿಸಿ ಅದನ್ನು ಬಳಕ್ಕೆ ಕಳಿಸಿ, ವಿದ್ಯುದ್ದೀಪದ ಬದಲು ಬಳಸಿಕೊಳ್ಳುತ್ತಿದ್ದಾನೆ. ಕ್ರಿ. ಪೂ. ೨೧೨ ರಲ್ಲಿ ಆರ್ಕಿಮಿಡೀಸನು ಅದ್ಭುತವಾದ ಕನ್ನಡಿಗಳಿಂದ ಸೂರ್ಯ ಕಿರಣಗಳ ಉಷ್ಣವನ್ನು ಹಿಡಿದು ರೋಮನ್ನರ ಹಡಗುಗಳ ಮೇಲೆ ಬಿಟ್ಟು ಅವನ್ನು ಸುಟ್ಟ ತತ್ವದಂತೆ ಡಾ. ಫ್ರೆಡರಿಕೋ ಮೊಲೀರೋ ಎಂಬ ರಶಿಯದಲ್ಲಿ ನಿಯುಕ್ತರಾದ ಸ್ಪಾನಿಶ್ ಎಂಜಿನಿಯರರು ಅನೇಕ ವರ್ಷಗಳಿಂದ ಪ್ರಯೋಗ ನಡೆಸುತ್ತಿದ್ದಾರೆಂದೂ ಸುದ್ದಿಯಿದೆ.

ಡಾ. ಮೊಲೀರೋ ಅವರು ತಮ್ಮ ಪ್ರಯೋಗಶಾಲೆಯಲ್ಲಿ ತಿರುಗುತ್ತಿರುವ ಕನ್ನಡಿಗಳನ್ನು ಬಳಸುತ್ತಿರುವುದರಿಂದ ಸೂರ್ಯನು ಎತ್ತ ತಿರುಗಿದರೂ ಅತ್ತಲಿಂದ ಬಿಸಿಲ ತಾಪವನ್ನು ಸಂಗ್ರಹಿಸಬಹುದಾಗಿದೆ. ಬೇಸಿಗೆಯಲ್ಲಿ ೧೫೦೦ ಡಿಗ್ರಿ ಉಷ್ಣವನ್ನು ಸಂಗ್ರಹಿಸಲಾಗುವುದು. ಚಳಿಗಾಲದಲ್ಲಿ ಕೂಡ ಅತ್ಯುಷ್ಣವಾದ ಹವೆಯನ್ನು ಡಾಕ್ಟರರು ಆ ಮೂಲಕ ತಯಾರಿಸಿದ್ದಾರಂತೆ. ಕಬ್ಬಿಣ ಮೊದಲಾದ ಲೋಹಗಳನ್ನು ಕೂಡ ಅವರು ಆ ಉಷ್ಣದಿಂದ ಕರಗಿಸಿರುವರೆಂದು ತಿಳಿಯುತ್ತದೆ.

ಅಮೇರಿಕನ್ನರ ಚಾಂಚಲ್ಯ

“ ಅಮೇರಿಕದ ಮಹಾ ಮುತ್ಸದ್ದಿಗಳ ಬುದ್ಧಿ ಚಾಂಚಲ್ಯಕ್ಕೆ ಇತಿ ಮಿತಿ ಇಲ್ಲದಾಗಿದೆ. ಒಮ್ಮೆ ರಶಿಯದ ಶಾಂತಿ ಸೂಚನೆಗಳೆಲ್ಲ ಕಪಟವೆಂದು ತಿರಸ್ಕರಿಸಿದರೆ ಇನ್ನೊಮ್ಮೆ ರಶಿಯ ಏನು ಹೇಳಿದರೂ ಅದು ಶಾಂತಿಸಂಧಾನಕ್ಕೆ ಆಹ್ವಾನ ಎಂದು ತಿಳಿಯುತ್ತಾರೆ. ಮತ್ತೆ ಭಾನುವಾರ ಬಂತೆಂದರೆ ಪತ್ರಿಕಾಕರ್ತರ ಒಂದು ವಿಶೇಷ ಸಭೆ ಕರೆಸಿ ಬಹಳ ಗಡಿಬಿಡಿಯಿಂದ ಅಮೇರಿಕದ ಸಾರ್ಜಂಟನನ್ನು ರಶಿಯದ ಹೆಂಗಸೊಬ್ಬಳು ಕೆಡಿಸಿ ಬಿಟ್ಟಳೆಂದು ಸುದ್ದಿ ಸಾರುತ್ತಾರೆ” “ಎಂದು ಅಮೇರಿಕದ ಸುದ್ದಿ ಮತ್ತು ಜಗತ್ತಿನ” ವರದಿ ಎಂಬ ಪತ್ರಿಕೆಯಲ್ಲಿ ಇದೆ.

ವಿಲಾಸವಾಸರಿಗೆ ಬುದ್ಧಿ ಚಾಂಚಲ್ಯ ಸ್ವಾಭಾವಿಕ. ತಾವೇನು ಮಾಡುತ್ತೇವೆಂಬುದು ತಮಗೇ ತಿಳಿಯುವುದಿಲ್ಲ. ತಮ್ಮ ದೋಷ ಮರೆತು ಅನ್ಯರೇ ಸದಾ ತಪ್ಪುಗಾರರೆಂಬ ಭಾವನೆ ಹುಟ್ಟುತ್ತದೆ. ಇದು ಅನುಭವಸಿದ್ಧವಾದ ಮಾತು. ರಶಿಯದ ಗ್ರಾಮಿಕೋರವರ ಗಂಡುತನಕ್ಕೆ ಅಮೇರಿಕದ ಹೆಂಗಳೆಯರು ಮರುಳಾಗಿದ್ದಾರಂತೆ. ಆದರೆ ಅಲ್ಲಿಯ ಗಂಡಸರಿಗೆ ಅದನ್ನು ಕಂಡರಾಗದು! ಹೇಡಿಗಳಿಗೆ ಶೂರನನ್ನು ಕಂಡರೆ ಹಗೆತನ, ಇದು ಹಾಗಾಯಿತು. ಅದಕ್ಕೆ “ಫ್ರೀ ಪ್ರೆಸ್” ಪತ್ರಿಕೆಯಲ್ಲಿ ಅಮೇರಿಕಕ್ಕೊಂದು ಹೆಂಗಸೊಬ್ಬಳು ಅಧ್ಯಕ್ಷೆಯಾದರೆ ಉಭಯ ರಾಜ್ಯಗಳಲ್ಲಿ ಸೌಹಾರ್ದ ಬೆಳೆದು ಯುದ್ಧದ ಸಂಭವ ತಪ್ಪಬಹುದು ಎಂದು ಒಮ್ಮೆ ಬರೆಯಲಾಗಿತ್ತು. ಇದೂ ಒಂದು ನ್ಯಾಯವಾದ ಮಾತಲ್ಲವೆ?

೧೯೫೫ ರ ಜನಸಂಖ್ಯೆ

ಗುಂಥರ್ ಸ್ಟೀನರು ಜಗತ್ತಿನ ನಾನಾ ರಾಷ್ಟ್ರಗಳ ಜನಸಂಖ್ಯೆಯ ಇಂದಿನ ಬೆಳವಣಿಗೆಯ ಪ್ರಮಾಣವನ್ನು ಆಧರಿಸಿ ೧೯೫೫ ರಷ್ಟು ಹೊತ್ತಿಗೆ ಅಲ್ಲಲ್ಲಿ ಎಷ್ಟೆಷ್ಟು ಸಂಖ್ಯಾವೃದ್ಧಿಯಾಗುವುದೆಂಬುದನ್ನು ಲೆಕ್ಕಹಾಕಿದ್ದಾರೆ.

ಇನ್ನು ೭ ವರ್ಷಗಳಲ್ಲಿ ಭಾರತವು ಜಗತ್ತಿನ ರಾಷ್ಟ್ರಗಳಲ್ಲೆಲ್ಲ ಹೆಚ್ಚು ಜನಬಲವುಳ್ಳ ರಾಷ್ಟ್ರವಾಗುವುದೆಂದು ಸ್ಟೀನರು ಭವಿಷ್ಯ ಹೇಳಿದ್ದಾರೆ. ಗಂಡಸು, ಹೆಂಗಸು, ಮಕ್ಕಳು ಸಹಿತ ಭಾರತದ ಜನಸಂಖ್ಯೆ ೪೫॥ ಕೋಟಿಗೇರುವುದಂತೆ. ಇದರಲ್ಲಿ ಪಾಕಿಸ್ತಾನವೂ ಸೇರಿದೆ. ಚೀನೀಯರು ಅಷ್ಟು ಹೊತ್ತಿಗೆ ಹೆಚ್ಚೆಂದರೆ ೪೪ ಕೋಟಿಯಷ್ಟಾಗುವರೆಂದು ಅವರು ತರ್ಕಿಸಿದ್ದಾರೆ.

ಈಗ ರಶಿಯದಲ್ಲಿ ೧೯೧/೩ ಕೋಟಿಯಿದೆ. ಅದು ೧೯೫೫ ರಲ್ಲಿ ೨೧ ಕೋಟಿಗೆ ಏರಬಹುದಾಗಿದೆ. ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ೧೪ ರಿಂದ ೧೫ ಕೋಟಿಗೆ ಹೋಗಬಹುದು. ಉಳಿದ ಏಶಿಯದ ರಾಷ್ಟ್ರಗಳಲ್ಲಿ ಒಟ್ಟು ೩೪ ರಿಂದ ೩೮॥ ಕೋಟಿಗಳ ವರೆಗೆ ಹೋಗಬಹುದು.

ರಶಿಯವನ್ನು ಬಿಟ್ಟು ಮಿಕ್ಕ ಯುರೋಪ್ಯ ರಾಷ್ಟ್ರಗಳಲ್ಲಿ ೩೮ ರಿಂದ ೪೦ ಕೋಟಿಗಳಷ್ಟು ಜನಾಭಿವೃದ್ಧಿಯಾದೀತು. ಸಂಯುಕ್ತ ಸಂಸ್ಥಾನವನ್ನುಳಿದು ಅಮೇರಿಕದ ಜನಸಂಖ್ಯೆ ೧೬ ರಿಂದ ೧೯ ಕೋಟಿಗೇರಬಹುದು. ಆಫ್ರಿಕದಲ್ಲಿ ೧೭ ರಿಂದ ೧೯ ಕೋಟಿಗಳಾಗಬಹುದು. ಓಶಿಯೇನಿಯದಲ್ಲಿ ೧ ರಿಂದ ೧। ಕ್ಕೇರಬಹುದು. ಹೀಗೆ ಇಡೀ ಜಗತ್ತಿನ ಜನಸಂಖ್ಯೆ ೨೨೫ ರಿಂದ ೨೪೪ ಕೋಟಿಗಳಷ್ಟಾಗಬಹುದು. ಏಶಿಯದಲ್ಲಿ ಒಟ್ಟು ೧೨೮ ಕೋಟಿಗಳಾಗಿ ಇಡೀ ಮಾನವರ ಸಂಖ್ಯೆಯಲ್ಲಿ ನೂರಕ್ಕೆ ೫೨॥ ರಷ್ಟಾಗಿ ನಿಲ್ಲಬಹುದು.

ಮಹಾಯುದ್ಧಕ್ಕೆ ಬಲಿ

ಎರಡನೆಯ ಮಹಾಯುದ್ಧವು ಜಗತ್ತಿನಿಂದ ಎಷ್ಟೆಷ್ಟು ಜನಧನಗಳನ್ನು ಬಲಿತೆಗೆದುಕೊಂಡಿತೆಂಬುದನ್ನು ಈ ಕೆಳಗೆ ಅಂದಾಜು ಮಾಡಲಾಗಿದೆ :—

(೧) ಯುದ್ಧರಂಗದಲ್ಲಿ ಸತ್ತ ಗಂಡಸರು ೩,೨೦,೦೦,೦೦೦.

(೨) ಸ್ಥಾನಬದ್ಧತೆಯಲ್ಲಿ ಕೊಲೆಹೊಂದಿದ ಗಂಡಸರು, ಹೆಂಗಸರು ಮತ್ತು ಮಕ್ಕಳು ೨,೬೦,೦೦,೦೦೦.

(೩) ವಿಮಾನ ದಾಳಿಯಿಂದ ಸತ್ತ ಗಂಡಸರು, ಹೆಂಗಸರು ಮತ್ತು ಮಕ್ಕಳು ೨,೦೦,೦೦,೦೦೦.

(೪) ಯುರೋಪು ಒಂದರ ಮೇಲೆ ಹಾಕಿದ ಟನ್ನುಗಟ್ಲೆ ಬಾಂಬು—೨೪,೨೯,೪೭೫.

(೫) ಅಂಗಹೀನರು ೨,೦೦,೦೦,೦೦೦.

(೬) ನೈತಿಕ ಮತ್ತು ಮಾನಸಿಕ ಹಾನಿಗೊಳಗಾದವರು ಅಸಂಖ್ಯ.

(೭) ಯುದ್ಧಕ್ಕೆ ತಗುಲಿದ ಖರ್ಚು ೩೭೫೦೦,೦೦,೦೦೦ ಡಾಲರ್.

(೮) ಒಟ್ಟು ಯುದ್ಧದಲ್ಲಿ ಸತ್ತವರು ೭,೦೦,೦೦,೦೦೦.

ಜನಮತ

ಅರ್ಜಿಯ ಪರಿಶೀಲನೆ

ಭಾರತ ಸರಕಾರದ ಪ್ರತಿಯೊಂದು ಖಾತೆಯಲ್ಲೂ ಬಂದ ಅರ್ಜಿಗಳನ್ನು ೬ ತಿಂಗಳುಗಳಾದರೂ ತನಿಖೆ ಮಾಡದೆ ಮೂಲೆಗೆಸೆಯುವರು. ಕಾರಣ ಇಂಥ ಸಂಗತಿಗಳಲ್ಲಿ ಪ್ರತಿಯೊಂದು ಖಾತೆಯ ಮೇಲಧಿಕಾರಿಗಳು ಅದರ ತನಿಖೆ ಮಾಡುವಂತೆ ಕೂಡಲೆ ವ್ಯವಸ್ಥೆಯಾಗಬೇಕು ಅಲ್ಲದೆ ಸದರ ಅರ್ಜಿಯಕರ್ತರಿಗೆ ಹುಕುಮನ್ನು ಕೊಡಬೇಕು. ಇಲ್ಲದಿದ್ದರೆ ಇನ್ನೂ ಬರೆದುಕೊಂಡು ಬಹಳ ನಷ್ಟವನ್ನು ಅನುಭವಿಸುವ ಹೊತ್ತು ಜನರಿಗೆ ಬರಬಹುದು. ಹೀಗೆ ನಷ್ಟಕ್ಕೆ ಗುರಿಯಾಗದಂತೆ ಪ್ರತಿಯೊಂದು ಖಾತೆಗೆ ಬಂದ ಅರ್ಜಿಗಳನ್ನು ಒಂದೇ ತಿಂಗಳಲ್ಲಿ ತನಿಖೆ ಮಾಡುವಂತೆ ಸರಕಾರವು ಯೋಗ್ಯ ವ್ಯವಸ್ಥೆ ಇಡಬೇಕು ಅಥವಾ ತನಿಖೆ ಮಾಡಲು ಬರಲಾರದಿದ್ದರೆ ಅರ್ಜದಾರನಿಗೆ ತಿಳಿಸಬೇಕು. ಹೀಗೆ ಮಾಡದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಕಾರಣ ಇಂಥ ತೊಂದರೆಗಳನ್ನು ದೂರ ಪಡಿಸಿ ಜನರ ಹಿತವನ್ನು ಸಾಧಿಸಬೇಕಾಗಿ ಪ್ರತಿಯೊಂದು ಖಾತೆಯ ಮೇಲಧಿಕಾರಿಗಳಲ್ಲಿ ಪ್ರಾರ್ಥಿಸುವೆನು.

—ಓರ್ವ ಶಿಕ್ಷಕ

* * *

ಮಲೆನಾಡಿನಲ್ಲಿ ವನ್ಯ ಮೃಗಗಳ ಹಾವಳಿ

ದಕ್ಷಿಣ ಕನ್ನಡ ಜಿಲ್ಲೆಯ ಮೂಡು ಪ್ರದೇಶವಾದ ಪುತ್ತೂರು ತಾಲೂಕಿನ ಮೂಡು ಭಾಗವು ನಿಬಿಡವಾದ ಅರಣ್ಯಗಳಿಂದ ತುಂಬಿದೆ. ಈ ಅರಣ್ಯಗಳಲ್ಲಿ ಹೆಚ್ಚಿನ ಭಾಗವು ಸುರಕ್ಷಿತ ಕಾಡುಗಳಾಗಿ (Reserve forests) ವಿಂಗಡಿಸಲ್ಪಟ್ಟಿವೆ. ಈ ಕಾಡುಗಳ ಮಗ್ಗುಲಲ್ಲಿ ಫಲವತ್ತಾದ ಹೊಲಗಳು, ತೋಟಗಳು ಇವೆ. ಈಗ ಹೊಲಗಳಲ್ಲಿರತಕ್ಕ ಭತ್ತದ ಸಸಿಗಳು ತೆನೆ ಬಿಡಲು ಪ್ರಾರಂಭಿಸಿದೆ. ಈ ಸಮಯದಲ್ಲಿ ಈ ಅರಣ್ಯಗಳಿಂದ ಕಾಡು ಹಂದಿಗಳು ಹಿಂಡು ಹಿಂಡಾಗಿ ಬಂದು ಬೆಳೆಯನ್ನು ನಾಶಪಡಿಸುತ್ತವೆ. ಭತ್ತವನ್ನು ಮಾತ್ರವಲ್ಲ, ರೈತನು ಬೆಳೆಸಿದ ಕಬ್ಬು ಮತ್ತು ತರಕಾರಿಗಳನ್ನೂ ನಾಶಪಡಿಸುತ್ತವೆ.

ಇಷ್ಟುಮಾತ್ರವಲ್ಲದೆ, ಈ ಅರಣ್ಯಗಳಲ್ಲಿ ಇರತಕ್ಕ ಹುಲಿ, ಚಿರತೆಯಂತಹ ಕ್ರೂರ ಮೃಗಗಳು ರೈತರ ಜಾನುವಾರುಗಳನ್ನು ಮೇವಿಗೆ ಬಿಟ್ಟಾಗ ಹಿಡಿದು, ಕೊಂದುಬಿಡುತ್ತವೆ.

ಆದುದರಿಂದ ಸರಕಾರದವರು ಈ ಕಡೆ ದೃಷ್ಟಿ ಇಟ್ಟು ವನ್ಯ ಪಶುಗಳ ಬೇಟೆಯಾಡಿಸಿ, ರೈತರ ಗೋಳನ್ನು ನಿವಾರಿಸುವರೇ ?

—ಕೋಟೆ, ಗಣೇಶ ಸುಬ್ಬಪ್ಪಯ್ಯ

ಖೊಟ್ಟಿ ನಾಣ್ಯ ತಯಾರಿಸಿದ್ದಕ್ಕೆ ಸಶ್ರಮ ಶಿಕ್ಷೆ

ಅಹಮ್ಮದಾಬಾದಲ್ಲಿ ಖೊಟ್ಟಿ ನಾಣ್ಯ ತಯಾರಿಸಿದ ಬಗ್ಗೆ ಆ್ಯಡಿಶನಲ್ ಸೆಶನ್ಸ್ ಜಜ್ಜರು ಓರ್ವ ಪೋಲೀಸನಿಗೆ ಮತ್ತು ಈರ್ವರು ಪತ್ತಾರರಿಗೆ ಮೂರು ವರ್ಷಗಳ ಶಿಕ್ಷೆ ವಿಧಿಸಿದರು.

ಹಿಂದುಸ್ತಾನದ ಹಿರಿಯೋಲಗ

ಪಾಕಿಸ್ತಾನದ ನಿಜರೂಪ
ಆಮೂಲಾಗ್ರ ಮೋಸವೇ
ಜವಾಹರಲಾಲರ ನಿರೂಪಣೆ

ಹಿಂದುಸ್ತಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ತಾ ೭ ರಂದು ಹಿರಿಯೋಲಗದಲ್ಲಿ ಕಾಶ್ಮೀರದ ಬಗ್ಗೆ ಕೊಟ್ಟ ನಿರೂಪಣೆಯಲ್ಲಿ ಹೀಗೆ ಹೇಳಿದರು.

ಕಳೆದ ಹತ್ತು ತಿಂಗಳಿಂದಲೂ ಪಾಕಿಸ್ತಾನವು ಕಾಶ್ಮೀರ ಯುದ್ಧದಲ್ಲಿ ತನ್ನ ಅಂಗವಿಲ್ಲವೆಂದೇ ಸಾಧಿಸುತ್ತ ಬಂದಿತು. ಆದರೆ ಇಂದು ಕಾಶ್ಮೀರ ಸಮಿತಿಯ ಎದುರು ತನ್ನ ಸೈನ್ಯ ಕಾಶ್ಮೀರದಲ್ಲಿ ಇದೆ ಎಂದು ಅಧಿಕೃತವಾಗಿ ಒಪ್ಪಿಕೊಂಡಿದೆ. ಇದರಿಂದ ಭದ್ರತಾ ಮಂಡಲದ ಮುಂದೆ ಸುಳ್ಳು ಮೋಸಗಳ ಮೂಲಕ ಮಂಡಿಸಿದ ಪಾಕಿಸ್ತಾನದ ವಾದವು ಕುಸ್ಸಳಿಸಿ ಹೋಗಿರುವದಲ್ಲದೆ ಅದರ ಈ ನೈತಿಕ ಪತನವು ಜಗತ್ತಿಗೇ ಇಂದು ತಿಳಿದು ಹೋಗಿದೆ.

ಜಾಗತಿಕ ಶಾಂತಿಯನ್ನೂ ಯುಕ್ತ ರಾಷ್ಟ್ರ ಸಂಘದ ಗೌರವವನ್ನೂ ಕಾಯಲು ಹಿಂದುಸ್ತಾನ ಸರಕಾರವು ಕಾಶ್ಮೀರ ಸಮಿತಿಯು ಸೂಚಿಸಿದಂತೆ ಕಾಶ್ಮೀರದ ಯುದ್ಧವನ್ನು ನಿಲ್ಲಿಸಲು ಅನುಮಾನವಿಲ್ಲದೆ ಒಪ್ಪಿತು. ಆದರೆ ಪಾಕಿಸ್ತಾನವು ಈ ಸೂಚನೆಯನ್ನು ಧಿಕ್ಕರಿಸಿತಲ್ಲದೆ ಯುದ್ಧ ನಿಲ್ಲಿಸುವ ಕೆಲಸ ಕಾಶ್ಮೀರ ಆಝಾದ ಸರಕಾರಕ್ಕೆ ಸಂಬಂಧ ಪಟ್ಟಿದ್ದೆಂದೂ ತಾನು ಈ ಬಗ್ಗೆ ಏನನ್ನೂ ಮಾಡುವಂತಿಲ್ಲವೆಂದೂ ತನ್ನ ಹೊಣೆಯನ್ನೇ ಹಾರಿಸಿಕೊಂಡು ಬಿಟ್ಟಿದೆ.

ಪಾಕಿಸ್ತಾನದ ಆಕ್ರಮಣ ಶೀಲ ಹಾಗೂ ಮೋಸಗೆಟ್ಟ ವರ್ತನದಿಂದ ಅಂತಾರಾಷ್ಟ್ರೀಯ ಪ್ರತಿಕ್ರಿಯೆಗಳಾಗುವದು ಅನಿವಾರ್ಯವೂ ವಿಚಾರಾರ್ಹವೂ ಆಗಿದೆ. ಈ ಬಗ್ಗೆ ಕಾಶ್ಮೀರ ಸಮಿತಿಯವರು ಇನ್ನೂ ವಿಚಾರ ಮಾಡಬೇಕಾಗಿರುವದರಿಂದ ನಾನು ನನ್ನ ಅಭಿಪ್ರಾಯವನ್ನು ಈಗ ವ್ಯಕ್ತಪಡಿಸಿದರೆ ಸಮಿತಿಯನ್ನು ಪೇಚಿನಲ್ಲಿ ಹಾಕಿದಂತಾದೀತು. ಈ ಕಾರಣದಿಂದಲೇ ಸಮಿತಿಯ ಸಂಧಾನವು ಸೂಕ್ಷ್ಮ ಮಟ್ಟದಲ್ಲಿರುವಾಗ ವಿವರಗಳನ್ನೂ ಪತ್ರ ವ್ಯವಹಾರವನ್ನೂ ಪ್ರಕಟಿಸಿರಲಿಲ್ಲ. ಕಾಶ್ಮೀರದ ದಾಳಿಯಲ್ಲಿ ಪ್ರಾರಂಭದಿಂದಲೇ ಪಾಕಿಸ್ತಾನದ ಸೈನಿಕರ ಅಂಗವಿದೆಯೆಂದು ನಮಗೆ ಗೊತ್ತಿತ್ತು, ಈಗ ಅದು ಜಗತ್ತಿಗೇ ಗೊತ್ತಾಗಿದೆ. ಭದ್ರತಾ ಮಂಡಲದೆದುರು ನಾವು ಇದನ್ನೇ ಹೇಳಿದೆವು. ಪಾಕಿಸ್ತಾನದಲ್ಲಿ ಹಾದು ದಾಳಿಗಾರರು ಬರುತ್ತಿರುವರು. ಅದನ್ನು ಪಾಕಿಸ್ತಾನವು ತಡೆಯಬೇಕು ಎಂದೇ ಬೇಡಿದೆವು. ಪಾಕಿಸ್ತಾನವು ದಾಳಿಗಾರರಿಗೆ ಸಹಾಯ ನೀಡಕೂಡದು ಎಂದು ಬಿನ್ನವಿಸಿದೆವು. ಆದರೆ ತನ್ನ ಮೇಲೆ ಭದ್ರತಾ ಮಂಡಲದಲ್ಲಿ ಇಂತಹ ಆರೋಪ ಹೊರಸಿದ್ದೇ ತಪ್ಪೆಂದೂ ಇದು ಪಾಕಿಸ್ತಾನದ ಅಪಮಾನವೆಂದೂ ಆಕ್ರೋಶ ಮಾಡಿ ದಾಳಿಗಾರರಿಗೆ ಪಾಕಿಸ್ತಾನದ ಸಹಾಯವಿಲ್ಲವೆಂದೇ ಸಾಧಿಸಿತ್ತು. ಇಂದು ಅದೇ ಪಾಕಿಸ್ತಾನವು ನಿಜ ಸಂಗತಿಯನ್ನು ತಾನೇ ಒಪ್ಪಿ ಭದ್ರತಾ ಮಂಡಲದಲ್ಲಿ ವಾದಿಸಿದ್ದೆಲ್ಲ ಸುಳ್ಳೆಂದು ಹೇಳಿದಂತೆ ಮಾಡಿದೆ. ೬ ನೇ ತಾ.ನ ಸಂಜೆ ೪ ಗಂಟೆಯ ವರೆಗೆ ಪಾಕಿಸ್ತಾನ ಸೈನ್ಯವು ಕಾಶ್ಮೀರದಲ್ಲಿ ಯುದ್ಧ ನಡೆಸಿದೆ ಎಂಬ ಸಂಗತಿಯು ಜಗತ್ತಿಗೆ ಮನವರಿಕೆಯಾಗಿರಲಿಲ್ಲ. ಪಾಕಿಸ್ತಾನ ಸರಕಾರದ ಪತ್ರವು ಪ್ರಕಟವಾಗಿ ನಿನ್ನೆ ಅದು ಲೋಕಕ್ಕೆಲ್ಲ ಮನವರಿಕೆಯಾಯ್ತು. ತನ್ನ ತಪ್ಪು ಒಪ್ಪಿದಾಗಲೂ ಪಾಕಿಸ್ತಾನ ಕುಟಿಲ ನೀತಿಯನ್ನೂ ವೃಥಾರೋಪವನ್ನೂ ಅನುಸರಿಸದೆ ಬಿಟ್ಟಿಲ್ಲ. ಪಾಕಿಸ್ತಾನ ಸೈನ್ಯವು ಹಿಂದುಸ್ತಾನದ ಪ್ರದೇಶದಲ್ಲಿ ಹೊಕ್ಕು ಅತಿಕ್ರಮಣ ಮಾಡಿ ಯುದ್ಧ ನಡೆಸಿದ್ದರೂ ನಮ್ಮ ಸೈನಿಕರು ಮಾತ್ರ ಪಾಕಿಸ್ತಾನದ ಸೀಮೆಯಲ್ಲಿ ಕಾಲಿಟ್ಟಿಲ್ಲವೆಂಬುದು ಅತಿ ಮಹತ್ವದ ಅಂಶವಾಗಿದೆ.

ತನ್ನ ಸೈನ್ಯವನ್ನು ಕಾಶ್ಮೀರಕ್ಕೆ ಕಳಿಸುವದು ಅವಶ್ಯವೆಂದು ಪಾಕಿಸ್ತಾನಕ್ಕೆ ತೋರಿದ್ದರೆ ಹಿಂದುಸ್ತಾನ ಸರಕಾರಕ್ಕೂ ಭದ್ರತಾ ಮಂಡಲಕ್ಕೂ ಹಾಗೆ ಮೊದಲು ತಿಳಿಸಬೇಕಾಗಿತ್ತು. ಜಗತ್ತಿನ ಯಾವ ರಾಷ್ಟ್ರವೂ ಈ ವರೆಗೆ ಪೂರ್ವ ಸೂಚನೆ ಕೊಡದೆ ಹೀಗೆ ಒಮ್ಮೆಲೆ ಸೈನ್ಯ ಕಳಿಸಿರುವದಿಲ್ಲ. ಸೈನ್ಯ ಕಳಿಸಿದ್ದರೂ ಅಲ್ಲಿ ತಮ್ಮ ಸೈನ್ಯವೇ ಇಲ್ಲವೆಂದು ಸುಳ್ಳು ಸಾಧಿಸಿರುವದಿಲ್ಲ. ಪಾಕಿಸ್ತಾನವು ಎಲ್ಲ ದೃಷ್ಟಿಯಿಂದಲೂ ಕರ್ತವ್ಯಚ್ಯುತವಾಗಿದೆ.

ಪಾಕಿಸ್ತಾನದ ಈ ಆಕ್ರಮಣಶೀಲ ಯುದ್ಧದಲ್ಲಿ ವಿದೇಶೀಯ ಅಧಿಕಾರಿಗಳು ಇದ್ದಾರೆ. ಇವರಲ್ಲಿ ಬ್ರಿಟಿಶರೂ ಇದ್ದಾರೆ. ಈಗ ಬ್ರಿಟಿಶ ಅಧಿಕಾರಿಗಳ ವರ್ತನದ ಬಗ್ಗೆ ವಿಚಾರ ನಡೆಸುವ ಪರಿಸ್ಥಿತಿಯುಂಟಾಗಿದೆ. ಯುದ್ಧ ನಿಲ್ಲಿಸುವ ಸೂಚನೆಗೆ ಪಾಕಿಸ್ತಾನ ಸರಕಾರವು ಕೆಲವೊಂದು ಕರಾರುಗಳನ್ನು ಹಾಕಿದ್ದರಿಂದ ಅದು ನಿರಾಕರಿಸಿದಂತೆಯೇ ಎಂಬುದಾಗಿ ಕಾಶ್ಮೀರ ಸಮಿತಿಯವರೇ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಒಟ್ಟಿನಲ್ಲಿ ಕಾಶ್ಮೀರ ಪ್ರಶ್ನೆಯಲ್ಲಿ ನಾವು ಯಾವದೇ ಕ್ರಮ ಕೈಕೊಂಡರೂ ಅದರಿಂದ ನಮ್ಮ ನೀತಿಗೂ ಪ್ರತಿಷ್ಠೆಗೂ ಚ್ಯುತಿಯುಂಟಾಗದಂತೆ ನೋಡಿಕೊಳ್ಳುವ ದೊಡ್ಡ ಭಾರ ನಮ್ಮ ಮೇಲಿದೆ.

ಹಿಂದುಸ್ತಾನದ ಹಿರಿಯೋಲಗದಲ್ಲಿ ತಾ. ೨೪-೮-೪೮ ರಿಂದ ೬.೯.೪೮ ರ ವರೆಗೆ ತಿಳಿದ ಅಂಶಗಳು ಹೀಗಿವೆ.

ರಶಿಯದಲ್ಲಿ ಹಿಂದೀ ರಾಯಭಾರಿಯಾಗಿದ್ದ ಶ್ರೀ ವಿಜಯಲಕ್ಷ್ಮಿ ಪಂಡಿತರಿಗೆ ತಿಂಗಳಿಗೆ ೪೫೦೦ ರೂ. ಸಂಬಳ ಮತ್ತು ೯೦೦೦ ರೂ. ಭತ್ತೆ ದೊರೆಯುತ್ತದೆ. ಅಮೇರಿಕೆಯಲ್ಲಿದ್ದ ರಾಯಭಾರಿ ಶ್ರೀ ಬಿ. ರಾಮರಾಯರಿಗೆ ಅಷ್ಟೇ ಪಗಾರ ೫೨೦೦ ರೂ. ಭತ್ತೆ, ಇಜಿಪ್ತದಲ್ಲಿಯಿದ್ದ ರಾಯಭಾರಿ ಡಾ. ಸಯ್ಯದ ಹುಸೇನರಿಗೂ ಚೀನದಲ್ಲಿದ್ದ ರಾಯಭಾರಿ ಶ್ರೀ ಕೆ. ಎಂ. ಪಾಣಿಕ್ಕರರಿಗೂ ಪಗಾರ ೪೫೦೦ ರೂ. ಅಷ್ಟೇ ಭತ್ತೆ ಸಿಗುತ್ತದೆ. ದ್ವಿತೀಯಶ್ರೇಣಿ ರಾಯಭಾರಿಗಳಿಗೆ ೪೦೦೦ ರೂ. ಸಂಬಳ ೨೦೦೦ ರೂ ಭತ್ತೆ ತೃತೀಯಶ್ರೇಣಿಯವರಿಗೆ ೨೭೫೦ ರೂ. ಸಂಬಳ ಮತ್ತು ಭತ್ತೆ. ಕೊನೆಯ ಶ್ರೇಣಿ ರಾಯಭಾರಿಗೆ ೨೨೫೦ ರೂ. ಸಂಬಳ ೭೫೦ ರೂ. ಭತ್ತೆ ಉಂಟು

ಡಾ. ಶ್ಯಾಮಪ್ರಸಾದರು, ಬಟ್ಟೆಯ ದರವನ್ನು ಕೇಂದ್ರ ಸರಕಾರವೇ ನಿರ್ಧರಿಸುವದೆಂದೂ ಅದರ ಹಂಚುವಿಕೆಯ ಹೊಣೆಯನ್ನು ಪ್ರಾಂತಿಕ ಸರಕಾರಗಳಿಗೆ ಒಪ್ಪಿಸಿದೆಯೆಂದೂ ಹೇಳಿದರು.

'ವಂದೇ ಮಾತರಂ' ಗೀತವು ಮೇಳವಾದ್ಯಕ್ಕೆ ಸರಿಹೋಗುವದಿಲ್ಲವೆಂದು 'ಜನಗಣ ಮನ' ಕ್ಕೇ ತಾತ್ಪೂರ್ತಿಕವಾಗಿ ರಾಷ್ಟ್ರಗೀತೆಯ ಪಟ್ಟ ಕಟ್ಟಲಾಗಿದೆ.

ಹೈದರಾಬಾದ ಗಡಿಪ್ರದೇಶದಲ್ಲೆಲ್ಲ ಸಂರಕ್ಷಣೆಯ ಯೋಜನೆ ಕೈಕೊಂಡ ಬಗ್ಗೆ ಸರದಾರ ಪಟೇಲರ ಘೋಷಣೆ. (ಬೇರೆಡೆ ಕೊಟ್ಟಿದೆ)

ಕೂಲಿಕಾರರ ಕಾಯದೆ ತಿದ್ದುಪಡಿ ಮಸೂದೆ (ಬೇರೆಡೆಗೆ ಕೊಟ್ಟಿದೆ.)

ಬಾಲ್ಯ ವಿವಾಹ ಮತ್ತು ವಿಷಮ ವಿವಾಹಗಳ ಬಗ್ಗೆ ಮಸೂದೆ. ೨೦ ವರ್ಷದ ಒಳಗಿನ ತರುಣನೂ ೧೫ ವರ್ಷದ ಒಳಗಿನ ಬಾಲಿಕೆಯೂ ವಿವಾಹಯೋಗ್ಯರಲ್ಲ. ಇದರಂತೆ ೪೫ ವರ್ಷದ ವರ ೧೮ ವರ್ಷದೊಳಗಿನ ವಧು ಲಗ್ನವಾಗುವದು ವಿಷಮವೆಂದೂ ಅದನ್ನು ನಿರ್ಬಂಧಿಸಬೇಕೆಂದೂ ಈ ಮಸೂದೆಯಲ್ಲಿ ಕಾಣಿಸಲಾಗಿದೆ.

ಗವರ್ನರ ಜನರಲ್‌ರ ಸಂಬಳ ಮತ್ತು ಭತ್ತೆ ಕಡಿಮೆ ಮಾಡಿಲ್ಲವಾದರೂ ಸರಕಾರಿ ಭವನದ ವೆಚ್ಚ ಇಳಿಸುವ ವಿಚಾರವಿದೆ.

ಉತ್ಪನ್ನಕರ ತಿದ್ದುಪಡೆಯ ಮಸೂದೆ ಮತ್ತು ಈ ಕರ ತಪ್ಪಿಸುವವರ ಮೇಲೆ ಉಗ್ರ ಕ್ರಮ ಕೈಕೊಳ್ಳುವದಕ್ಕೆ ಹಿರಿಯೋಲಗದ ಸಮ್ಮತಿ.

ರಾಷ್ಟ್ರರಕ್ಷಣೆಗಾಗಿ ಪ್ರಾದೇಶಿಕ ಸೈನ್ಯ ಸಂಘಟನೆಯ ಮಸೂದೆಯ ಸ್ವೀಕಾರ. ನಾಡಿನ ಯುವಕರಿಗೆ ಸಮರ ಶಿಕ್ಷಣವೇ ಈ ಮಸೂದೆಯ ಉದ್ದೇಶ. ೧ ಲಕ್ಷ ೩೦ ಸಾವಿರಕ್ಕೆ ಈ ಸೈನ್ಯ ಸಂಖ್ಯೆಯನ್ನು ಪರಿಮಿತಿಗೊಳಿಸಲಾಗಿದೆ. ಗಂಡಾಂತರ ಪ್ರಸಂಗದಲ್ಲಿ ಈ ಸೈನಿಕರು ಅಂತರಿಕ ರಕ್ಷಣೆಗೂ ಸ್ಥಿರ ಸೈನಿಕರಿಗೂ ನೆರವಾಗಿ ದ್ವಿತೀಯ ವ್ಯೂಹವಾಗಿಯೂ ಕೆಲಸ ಮಾಡಬೇಕೆಂದು ಮಸೂದೆಯಲ್ಲಿ ಕಾಣಿಸಲಾಗಿದೆ.

ಇಲೆಕ್ಟ್ರಿಕ್ ಯಂತ್ರಕಾರಖಾನೆಯನ್ನು ತೆರೆಯಲು ಸರಕಾರವು ವಿಚಾರ ನಡೆಸಿದೆ.

ಹಿಂದುಸ್ತಾನದಲ್ಲಿ ೧೮ ಹಡಗ ನಿಲ್ಲಿಸುವ ನಿಲ್ದಾಣಗಳಿವೆ.

ಈ ವರ್ಷ ೯। ಲಕ್ಷ ಎಕರೆ ಹೊಸಭೂಮಿಯಲ್ಲಿ ನಾರು ಬಿತ್ತಲಾಗಿದೆ. ನಾರು ಬೆಳೆವ ಮುಕ್ಕಾಲು ಭಾಗ ಪಾಕಿಸ್ತಾನಕ್ಕೆ ಹೋಗಿದ್ದರಿಂದ ಈ ಕ್ರಮ ಕೈಕೊಳ್ಳಬೇಕಾಯಿತು.

ಇನ್ನು ಮೇಲೆ ಯಾವದೇ ಸಂಸ್ಥೆಯ ಹೆಸರು ಅಂಗ್ಲಭಾಷೆಯಲ್ಲಿರಕೂಡದು. ಈಗಿದ್ದವುಗಳನ್ನು ತಜ್ಞ ಸಮಿತಿಯ ಸಲಹೆ ಮೇರೆಗೆ ಬದಲಿಸಬೇಕು.

ಗಣಿ ಮತ್ತು ಎಣ್ಣೆ ಪ್ರದೇಶಗಳ ಮೇಲೆ ಕೇಂದ್ರ ಸರಕಾರದ ನಿಯಂತ್ರಣವಿರಬೇಕೆಂಬ ಮಸೂದೆಯ ಸ್ವೀಕಾರ.

ರಿಝರ್ವ ಬ್ಯಾಂಕನ್ನು ರಾಷ್ಟ್ರೀಕರಿಸುವ ಮಸೂದೆಯ ಸ್ವೀಕಾರವಾಯಿತು. ೧೯೪೯ ಜಾನೇವಾರಿ ಒಂದನೇ ತಾರೀಖಿನಿಂದಲೇ ಹೊಸ ಆಡಳಿತವು ಪ್ರಾರಂಭವಾಗಬೇಕೆಂದು ಸರಕಾರದ ಇಚ್ಛೆಯೆಂದು ಸಾರಲಾಯಿತು.

ಪಾಕಿಸ್ತಾನದೊಡನೆ ಮಾಡಿಕೊಂಡ ಕೈದಿಗಳ ವಿನಿಮಯ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವ ಮಸೂದೆಯೂ ಸ್ವೀಕೃತವಾಯ್ತು.

ಅತಿಪ್ರಸರಣವನ್ನು ಹತ್ತಿಕ್ಕಲು ನೂರು ರೂಪಾಯಿ ನೋಟುಗಳನ್ನು ರದ್ದುಗೊಳಿಸುವದಿಲ್ಲವೆಂದೂ ಬ್ಯಾಂಕಿನ ಠೇವು ಸ್ಥಗಿತಗೊಳಿಸುವದಿಲ್ಲವೆಂದೂ ಪಂ. ಜವಾಹರಲಾಲರು ಹಿರಿಯೋಲಗದಲ್ಲಿ ಸಾರಿದರು

ಜವಳಿ ನಿಯಂತ್ರಣಾಜ್ಞೆ ಮುರಿದವರಿಗೆ ಕಾರಾವಾಸದ ಶಿಕ್ಷೆ ಕೊಡಲಾಗುವದೆಂಬ, ರೇಲ್ವೆ ಖಾತೆಯ ಲಂಚಗುಳಿಗಳನ್ನು ಮನೆಗೆ ಕಳಿಸಲಾಗುವದೆಂಬ ಗೊತ್ತುವಳಿಗಳು ಸ್ವೀಕೃತವಾದವು.

೭ ನೇ ತಾ. ನಂದು ಹೈದರಾಬಾದದ ಬಗ್ಗೆ ಉಗ್ರ ಕ್ರಮ ಕೈಕೊಂಡ ಬಗ್ಗೆ ಹಾಗೂ ಅಲ್ಲಿಯ ಪ್ರಜಾರಕ್ಷಣೆಗಾಗಿ ಸಿಕಂದರಾಬಾದಕ್ಕೆ ಹಿಂದುಸ್ತಾನದ ಸೈನ್ಯ ಕಳಿಸುವ ನಿರ್ಧಾರದ ಬಗ್ಗೆ (ಬೇರೆ ಕಡೆ ನೋಡುವದು) ಪಂಡಿತ ಜವಾಹರಲಾಲರು ಹೇಳಿಕೆ ಕೊಟ್ಟರಲ್ಲದೆ ಕಾಶ್ಮೀರದ ವಿಷಯದಲ್ಲಿ ಪಾಕಿಸ್ತಾನವು ಮೊದಲಿಂದಲೂ ಮೋಸಗಾರಿಕೆಯನ್ನೂ ಮಿಥ್ಯಾವಾದವನ್ನೂ ಅನುಸರಿಸುತ್ತ ಬಂದ ಸಂಗತಿಯು ಯುಕ್ತರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯವರಿಗೂ ಅವರ ಮುಖಾಂತರ ಇಡೀ ಜಗತ್ತಿಗೂ ಹೇಗೆ ತಿಳಿದು ಬಂದಿತು ಎಂಬ ಬಗ್ಗೆ ವಿವರಣೆ ಕೊಟ್ಟರು. (ಬೇರೆ ಕಡೆ ಕೊಟ್ಟಿದೆ)

ಅನಿಯಮಿತ ಅವಧಿಯ ವರೆಗೆ ಹಿರಿಯೋಲಗವು ಮುಂದುವರಿಯಿತು.

ಅಕ್ರಮ ಲಾಟರಿ ತಿಕೀಟುಗಳು

ಬೀಡಿ ಅಂಗಡಿಕಾರರಲ್ಲಿಯೂ ಚಿಕ್ಕಪುಟ್ಟ ವ್ಯಾಪಾರಸ್ಥರಲ್ಲಿಯೂ ಕೆಲ ಮೋಸಗಾರರು ಲಾಟರಿ ತಿಕೀಟುಗಳನ್ನು ಹಂಚುತ್ತಿರುವದು ಮುಂಬಯಿ ಸರಕಾರದ ಗಮನಕ್ಕೆ ಬಂದಿದೆ. ಎಷ್ಟೋ ಸಲ ಈ ತಿಕೀಟುಗಳ ಮೇಲೆ "ಲಾಯಸೆನ್ಸಿನ ನಿರ್ಬಂಧವಿಲ್ಲ" ಎಂಬ ಅಕ್ಷರಗಳನ್ನೂ ಅಚ್ಚೊತ್ತಿ ಇದಕ್ಕೆ ಸರಕಾರದ ಮನ್ನಣೆ ದೊರೆತಿದೆ ಎಂಬ ತಪ್ಪು ಭಾವನೆಯನ್ನೂ ಜನರಲ್ಲಿ ಹುಟ್ಟಿಸಲಾಗುತ್ತಿದೆ. ಇದೆಲ್ಲ ಮೋಸಗಾರರ ಸಂಚು. ಮುಂಬಯಿ ಸರಕಾರವು ಯಾವದೇ ಬಗೆಯ ಲಾಟರಿ, ಜೂಜು ಮೊದಲಾದವುಗಳಿಗೆ ಮನ್ನಣೆ ಕೊಟ್ಟಿರುವದಿಲ್ಲವೆಂಬುದನ್ನು ಸಾರ್ವಜನಿಕರು ಅರಿತುಕೊಳ್ಳಬೇಕೆಂದು ಸರಕಾರೀ, ಪ್ರಕಟನೆ ಹೊರಟಿದೆ.

ಅತಿಪ್ರಸರಣವೂ ಉದ್ದಿಮೆದಾರರೂ

ಸರ್ ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಅ. ಭಾ. ಉದ್ದಿಮೆದಾರ ಸಂಘದವರು ಅತಿಪ್ರಸರಣದ ಬಗ್ಗೆ ಚರ್ಚೆ ನಡೆಸಿ ಔದ್ಯೋಗಿಕ ಮತ್ತು ಒಕ್ಕಲತನದ ಉತ್ಪಾದನೆಗಳು ಹೆಚ್ಚಬೇಕೆಂದೂ ಕೊಳ್ಳುವ ಶಕ್ತಿ ಬೆಳೆಯಬೇಕಲ್ಲದೆ ವಿಕೇಂದ್ರೀಕರಣವೂ ಜಾರಿಯಲ್ಲಿ ಬರಬೇಕೆಂದೂ ಸೂಚಿಸಿದ್ದಾರೆ. ಕಚ್ಚಾ ಮಾಲಿನ ಕೊರತೆ, ಸಾರಿಗೆಯ ಅನಾನುಕೂಲತೆ ಯಾಂತ್ರಿಕ ಸಾಮಗ್ರಿಗಳ ಅಭಾವ ಕೂಲಿಕಾರರಲ್ಲಿ ಬೇರೂರಿದ ಅನಿಶ್ಚಿತಮನೋವೃತ್ತಿ ಇವನ್ನೆಲ್ಲ ಸರಕಾರವು ತೊಲಗಿಸಿದರೆ ಉತ್ಪಾದನೆ ತಾನಾಗಿ ಹೆಚ್ಚುವದೆಂದು ಹೇಳಲಾಗಿದೆ. ಉತ್ಪಾದನೆಯು ಈಗ ಇಳಿಮುಖವಾಗಲೂ ಸರಕಾರವು ಸೂಚಿಸಿದ ಉದ್ದಿಮೆಗಳ ರಾಷ್ಟ್ರೀಕರಣ ಮತ್ತು ಲಾಭದಲ್ಲಿ ಸಮಪಾಲು ಇವೇ ಮೊದಲಾದವು ಮುಖ್ಯ ಕಾರಣಗಳೆಂದೂ ಹೇಳಲಾಗಿದೆ. ಸರಕಾರ, ಕೂಲಿಕಾರರು, ಉದ್ದಿಮೆಗಳ ಒಡೆಯರು ಇವರ ನಡುವೆ ಒಂದು ತ್ರಿಪಕ್ಷೀಯ ಒಡಂಬಡಿಕೆಯಾದರೆ ಇದೆಲ್ಲ ತೊಂದರೆ ತೊಲಗುವದೆಂದೂ ಸರಕಾರವು ಈ ಬಗೆಯ ಒಡಂಬಡಿಕೆಯನ್ನು ಕೂಡಲೇ ಸಾರುವಂತೆ ವ್ಯವಸ್ಥೆ ಮಾಡಬೇಕೆಂದೂ ಸರಕಾರಕ್ಕೆ ಕೇಳಿಕೊಳ್ಳಲಾಗಿದೆ.

ವ್ಯಾಪಾರಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೯

ಜವಳಿ

ಅಹಮದಾಬಾದ ಅಡ್ವಾನ್ಸ್	೩೬೬-೮-೦
ಬಾಂಬೆ ಡಾಯಿಂಗ್	೧೦೩೬-೮-೦
ಸೆಂಟ್ರಲ ಇಂಡಿಯಾ	೩೬೫-೦-೦
ಸೆಂಚುರಿ	೫೧೬-೮-೦
ಗೋಕಾಕ	೩೫೭-೦-೦
ಕೋಹಿನೂರು	೩೯೯-೦-೦
ಫಿನಿಕ್ಸ	೫೪೩-೧೩-೦
ಸ್ವದೇಶಿ	೩೯೬-೦-೦

ಇತರ

ಬೇಲಾಪುರ ಸಕ್ಕರೆ	೩೫೩-೦-೦
ಬಾಂಬೇ ಬರ್ಮಾ	೪೨೭-೮-೦
ಟಾಟಾ ಸ್ಟೀಲ ಡೆಫರ್ಡ	೧೫೦೩-೮-೦
ಇಂಡಿಯನ್ ಅಯರ್ನ	೨೫-೬-೦
ಅಸೊ. ಸಿಮೆಂಟ್ಸ	೧೫೫-೦-೦
ಸೆಂಟ್ರಲ ಬ್ಯಾಂಕ್	೮೪-೦-೦
ಇಂಪೀರಿಯಲ್ ಬ್ಯಾಂಕ ಪೂರ್ಣ	೧೯೬೦-೦-೦
ಇಂಡಿಯನ್ ಬ್ಯಾಂಕ	೧೯೭-೦-೦
ರಿಝರ್ವ ,,	೧೧೩-೦-೦

ಚಿನ್ನ--ಬೆಳ್ಳಿ

ತಯಾರಿ ಚಿನ್ನ	೧೧೪-೮-೦
ವಾಯದಾ ಚಿನ್ನ	—
ತಯಾರಿ ಬೆಳ್ಳಿ	೧೭೨-೦-೦
ವಾಯದಾ	೧೬೭-೦-೦
ಡಿಸೆಂಬರ	—
ಸಾವರಿನ	೭೬-೮-೦

ಅರಳೆ

ಸೆಪ್ಟೆಂಬರ	೫೫೭-೮-೦
ಹೆಚ್ಚು	೫೫೮-೮-೦ ರಿಂದ ೫೫೯-೦-೦
ಕಡಿಮೆ	೫೪೩-೦-೦

ಎಣ್ಣೆಕಾಳು

ಶೇಂಗಾ	೧೫೮-೯-೦
ಹೊಸ ಬೆಳೆ	—
ಅಗಸಿ	೨೬-೭-೦
,, ಹೊಸ ಬೆಳೆ	೨೬-೯-೦
,, ಎಣ್ಣೆ	೧೬-೪-೦

ಶಿವಮೊಗ್ಗ ಅಡಿಕೆ

ತಾ. ೯

ದೇಶಾವರ ನಂ. ೧ ಹಾಣ ೧ ಕ್ಕೆ	೩೨-೩೪
,, ,, ೨	೩೦-೩೨
	೨೭-೩೦
ರಾಜಾಆಲವು	೨೭-೩೨
ತೊರೆಸಾಲು	೨೩-೨೭
ಬೆಟ್ಟೆ ವಂತಿ	೧೮-೧೯
ಚಿಟ್ಟೆ	೧೫-೧೭

ಅಡಿಕೆಗೆ ಬೇಡಿಕೆ ಹೆಚ್ಚಾಗುತ್ತಿದೆ; ಧಾರಣೆಯೂ ಉತ್ತಮಗೊಳ್ಳಬಹುದು. ಎಸ್. ಪಿ. ಆರ್ ಮತ್ತು ಮುಂಬಯಿ ರೈಲುಗಳಲ್ಲಿ ಅಡಿಕೆ ಸಾಗಾಟಕ್ಕೆ ಅನುಕೂಲ ಮಾಡಿಕೊಡಲಾಗಿದೆ.

ಹುಬ್ಬಳ್ಳಿ

ಈ ವಾರದಲ್ಲಿ ಬ್ಯಾಂಕ ಹಾಲಿಡೇಜ ಮತ್ತು ಗ್ಯಾಜೆಟೆಡ ಹಾಲಿಡೇಜಗಳ ಮೂಲಕ ಮುಂಬೈ ಪೇಟೆಯು ಮುಚ್ಚಿದ್ದರಿಂದ ಇಲ್ಲಿ ಏನೂ ವ್ಯವಹಾರವಾಗಿಲ್ಲ.

ಅಂದಾಜಿನ ಧಾರಣೆ—

ಜಯವಂತ ಹತ್ತಿ	೩೫೦-೩೭೦
ಅಪಲಂಡ ಹತ್ತಿ	೩೨೫-೩೩೫
ಜಿನ	೨೫೦-೨೭೦
ಅ. ಡಬಲರೋಲ	೨೪೦-೨೪೫
ಜ. ಹತ್ತಿಕಾಳು	೭॥ ಪೌಂಡ
ಅ. ಹತ್ತಿಕಾಳು	೭॥ ,,

ಗಂಗಾ ಯಮುನಾ ಮಹಾಪೂರ

ತಾ ೫ ರಂದು ಮುಂಜಾನೆ ೧೦ ಕ್ಕೆ ಗಂಗಾ ನದಿಗೆ ಹಿಂದೆಂದೂ ಬಾರದಷ್ಟು ಮಹಾಪೂರ ಬಂದು ಬನಾರಸ ಜಿಲ್ಹೆಯ ನೂರು ಹಳ್ಳಿಗಳು ನೀರಲ್ಲಿ ಮುಳುಗಿ ಹೋಗಿವೆ. ಗಂಗಾ, ವರುಣಾ, ಆಸಿ ಈ ಮೂರು ನದಿಗಳ ಪ್ರವಾಹಗಳು ಎಲ್ಲ ದಿಕ್ಕಿನಿಂದ ಕಾಶಿಯಲ್ಲಿ ಒಳಸೇರುತ್ತಿವೆ. ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಜನರನ್ನು ಬೇರೆಡೆಗೆ ಸಾಗಿಸುವದು ಭರದಿಂದ ನಡೆದಿದೆ.

ಇದರಿಂದ ಸರಕಾರಿ ಅಧಿಕಾರಿಗಳು ದಿಮ್ಮನೆಗೆ ಒಳಗಾಗಿದ್ದಾರೆ. ದನಕರುಗಳೂ ನೀರಲ್ಲಿ ತೇಲಿಕೊಂಡು ಹೋಗಿವೆ. ಯುಕ್ತಪ್ರಾಂತದ ಮುಖ್ಯ ಮಂತ್ರಿ ಶ್ರೀ ಗೋವಿಂದವಲ್ಲಭಪಂತರು ಸುತ್ತೆಲ್ಲ ಸಂಚರಿಸಿ ಪೀಡಿತ ಪ್ರದೇಶಗಳನ್ನು ಸ್ವತಃ ಪರಿಶೀಲಿಸುತ್ತಿದ್ದಾರೆ.

ಕರ್ಮವೀರ

ಶ್ರೀಮಚ್ಛಾಲಿಂಶಕ್ಕೆ ವಿಕ್ರಮ ವರ್ಷ ೧೮೭೦
ಭಾದ್ರಪದ ಶು||೧೦ ಸೋಮವಾರ

ಇನ್ನಾದರೂ ವಿವೇಕೋದಯವಾಗಲಿ

ಹೈದರಾಬಾದ ಸಮಸ್ಯೆ ಈಗ ಗಂಭೀರ ಸ್ವರೂಪವನ್ನು ಮುಟ್ಟಿವೆ. ರಜಾಕಾರರ ಅನನ್ವಿತ ಛಲನೆಯಿಂದ ಅಲ್ಲಿಯ ಪ್ರಜೆಗಳು ಜರ್ಜರಿತರಾಗಿದ್ದಾರೆ. ಸಂಸ್ಥಾನದಲ್ಲಿ ನಡೆದ ಕೊಲೆ, ಸುಲಿಗೆ, ಕೊಳ್ಳೆ ಮೊದಲಾದವುಗಳು ಅಸಹ್ಯವಾಗಿವೆ. ಹಿರಿಯೋಲಗದಲ್ಲಿ ಹಿಂದುಸ್ತಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಕೊಟ್ಟ ಹೇಳಿಕೆಯಲ್ಲಿ ರಜಾಕಾರರ ಈ ಹಾವಳಿಯ ವಿವರಗಳು ಇವೆ. ಇವುಗಳನ್ನು ಓದಿ ಎಂಥ ಶಾಂತ ಮತ್ತು ಅನುದ್ವಿಗ್ನ ಮನಸ್ಕರೂ ರೊಚ್ಚಿಗೇಳದಿರಲಾರರು. ಸಂಸ್ಥಾನದಲ್ಲಿಯ ರಜಾಕಾರರ ಅಕ್ರಮಗಳಿಗೆ ಅನುಕೂಲರಿಲ್ಲದ ಪ್ರಜೆಗಳ ವಿತ್ತ ಜೀವಿತಗಳು ಇಂದು ಸುರಕ್ಷಿತವಿಲ್ಲ. ಈ ಹಾವಳಿಗಳ ಬೇಗೆ ಹಿಂದುಸ್ತಾನದಲ್ಲಿಯೂ ಹಬ್ಬಹತ್ತಿದೆ. ಸಕಾಲದಲ್ಲಿಯೇ ಇದು ನಿರ್ಮೂಲವಾಗದಿದ್ದರೆ ಹೈದರಾಬಾದ ಸಂಸ್ಥಾನದಲ್ಲಿ ಇಷ್ಟೇ ಅಲ್ಲ ಅದರ ಗಡಿಯಲ್ಲಿರುವ ಹಿಂದೀ ಪ್ರದೇಶದಲ್ಲಿಯೂ ಅರಾಜಕತೆಯುಂಟಾಗುವ ಭೀತಿಯಿದೆ.

ಈ ಬಗೆಯ ಪರಿಸ್ಥಿತಿಯನ್ನು ಹಿಂದುಸ್ತಾನ ಸರಕಾರವು ಹೀಗೆಯೇ ನೋಡುತ್ತ ಕೂಡ್ರಲಾರದು. ಪುಂಡರ ಮತ್ತು ಅವರ ಬೆಂಬಲಿಗರ ಪುಂಡಾಟಿಕೆಯಿಂದ ಹೈದರಾಬಾದ ಪ್ರಜೆಗಳ ವಿತ್ತ ಜೀವಿತಗಳನ್ನು ರಕ್ಷಿಸುವದು ಹಿಂದೀ ಸರಕಾರದ ಕರ್ತವ್ಯವಾಗಿದೆ. ಯಥಾಸ್ಥಿತಿ ಒಪ್ಪಂದ ಮಾಡಿಕೊಂಡ ನಂತರದ ಈ ಹತ್ತು ತಿಂಗಳ ಅವಧಿಯಲ್ಲಿ ನಿಜಾಮ ಸಾಹೇಬರು ಒಂದೇ ಸವನೆ ಅದರ ಭಂಗವನ್ನು ಮಾಡುತ್ತ ಬಂದರೂ ಹಿಂದೀ ಸರಕಾರದವರು ಅದನ್ನೆಲ್ಲ ಸಹಿಸುತ್ತ ಬಂದರು. ಆದರೆ ಈಗ ಪರಿಸ್ಥಿತಿ ಬಹಳ ಹದಗೆಡುವುದಾಗಿ ಕಂಡುಬಂದದ್ದರಿಂದ ಹೈದರಾಬಾದ ಪ್ರಜೆಗಳ ವಿತ್ತ ಜೀವಿತಗಳ ರಕ್ಷಣೆಗಾಗಿ ಸಿಕಂದರಾಬಾದದಲ್ಲಿ ಹಿಂದೀ ಸೈನ್ಯವನ್ನಿಡುವುದಾಗಿ ನಿರ್ಧರಿಸಲಾಗಿದೆ. ಅದರಂತೆ ನಿಜಾಮರಿಗೆ ತಿಳಿಸಿಯೂ ಬಿಡಲಾಗಿದೆ. ಈ ಸಂಬಂಧದಲ್ಲಿ ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆ ಮತ್ತು ಹಿಂದುಸ್ತಾನದ ಗವರ್ನರ ಜನರಲ್ ಮತ್ತು ನಿಜಾಮ ಸಾಹೇಬರಲ್ಲಿ ಆದ ಪತ್ರವ್ಯವಹಾರ ಸುಸ್ಪಷ್ಟವಿವೆ. ಹಿಂದೀ ಸರಕಾರದ ಈ ನಿರ್ಧಾರವನ್ನು ಇಡೀ ರಾಷ್ಟ್ರವೇ ಸ್ವಾಗತಿಸುವುದೆಂಬಲ್ಲಿ ಸಂದೇಹವಿಲ್ಲ. ಸರಕಾರವು ಈ ವರೆಗೆ ಅನುಸರಿಸುತ್ತ ಬಂದ ಉದಾರ ಧೋರಣವು ಅದರ ಅಸಾಮರ್ಥ್ಯದ ದ್ಯೋತಕವೆಂದು ತಿಳಿದೋ ಏನೋ ನಿಜಾಮ ಸಾಹೇಬರು ಅದನ್ನು ಉಪೇಕ್ಷಿಸುತ್ತ ಬಂದರು. ಮುಖ್ಯ ಮಂತ್ರಿಗಳು ಹಿರಿಯೋಲಗದಲ್ಲಿ ಹೇಳಿದಂತೆ ಬ್ರಿಟಿಶರಾಳಿಕೆಯ ಕಾಲದಲ್ಲಿ ಹೀಗೆ ಆಗಿದ್ದರೆ ನಿಜಾಮ ಸಾಹೇಬರು ಎಂದೋ ಸಿಂಹಾಸನದಿಂದ ಉರುಳಿ ಹೋಗುತಿದ್ದರು. ವರ್ಹಾಡದ ಮೇಲೆ ತಮ್ಮ ಪ್ರಭುತ್ವವಿದೆಯೆಂದು ಸಾಧಿಸಹೋದಾಗ ಅವರಿಗೆ ಇದರ ಕಟು ಅನುಭವವೂ ಬಂದದುಂಟು.

ಪರಿಸ್ಥಿತಿಯಿಂದು ಹದಗೆಟ್ಟದ್ದರಿಂದ ಗವರ್ನರ್ ಜನರಲ್ಲರು ನಿಜಾಮರಿಗೆ ಪತ್ರ ಬರೆದು ಸರ್ ಮಿರ್ಜಾ ಇಸ್ಮಾಯಿಲರು 'ನಿಮ್ಮ ಮತ್ತು ನಿಮ್ಮ ಪ್ರಜೆಗಳ ಹಿತದ ದೃಷ್ಟಿಯಿಂದ ರಜಾಕಾರ ಸಂಸ್ಥೆಯನ್ನು ಅಕ್ರಮಗೊಳಿಸಿರಿ ಮತ್ತು ಸಿಕಂದರಾಬಾದದಲ್ಲಿ ಹಿಂದೀ ಸೈನ್ಯವನ್ನಿಡುವದಕ್ಕೆ ಅವಕಾಶ ಕೊಡಿರಿ' ಎಂದು ಮಾಡಿದ ಸೂಚನೆಗೆ ಒಪ್ಪಿಕೊಳ್ಳಿರೆಂದು ಕೇಳಿಕೊಂಡಿದ್ದಾರೆ. ಆದರೆ ನಿಜಾಮ ಸಾಹೇಬರು ಮಿರ್ಜಾಸಾಹೇಬರಿಗೆ ಹೈದರಾಬಾದದಲ್ಲಿಯ ಪರಿಸ್ಥಿತಿಯ ಅರಿವು ಇಲ್ಲ, ಸಂಸ್ಥಾನದಲ್ಲಿ ಶಾಂತ ಪರಿಸ್ಥಿತಿಯಿದೆಯೆಂದು ಮುಂತಾಗಿ ಹೇಳಿ, ಹಿಂದೀ ಸರಕಾರದ ಈ ಸೂಚನೆಯನ್ನು ನಿರಾಕರಿಸಿದ್ದಾರೆ. ಇಷ್ಟೇ ಅಲ್ಲ ಸಿಕಂದರಾಬಾದದಲ್ಲಿ ಹಿಂದೀ ಸೈನ್ಯವನ್ನಿಡುವ ಪ್ರಯತ್ನ ಮಾಡಿದ್ದಾದರೆ ಅದರ ಹೊಣೆ ಹಿಂದೀ ಸರಕಾರದ ಮೇಲೆಯೇ ಇದೆಯೆಂದು ಎಚ್ಚರಿಕೆ ಕೊಟ್ಟಿದ್ದಾರೆ. ದಿನವೂ ಸಾವಿರಗಟ್ಟಲೆ ಜನ ಸಂಸ್ಥಾನದಿಂದ ಹಿಂದುಸ್ತಾನಕ್ಕೆ ಗುಳೇ ಬರುತ್ತಿದ್ದರೂ ಸಂಸ್ಥಾನದಲ್ಲಿ ಪರಿಸ್ಥಿತಿ ಶಾಂತವಿದೆಯೆಂದು ನಿಜಾಮರು ಯಾವ ಬಾಯಿಂದ ಹೇಳುವರೋ ನಮಗಂತೂ ತಿಳಿಯದು! ಸ್ವತಃ ದಿನವೂ ಯಥಾಸ್ಥಿತಿ ಒಪ್ಪಂದದ ಭಂಗಮಾಡುತ್ತಿದ್ದರೂ ಸಿಕಂದರಾಬಾದದಲ್ಲಿ ಹಿಂದೀ ಸೈನ್ಯವನ್ನಿಡುವ ಸರಕಾರದ ನಿರ್ಧಾರವು ಒಪ್ಪಂದದ ಭಂಗವೆಂದು ನಿಜಾಮರ ಹೇಳಿಕೆ! ನಿಜಾಮರ ಈ ಧೋರಣದಿಂದ ಹಿಂದುಸ್ತಾನ-ಹೈದರಾಬಾದಗಳಲ್ಲಿ ಘರ್ಷಣೆಯುಂಟಾಗುವಂತೆ ತೋರುತ್ತದೆ. ಯಾವುದನ್ನು ತಪ್ಪಿಸಬೇಕೆಂದು ಹಿಂದೀ ಸರಕಾರವು ಈವರೆಗೆ ತಡೆಯಿತೋ ಅದು ಕೈಗೂಡುವ ಲಕ್ಷಣ ತೋರುವುದಿಲ್ಲ. ಕೊನೆಯಗಳಿಗೆಯಲ್ಲಾದರೂ ನಿಜಾಮರಲ್ಲಿ ವಿವೇಕೋದಯವಾಗಿ ಹಿಂದುಸ್ತಾನ-ಹೈದರಾಬಾದ ಮೈತ್ರಿ ಸ್ಥಿರವಾಗಿ ಸಂಸ್ಥಾನದಲ್ಲಿ ಶಾಂತ ಪರಿಸ್ಥಿತಿಯುಂಟಾಗಲೆಂದು ಹಾರಯಿಸುತ್ತೇವೆ.

ಮದ್ರಾಸಿನಲ್ಲಿ ಗವರ್ನರ್ ಜನರಲ್ ರಾಜಾಜಿ



ಆಗಸ್ಟ ೨೩ ರಲ್ಲಿ ಮದ್ರಾಸಿನಲ್ಲಿ ನಡೆದ ಸ್ವಾಗತ ಸಮಾರಂಭದಲ್ಲಿ ಮದ್ರಾಸ್ ಮೇಯರರಾದ ಡಾ. ಯು. ಕೃಷ್ಣರಾಯರು ಸನ್ಮಾನ್ಯರಾದ ಶ್ರೀ ರಾಜಗೋಪಾಲಾಚಾರಿಯವರಿಗೆ ರಿಪ್ಪನ್ ಭವನದ ಚಿತ್ರ ಕೆತ್ತಲ್ಪಟ್ಟ ಬೆಳ್ಳಿಯ ಮಾನಪತ್ರ ಕರಂಡವನ್ನು ಅರ್ಪಿಸುತ್ತಿರುವುದು.

ವಾರದ ಸಿಂಹಾವಲೋಕನ

ಅರ್ಥಜ್ಞರ ಅಭಿಪ್ರಾಯ

ಹಿಂದುಸ್ತಾನದ ಸದ್ಯದ ಆರ್ಥಿಕ ದುಃಸ್ಥಿತಿಯನ್ನು, ಧಾರಣೆಗಳ ಏರಿಕೆಯನ್ನು, ಅತಿಪ್ರಸರಣವನ್ನು ತಡೆಯಲು ಯಾವ ಉಪಾಯಗಳನ್ನು ಯೋಜಿಸಬೇಕೆಂಬ ಬಗ್ಗೆ ಸಲಹೆ ಕೊಡಲು ಹಿಂದುಸ್ತಾನ ಸರಕಾರದವರು ಅರ್ಥಶಾಸ್ತ್ರಜ್ಞರ, ಉದ್ದಿಮೆದಾರರ ಮತ್ತು ಕೆಲಸಗಾರರ ಪ್ರತಿನಿಧಿಗಳ ಪರಿಷತ್ತನ್ನು ಕರೆದಿದ್ದರು. ಅವರು ಪರಿಸ್ಥಿತಿಯನ್ನೆಲ್ಲ ಪೂರ್ಣವಾಗಿ ವಿಚಾರ ಮಾಡಿ ಸರಕಾರಕ್ಕೆ ಸಲಹೆ ಕೊಟ್ಟಿರುವರು. ಸರಕಾರದವರು ಈ ಬಗ್ಗೆ ವಿಚಾರಿಸುತಿದ್ದು ತಮ್ಮ ಧೋರಣವನ್ನು ಬೇಗನೆ ನಿರ್ಧರಿಸಿ ಸೂಕ್ತವಾದ ಉಪಾಯಗಳನ್ನು ಕೈಕೊಳ್ಳಲಿರುವರು. ಈ ಸೂಚನೆಗಳನ್ನು ಮುಖ್ಯವಾಗಿ ನಾಲ್ಕು ವಿಧವಾಗಿ ವಿಂಗಡಿಸಬಹುದು. ಎಲ್ಲೆಲ್ಲಿಯೂ ಕಾಣಬರುವ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಉತ್ಪಾದನೆಯನ್ನು ಎಲ್ಲ ಬಗೆಯಿಂದ ಹೆಚ್ಚಿಸಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟಿರುವರು. ಉತ್ಪಾದನೆಯ ಹೆಚ್ಚಳವು ಬೇಗನಾಗುವದರೊಳಗೆ ಸಾಧ್ಯವಾಗದಿದ್ದರೂ ರಭಸದಿಂದ ಈ ಕಾರ್ಯಕ್ರಮ ಕೈಕೊಂಡದ್ದಾದರೆ ಪರಿಸ್ಥಿತಿ ಬಹಳ ಮಟ್ಟಿಗೆ ತಿಳಿಯಾಗಬಹುದು. ಈ ರೀತಿ ಉತ್ಪಾದನೆ ಹೆಚ್ಚಿಸಿ ಕೊರತೆಯನ್ನು ಹೋಗಲಾಡಿಸಲು ಪ್ರಯತ್ನಿಸುವಾಗಲೆ ಜನತೆಯಲ್ಲಿಯ ಕೊಳ್ಳುವ ಶಕ್ತಿಯನ್ನು ಕುಂದಿಸಬೇಕಾದುದು ಅವಶ್ಯವೆಂದು ಸೂಚಿಸಲಾಗಿದೆ. ಇದರಲ್ಲಿಯೂ ಸಾಧಾರಣವಾಗಿ ಒಮ್ಮತವಾದಂತಾಗಿದೆ. ಧೀರ್ಘಾವಧಿ ಸಾಲದ ಬಡ್ಡಿಯ ದರವನ್ನು ಹೆಚ್ಚಿಸಬಾರದೆಂದು ಸೂಚಿಸಲಾಗಿದೆ. ನೋಟುಗಳನ್ನು ಇನ್ನು ಮುಂದೆ ಮುದ್ರಿಸಬಾರದೆಂಬಲ್ಲಿಯೂ ಮತೈಕ್ಯವಾಗಿದೆ. ಈ ರೀತಿ ಮಾಡಿದ್ದಾದರೆ ಹಣ ಮತ್ತು ಸರಕುಗಳಲ್ಲಿ ನಡೆದ ಒಂದು ಬಗೆಯ ಸ್ಪರ್ಧೆಗೆ ಅವಕಾಶವಿಲ್ಲದಂತಾಗುವದೆಂದು ಆಶಿಸಲಾಗಿದೆ. ಮೂರನೆಯದಾಗಿ ಅವಶ್ಯಕ ಪದಾರ್ಥಗಳ ಮೇಲೆ ನಿಯಂತ್ರಣ ಹಾಕಬೇಕೆಂದೂ ಪರದೇಶ ವ್ಯಾಪಾರವನ್ನು ನಿಯಂತ್ರಿಸಬೇಕೆಂದೂ ಒಮ್ಮತದಿಂದ ಸೂಚಿಸಲಾಗಿದೆ. ಕೂಲಿ, ಧಾರಣೆ ಮತ್ತು ಮತ್ತು ಲಾಭಾಂಶಗಳ ಪರಮಾವಧಿ ಪ್ರಮಾಣವನ್ನು ನಿರ್ಧರಿಸಬೇಕೆಂದೂ ಸೂಚಿಸಲಾಗಿದೆ. ನಿಯಂತ್ರಣವನ್ನು ಹೇರಿದ್ದಾದರೆ ಸೀದಾ ಪದ್ಧತಿ ಮತ್ತು ಧಾನ್ಯಗಳ ಎತ್ತುವಳಿ ತಾನಾಗಿಯೇ ಬರುವದು. ಕೊನೆಯದಾಗಿ ಸರಕಾರಗಳ ಆಯವ್ಯಯವು ಕೊರತೆಯದಾಗದಂತೆ ನೋಡಿಕೊಳ್ಳುವದು ಅವಶ್ಯವೆಂದು ಹೇಳಿ ಸರಕಾರದವರು ಆಡಳಿತ ವೆಚ್ಚವನ್ನು ಕಡಿಮೆ ಮಾಡಿ, ಹೊಸ ಕರಗಳನ್ನು ಹೇರಿ ಉತ್ಪನ್ನ ಹೆಚ್ಚಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಅಲ್ಲದೆ ಮದ್ಯಪಾನ ಪ್ರತಿಬಂಧದ ಪ್ರಗತಿಯನ್ನು ತಡೆಯಬೇಕೆಂದೂ ಸಲಹೆ ಕೊಡಲಾಗಿದೆ.

ನಿಯಂತ್ರಣ ಯಶಸ್ವಿಯಾಗುವದೇ?

ಈ ಸೂಚನೆಗಳ ಬಗ್ಗೆ ಗಂಭೀರರೀತಿಯಿಂದ ವಿಚಾರಮಾಡುವದು ಅತ್ಯವಶ್ಯವಾಗಿದೆ. ಯೋಗ್ಯರೀತಿಯಿಂದ ಹಂಚಿಕೆಯ ವ್ಯವಸ್ಥೆ ಮಾಡದೆ ಕಾಯದೆಯಿಂದ ಇಲ್ಲವೆ ಹುಕುಮು ಹೊರಡಿಸಿ ಸೀದಾ ಪದ್ಧತಿಯನ್ನು ಜಾರಿಯಲ್ಲಿ ತರುವದರಿಂದ ಉದ್ದೇಶ ಸಫಲವಾಗುವದಿಲ್ಲ; ಇಷ್ಟೇ ಅಲ್ಲ ಕಳ್ಳಪೇಟೆಗೆ ಮತ್ತಷ್ಟು ಅವಕಾಶ ಸಿಕ್ಕುವದು. ಉತ್ಪಾದಕರ ಮತ್ತು ಆಯಾತಗಾರರನ್ನು ಹಿಡಿದು ಬಳಸುವವರ ವರೆಗೆ ಎಲ್ಲರ ಹಂಚುವಿಕೆಯ ಮೇಲೆಯೂ ನಿಯಂತ್ರಣ ಹಾಕಿದ್ದಾದ್ದರೆ ಮಾತ್ರ ಅದು ಯಶಸ್ವಿಯಾಗಬಹುದು. ಆದರೆ ಹಿಂದಿನ ಅನುಭವವನ್ನು ನೋಡಿದರೆ ಇದು ಶಕ್ಯವಿಲ್ಲ ಎಂದು ಕಂಡು ಬರುವದು. ಸರಕಾರದವರು ಬತ್ತಾಯದಿಂದ ಎತ್ತಿದ ಧಾನ್ಯ ಮತ್ತು ಆಯಾತ ಮಾಡಲ್ಪಟ್ಟ ಎಲ್ಲ ಧಾನ್ಯವನ್ನು ಹಿಡಿದರೂ ಸೀದಾ ಕಾರ್ಡುಧಾರಿಗಳಿಗೆ ದಿನಕ್ಕೆ ೮-೯ ಔಂಸುಗಳಷ್ಟು ಮಾತ್ರ ಸೀದಾ ಕೊಡುವದು ಶಕ್ಯವಾಯಿತೆಂದು ಹಿಂದಿನ ಅಂಕೆಸಂಖ್ಯೆಗಳು ಸ್ಪಷ್ಟಪಡಿಸುತ್ತವೆ. ಈ ರೀತಿ ನಿಯಂತ್ರಣ ಮತ್ತು ಸೀದಾ ಪದ್ಧತಿ ಅಯಶಸ್ವಿಯಾದುವೆಂದೇ ಅವನ್ನು ಬಿಟ್ಟು ಕೊಡಲಾಯಿತು. ಆದುದರಿಂದ ಹಿಂದೆ ಮಾಡಿದ ತಪ್ಪನ್ನೇ ಸರಕಾರದವರು ಮತ್ತೆ ಮಾಡದಂತೆ ಜಾಗ್ರತರಾಗುವದು ಅವಶ್ಯವಾಗಿದೆ. ಕಳೆದ ವರುಷ ಧಾನ್ಯದ ಎತ್ತುವಳಿ ಪದ್ಧತಿಯನ್ನು ಬಿಟ್ಟುಕೊಟ್ಟದ್ದರಿಂದ ಸರಕಾರದ ಹತ್ತರ ಸಾಕಷ್ಟು ಧಾನ್ಯವಿರುವದಿಲ್ಲ. ಹೊರಗಿನಿಂದ ಬರುವ ಆಹಾರ ಪದಾರ್ಥಗಳ ಪ್ರಮಾಣವಾದರೂ ಕಡಿಮೆಯಿದೆ. ಈ ಪರಿಸ್ಥಿತಿಯಲ್ಲಿ ಸೀದಾ ಪದ್ಧತಿಯನ್ನು ಜಾರಿಯಲ್ಲಿ ತಂದದ್ದಾದರೆ ಪೇಟೆಯಲ್ಲಿ ಬರುತಿರುವ ಕಾಳೂ ಇಲ್ಲದಂತಾಗಿ ನಿಕೃಷ್ಟ ಪರಿಸ್ಥಿತಿಯುಂಟಾಗುವ ಭೀತಿಯಿದೆ. ಸುಗ್ಗಿಯ ಕಾಲಕ್ಕೆ ಸರಕಾರದವರು ಧಾನ್ಯ ಎತ್ತುವಳಿ ಪದ್ಧತಿಯನ್ನು ಜಾರಿಯಲ್ಲಿ ತಂದು ಅನಂತರ ನಿಯಂತ್ರಣದ ವಿಚಾರ ಮಾಡಬಹುದು. ಆಗ ಕೂಡ ದೊಡ್ಡ ನಗರಗಳಲ್ಲಿಯೇ ಈ ಸೀದಾ ಪದ್ಧತಿಯನ್ನಿಡಬೇಕಲ್ಲದೆ ಗ್ರಾಮಾಂತರಗಳಲ್ಲಿ ಧಾನ್ಯಗಳ ಚಲನವಲನಕ್ಕೆ ಅವಕಾಶ ಕೊಡಬೇಕು. ಇದರಿಂದ ಸರಕಾರದ ಕೆಲಸವೂ ಕಡಿಮೆಯಾಗುವದು. ಸಾಕಷ್ಟು ಕಾಳಿನ ಸಂಗ್ರಹ ಮಾಡಿಕೊಳ್ಳದೆ ಈಗ ಹಲವಾರು ನಗರಗಳಲ್ಲಿ ಅಗ್ಗದರದ ಅಂಗಡಿಗಳನ್ನು ತೆಗೆದದ್ದರಿಂದ ಅವುಗಳಿಗೆ ಕಾಳು ಪೂರೈಸಬೇಕಾದರೆ ಸರಕಾರಕ್ಕೆ ಸಾಕಾಗಿ ಹೋಗಿದೆ. ಹುಳುಗಳಿಂದ ತುಂಬಿದ ಮೈದಾ, ಹಿಟ್ಟುಬಡಿದು ಹೋದ ಗೋದಿ, ಜವೆಗೋದಿ ಮತ್ತು ಕೆಂಜೋಳ, ಅಕ್ಕಿ ಮುಂತಾದವನ್ನು ಕೊಟ್ಟು ನಾಗರಿಕರನ್ನು ಗೋಳಿಗೀಡು ಮಾಡಲಾಗುತಿದೆ. ಇಂಥ ಅನಾರೋಗ್ಯಕರ ಆಹಾರವನ್ನು ತಿಂದು ಪ್ರಕೃತಿಯನ್ನು ಕೆಡಿಸಿಕೊಳ್ಳುವದಕ್ಕಿಂತ ಪೇಟೆಯಲ್ಲಿ ಸಿಕ್ಕುವ ಒಳ್ಳೆ ಆರೋಗ್ಯಕರವಾದ ಆಹಾರ ಪದಾರ್ಥಗಳನ್ನು ತಿಂದು ಪ್ರಕೃತಿಯನ್ನು ಸುಧಾರಿಸಿಕೊಳ್ಳುವಾ ಎಂದು ನಾಗರಿಕರೂ ಅಪೇಕ್ಷಿಸುವದು ಸ್ವಾಭಾವಿಕ. ಆದುದರಿಂದ ಈಗ ನಿಯಂತ್ರಣ, ಸೀದಾಪದ್ಧತಿಯ ವಿಚಾರ ಮಾಡದೆ ಉತ್ಪಾದನೆಯನ್ನು ಹೆಚ್ಚಿಸುವತ್ತ ಎಲ್ಲ ಗಮನವನ್ನು ಕೊಡಬೇಕು. ಬಟ್ಟೆಗಳ ಹಂಚುವಿಕೆಯ ಸಂಬಂಧದಲ್ಲಿ ಕೇಂದ್ರ ಸರಕಾರವು ಸಾರಿದ ಧೋರಣೆ ಗಮನಾರ್ಹವಾಗಿದೆ. ಬಟ್ಟೆಗಳ ಧಾರಣೆಯನ್ನು ನಿಯಂತ್ರಿಸಿ ಅವುಗಳ ಹಂಚುವಿಕೆಯ ಏರ್ಪಾಡು ಮಾಡುವದು ಅವಶ್ಯ. ಹಿಂದೀಯರಿಗೆ ಬೇಕಾಗುವಷ್ಟು ಬಟ್ಟೆ ಹಿಂದೀಗಿರಣಿಗಳಲ್ಲಿಯೇ ಸಿದ್ಧವಾಗುತಿದೆ. ಅದೆಲ್ಲ ಯೋಗ್ಯರೀತಿಯಿಂದ ಹಂಚಲ್ಪಟ್ಟರೆ ಬಟ್ಟೆಯ ಕೊರತೆಗೆ ಅವಕಾಶವುಳಿಯಲಾರದು. ಆದರೆ ಪ್ರಾಂತೀಯ ಸರಕಾರಗಳಿಗೆ ಈ ಕೆಲಸವನ್ನು ಒಪ್ಪಿಸಿಕೊಟ್ಟು ಕೇಂದ್ರ ಸರಕಾರ ಸುಮ್ಮನೆ ಕೂಡ್ರಲಾರದು. ಪ್ರಾಂತೀಯ ಸರಕಾರಗಳ ಮೇಲೆ ಯೋಗ್ಯ ಮೇಲ್ವಿಚಾರಣೆ ಮತ್ತು ಧನಸಹಾಯಮಾಡುವದು ಕರ್ತವ್ಯವಾಗಿದೆ. ಸರಕಾರದ ಬೊಕ್ಕಸವನ್ನು ತುಂಬಿಕೊಳ್ಳುವದರ ಸಂಬಂಧದಲ್ಲಿ ಮಾಡಲ್ಪಟ್ಟ ಸಲಹೆಗಳ ಬಗ್ಗೆ ಒಂದನ್ನು ಬಿಟ್ಟು ಉಳಿದೆಲ್ಲ ಸೂಚನೆಗಳಿಗೂ ಸೈಯೆನ್ನಬಹುದು. ಮದ್ಯಪಾನ ಪ್ರತಿಬಂಧ ಕಾರ್ಯಕ್ರಮ ತಡೆಹಿಡಿಯಬೇಕೆಂಬುದು ನಮಗೆಂದಿಗೂ ಸಮ್ಮತವಿಲ್ಲ-ಕಾಂಗ್ರೆಸ್ಸು ಕಳೆದ ೨೮ ವರ್ಷಗಳಿಂದಇಟ್ಟುಕೊಂಡ ಈ ಅವಶ್ಯಕಸುಧಾರಣೆಯನ್ನು ಯಾವದೇ ಕಾರಣದಿಂದ ತಡೆಯಲಾಗದು. ಈ ವಿಷಯವನ್ನು ಕೇವಲ ಅರ್ಥ ಪದ್ಧತಿಯಿಂದ ನೋಡದೆ ಅದರಲ್ಲಿ ಅಡಕವಾಗಿರುವ ನೈತಿಕ, ಸಾಮಾಜಿಕ ಮಹತ್ವದ ದೃಷ್ಟಿಯಿಂದ ನೋಡತಕ್ಕದ್ದು. ಈ ಸುಧಾರಣೆ ಇಷ್ಟೊಂದು ಅವಶ್ಯ ಮತ್ತು ಮಹತ್ವದ್ದಾಗಿರುವದರಿಂದಲೆ ಕಾಂಗ್ರೆಸ್ಸು ಕಳೆದ ೨೮ ವರುಷಗಳಿಂದ ಇದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡುತ್ತ ಬಂದಿದೆ. ಕಾಂಗ್ರೆಸ್ ಸರಕಾರಗಳು ಇದನ್ನು ಉಪೇಕ್ಷಿಸುವದು ಸರಿಯಾಗಲಾರದು. ಅದೇ ರೀತಿಯಾಗಿ ಸಿಕ್ಕ ಸಿಕ್ಕ ಚೈನೀ ಪದಾರ್ಥಗಳು ಹೆಚ್ಚಾಗಿ ಆಯಾತವಾಗದಂತೆ ಮತ್ತು ಇಲ್ಲಿಂದ ಅವಶ್ಯಕ ಪದಾರ್ಥಗಳು ಹೊರಗೆ ಹೆಚ್ಚಾಗಿ ಹೋಗದಂತೆ ಸರಕಾರದವರು ಎಚ್ಚರ ತೆಗೆದುಕೊಳ್ಳುವದು ಇಷ್ಟವಾಗಿದೆ. ಏನೇ ಆದರೂ ಸರಕಾರದವರು ಪರಿಸ್ಥಿತಿಯ ಸುಧಾರಣೆಗಾಗಿ ಕೂಡಲೆ ಉಪಾಯ ಯೋಜಿಸಬೇಕಾದುದು ಕರ್ತವ್ಯವಾಗಿದೆ.

ತಾವು ನೂಲಲೇಬೇಕು

[೧೯೩೨—೩೩ ರ ಅಸಹಕಾರ ಚಳವಳಿಯ ಸಮಯದಲ್ಲಿ ೧೦—೩—೩೨ ರ ದಿನ ಗಾಂಧೀಜಿ ಮತ್ತು ಸರದಾರ ವಲ್ಲಭಭಾಯಿಯವರೊಡನೆ ಮಹದೇವ ದೇಸಾಯಿಯವರನ್ನು ಯೆರವಾಡದ ಕೇಂದ್ರ ಕಾರಾಗೃಹದಲ್ಲಿ ಇಡಲಾಯಿತು. ಮಹದೇವ ಭಾಯಿಯವರ ಆ ಸಮಯದ ಗುಜರಾತಿ ದಿನಚರಿಯ ಮೊದಲ ಸಂಪುಟವನ್ನು ನವಜೀವನ ಮುದ್ರಣಾಲಯವು ಈಗ ತಾನೆ ಪ್ರಕಟಿಸಿತ್ತು. ಅದು ೧೦—೩—೩೨ ರಿಂದ ೪—೯—೩೨ ರ ವರೆಗಿನ ಕಾಲವನ್ನು ತೆಗೆದುಕೊಂಡಿದೆ. ಗಾಂಧಿಯವರ ನೂಲುವ ಶ್ರದ್ಧೆ, ಕೈನೂಲಿನ ಮತ್ತು ಕೈ ನೆಯ್ಗೆಯ ಬಟ್ಟೆಯ ಬಗ್ಗೆ ಅವರಿಗಿದ್ದ ಪ್ರೀತಿ. ಇವಕ್ಕೆ ಸಂಬಂಧಿಸಿದ ಕೆಲವು ಉದ್ಧೃತ ಭಾಗಗಳನ್ನು ನಾನು ಇಲ್ಲಿ ಕೊಡುತ್ತೇನೆ. ಪ್ರತಿ ತಾರೀಕಿನ ಕೆಳಗೂ ಇವಿಷ್ಟೇ ಸಂಗತಿಗಳಿದ್ದವೆಂದು ದಯವಿಟ್ಟು ತಿಳಿದುಕೊಳ್ಳಬಾರದು.

—ಕಿ. ಘ. ಮ.]

೧೧—೩—೩೨

ಚರಕದಲ್ಲಿ ತಾವು ಮಾಡಿದ ಬದಲಾವಣೆಗಳನ್ನು ಬಾಪು ತಾವು ನೂಲುವಾಗ ನನಗೆ ಚರ್ಚಿಸಿದರು. ಈಗ ತಾವು ದಿನಕ್ಕೆ ೨೫೦ ಗಜದಷ್ಟು ನೂಲುವೆವೆಂದು ಅವರು ನನಗೆ ಹೇಳಿದರು. ತಮಗೆ ಇನ್ನೂ ಆಯಾಸವಾಗುವುದೆಂದು ಅವರು ಹೇಳಿದರು.

೭—೧೧—೩೨

ಸಿರಿಯದಿಂದ ಬಾಪುವಿನ ಕೈಗೆ ಒಂದು ಒಳ್ಳೆಯ ಉಣ್ಣೆಯ ಜಮಖಾನೆ ಬಂದು ಮುಟ್ಟಿತು. ಅದಕ್ಕೆ ಕಪ್ಪೂತ್ತಿದ ಕೆಂಪು, ಕೇಸರಿ ಮತ್ತು ಬೂದಿ ಬಣ್ಣದ ಪಟ್ಟೆಗಳೂ ಸುಂದರವಾದ ಕಪ್ಪುಕಪ್ಪಾದ ಚಿತ್ರಣವೂ ಇವೆ. ಅದರೊಟ್ಟಿಗೆ ಬಂದ ಕಾಗದ ಸಂಪೂರ್ಣ ಪ್ರತಿ ತೆಗೆದಿಡಲು ಯೋಗ್ಯವಿದೆ:

"ಬ್ರಿಟಿಶ್ ರಾಯಭಾರಿ ಕಚೇರಿ,

"ಅಲೆಪ್ಪೊ, ಸಿರಿಯ,

"ಆದಿತ್ಯವಾರ, ಜನವರಿ, ೧೭

ಅಂಗ್ಲ ಅಡಳಿತದಲ್ಲಿ,

"ಪ್ರಿಯ ಗಾಂಧಿಯವರೆ,

"ನಿಮಗೆ ಕಾರಾಗೃಹ ವಾಸದಿಂದ ಮುಕ್ತರಾಗುವ ದಿನ ಬಂದಿದೆ. ಅಂಥ ನೀವು ನಮ್ಮ ಅರ್ಮೇನಿಯದ ರಾಷ್ಟ್ರೀಯ ವರ್ಣ ರಂಜಿತವೂ ನಿರಾಶ್ರಿತರು ನೂತವೂ ಆದ ಜಮಖಾನುಗಳನ್ನು ಸ್ವೀಕರಿಸಬೇಕು. ಈ ಯುದ್ಧಕ್ಕೆ ಬಲಿಯಾದ ಜನರು ಸಾವಿನ ದುಃಖ ಮುಖದಲ್ಲಿ ಹೊಕ್ಕು ಹೊರಟವರು. ಇವರು ಹೋರಾಟದಲ್ಲಿ ಮಗ್ನರಾದವರ ನಡುವಣ ಶಿಶುರಾಷ್ಟ್ರದವರು. ಆ ಕಾರಣದಿಂದಲೂ ನನ್ನ ನಾಡು ಇವರ ಋಣಭಾರವನ್ನು ಹೊತ್ತಿರುವುದರಿಂದಲೂ ನಾನು ಇವರ ಮಧ್ಯ ಇದ್ದು ದುಡಿಯಲು ಬಂದಿದ್ದೇನೆ". ಬಣ್ಣಗಳಲ್ಲಿ ಕೆಂಪು ತ್ಯಾಗಸೂಚಕ, ಆಕಾಶನೀಲ ಪ್ರತ್ಯಾಶಾ ವ್ಯಂಜಕ, ಹೊಂಬಣ್ಣ ಜ್ಯೋತಿರ್ನಿರ್ದೇಶಕ. ನಮ್ಮ ಪ್ರಪಂಚಕ್ಕೆ ನೀವು ತರುತ್ತಿರುವ ಸಂದೇಶಕ್ಕಾಗಿ ನಿಮಗೆ ಅಗಾಧ ಕೃತಜ್ಞತೆ.

[ಮೋಟೋ ಎಡಿತ್ ರಾಬರ್ಟ್ಸ್"

೧೨—೪—೩೨

ಬಾಪು ಒಂದು ಕಾಗದವನ್ನು ಬರೆಸಬೇಕೆಂದಿದ್ದರು. ಆ ಕಾಲದಲ್ಲಿ ನಾನು ನೂಲುತ್ತಿದ್ದೆ. ಬಾಪು ಹೇಳಿದರು, 'ನೂಲುವುದನ್ನು ನಿಲ್ಲಿಸಿರೆಂದು ಅವರನ್ನು ನಾನು ಕೇಳಲಾರೆ'. ಅದಕ್ಕೆ ವಲ್ಲಭಭಾಯಿಯವರು— 'ನೀವು ನನಗೆ ಹೇಳಿ ಬರೆಯಿಸಿರಿ' ಎಂದರು. ಆಗ ಬಾಪು, "ಆಗಲಿ, ನಿಮ್ಮಲ್ಲಿ ನಾನು ದಯೆಯಿಡಲಾರೆ," ಎಂದು ಅವರಿಗೆ ಹೇಳಿ ಬರೆಯಿಸಿದರು.

೧೩—೪—೩೨

ಬಾಪುವಿನ ಎಡ ಭುಜದ ಮೂಳೆಯಲ್ಲಿ ನೋವಿದೆ; ಬಲಗೈಯ ಹೆಬ್ಬೆರಳಲ್ಲೂ ಹಾಗೇ ನೋವಿದೆಯೆನ್ನುತ್ತಾರೆ. ಆದರೆ ಪ್ರತಿ ದಿನ ೩೭೫ ಸುತ್ತು ನೂಲು ತೆಗೆಯಬೇಕೆಂದು ಅವರು ಕಳೆದ ೩ ದಿನಗಳಲ್ಲಿ ವ್ರತ ಹಿಡಿದಂತೆ ತೋರುತ್ತದೆ. ಎರಡು ಕೈಗಳಿಗೂ ಸಂಪೂರ್ಣ ವಿಶ್ರಾಂತಿ ಬೇಕೆಂದು ಡಾ. ಮೇಥಾ ಹೇಳಿದ್ದಾರೆ. ಆದರೆ ನೂಲುವುದರಿಂದ ನೋವು ಹೆಚ್ಚಾಗುವುದಿಲ್ಲವೆಂದು ಬಾಪು ಹೇಳುತ್ತಾರೆ. ರಾಷ್ಟ್ರೀಯ ವಾರವಾದುದರಿಂದ ಅವರು ಅತಿಯಾಗಿ ತಕಲಿ ತಿರುಗಿಸಿದಂತೆ ತೋರುತ್ತದೆ. ಅವರಿಗೆ ಆಯಾಸವಾಯಿತು. ಸಾಮಾನ್ಯವಾಗಿ ಅರರಾಷ್ಟದ ಮೂರು ಗಂಟೆಯೊಳಗೆ ನೂಲುವುದು ಮುಗಿದು ಹೋಗುತ್ತದೆ. ಆದರೆ ಆ ವಾರದ ಕೊನೆಯ ದಿನವಾದುದರಿಂದ ೫೦೦ ಗಜ ನೂಲುವಲ್ಲಿಯ ವರೆಗೆ ಅವರಿಗೆ ತೃಪ್ತಿಯುಂಟಾಗಲಿಲ್ಲ; ಆದುದರಿಂದ ಅವರು ೪ ರ ವರೆಗೆ ನೂತು ಬೇಕಾಗಿದ್ದಷ್ಟು ಸುತ್ತುಗಳನ್ನು ಮುಗಿಸಿದರು.

೧೪—೪—೩೨

ಇಂದಿನಿಂದ ಬಾಪು ಪ್ರತಿನಿತ್ಯ ೫೦೦ ಗಜ ನೂಲಲು ನಿರ್ಧರಿಸಿದಂತೆ ತೋರುತ್ತದೆ. ಇಂದು ಅವರು ಬಹಳ ಬಳಲಿದರು.

೧೬—೪—೩೨

ಸೇವೆಗಾಗಿ ಬಾಪುವಿಗಿರುವ ಅದಮ್ಯ ಲೋಭವನ್ನು ತಿಳಿಯಲು ಇಲ್ಲವೆ ಗೆಲ್ಲಲು ಯಾರು ಶಕ್ತರು? ಕೈಗಳಲ್ಲಿ ನೋವಿದೆ, ವೈದ್ಯರು ಬೇಡವೆನ್ನುತ್ತಾರೆ, ಆದರೆ ಅವರು ನೂಲುವುದಕ್ಕೂ ನೋವಿಗೂ ಏನೂ ಸಂಬಂಧವಿಲ್ಲೆಂದು ಪುನಃ ಪುನಃ ಹೇಳುತ್ತಾರೆ. ಅದರಂತೆ ಅವರಿಂದು ೪೦೫ ಸುತ್ತು ನೂಲುತೆಗೆದಿದ್ದಾರೆ. "ನೋಡಿರಿ, ನಾನು ಹೇಗೆ ಮುಂಬರಿಯುತ್ತಿದ್ದೇನೆ" ಎನ್ನುತ್ತಾರೆ ಅವರು. ಇದರ ಜೊತೆಗೆ ಅವರ ಉರ್ದು ಲೋಭ ಬೇರೆ. ಉರ್ದುವಿನಲ್ಲಿ ತಮಗಿರುವ ಜ್ಞಾನವನ್ನು ಪರಿಷ್ಕರಿಸಬೇಕೆನ್ನುತ್ತಾರೆ. ಮತ್ತು ಅದನ್ನು ಬೇಗ ಬೇಗ ಓದಲು ಕಲಿಯಬೇಕಂತೆ ತಾವು! ರೇಹನ್ ಬಹಿನ್ ಉರ್ದುವಿನಲ್ಲಿ ಬರೆಯುತ್ತಾಳೆ. ಅವಳಿಗೆ ಅವರು ಉತ್ತರವನ್ನು ಉರ್ದುವಿನಲ್ಲಿಯೇ ಕಳಿಸುತ್ತಾರೆ; ಮತ್ತು ತನ್ನ ತಪ್ಪುಗಳನ್ನು ತೋರಿಸೆಂದು ಅವಳನ್ನು ಕೇಳುತ್ತಾರೆ. ತಮ್ಮ ಶಿಕ್ಷಕಿ ಎಂದು ಅವರು ಅವಳನ್ನು ಕರೆಯುತ್ತಾರೆ. ಅವಳ 'ಶಿಷ್ಯ' ಎಂದು ಕಾಗದದ ಕೆಳಗೆ ಸಹಿ ಮಾಡುತ್ತಾರೆ. 'ಇಷ್ಟು ಸಾಲ'ದೆಂದು ಸೆರೆಮನೆಯ ಪುಸ್ತಕ ಭಂಡಾರದಿಂದ ಉರ್ದು ಪುಸ್ತಕಗಳೆಲ್ಲವನ್ನೂ ತರಿಸಿಕೊಂಡು ಬೆಳಗಿನಿಂದ ಊಟದ ಸಮಯದ ವರೆಗೆ ಓದುತ್ತಲಿದ್ದಾರೆ.

೧೭—೪—೩೨

ನಾನು ಬಾಪುವಿನ ಲೋಭವನ್ನು ನಿನ್ನೆ ಹೇಳಿದ್ದೆ. ವೈದ್ಯರ ಸಲಹೆಯನ್ನು ಸ್ವೀಕರಿಸುವ ತೋರಿಕೆಯ ಉದ್ದೇಶದಿಂದ, ಅರ್ಥಾತ್ ಎಡಭುಜದ ಮೂಳೆಗೆ ವಿರಾಮ ಕೊಡಲೆಂದು, ಅವರು ಹೊಸದೊಂದು ಸೇವಾ ಕಾರ್ಯವನ್ನು ಯೋಚಿಸಿ ಇಟ್ಟಿದ್ದಾರೆ. ಬಾರ್ಡೋಲಿಯ "ಯರವಾಡ ಚರಕ"ದಲ್ಲಿ ಕದಿರನ್ನು ಬಲಗಡೆಯಲ್ಲಿ ಜೋಡಿಸಿ ಹಾಕಬಹುದು; ಆದರಿಂದ ಚಕ್ರವನ್ನು ಎಡಗೈಯಿಂದ ತಿರುಗಿಸಲು ಬರುವಂತಾಗುವುದು: ಇಂದು ಅವರು ಈ ರೀತಿ ನೂಲಲಾರಂಭಿಸಿದರು. ಇದರಿಂದ ಅವರಿಗೆ ಅವಶ್ಯವಿದ್ದ ವಿರಾಮ ಸಿಗುವದೆಂದು ನನಗೆ ನಂಬಿಗೆಯಾಗಲಿಲ್ಲ. ಏಕೆಂದರೆ ಎಡಗೈ ಚಕ್ರ ತಿರುಗಿಸುತ್ತಿರುವಾಗ ಬಲಗೈ ನೂಲನ್ನು ಎಳೆಯುತ್ತಿರುತ್ತದೆ. ಅದು ಕೈಗಳೆರಡರಲ್ಲಿ ಆಯಾಸದ ಸ್ಥಳಗಳನ್ನು ಬದಲಿಸುತ್ತದೆ ಮಾತ್ರ. ಆದರೂ ಬಾಪು ತಮ್ಮ ಪ್ರಯೋಗವನ್ನು ಸುರು ಮಾಡಿಯೇ ಬಿಟ್ಟರು. ನನ್ನ ಬಲಗೈಯಲ್ಲಿ ನೋವಿದ್ದಾಗ ನಾಸಿಕದಲ್ಲಿ ನಾನು ಇದೇ ರೀತಿ ಪ್ರಯತ್ನಿಸಿದ್ದೆ. ಆದರೆ ನನಗೆ ಒಂದು ನೂಲೆಳೆಯನ್ನೂ ತೆಗೆಯಲಾಗಲಿಲ್ಲ. ನಾನು ಆ ಪ್ರಯತ್ನವನ್ನು ಬಿಟ್ಟುಬಿಟ್ಟೆ. ಆದರೆ ಬಾಪು ಬಿಡಲೇ ಇಲ್ಲ. ಅವರು ೧॥ ಗಂಟೆಯ ತನಕ ಪ್ರಯತ್ನ ಮಾಡಿ ೭ ಲಡಿ ನೂಲು ತೆಗೆದರು. ಕಡೆಯ ಲಡಿಯಿಂದ ಅವರು ಬಲಗೈಯಿಂದ ಹೇಗೋ ಹಾಗೇ ಎಡಗೈಯಿಂದಲೂ ನೂಲು ತೆಗೆಯಬಲ್ಲವರಾದರು. ಅವರು ಸಂತುಷ್ಟರಾಗಿ, "ನೋಡಿರಿ, ನಾನು ೯೫ ಸುತ್ತು ನೂಲು ತೆಗೆದಿದ್ದೇನೆ. ನಿನ್ನೆ ೨೮೦ ಸುತ್ತು ನನ್ನ ಶಿಲುಕಿನಲ್ಲಿ ಉಳಿದಿತ್ತು. ಎರಡೂ ಸೇರಿ ದಿನಕ್ಕೆ ೩೭೫ ಸುತ್ತು ತೆಗೆವ ನನ್ನ ಕರ್ತವ್ಯವನ್ನು ಪೂರಯಿಸುತ್ತವೆ" ಎಂದು ನನಗೆ ಹೇಳಿದರು. ಆಗ ನಾನು, "ಆದರೆ ಬಾಪು, ನಿಮಗಿದರಿಂದ ವಿಶ್ರಾಂತಿ ಸಿಕ್ಕುವುದಿಲ್ಲ!" ಎಂದೆ. ಅದಕ್ಕವರು, "ಅಭ್ಯಾಸದಿಂದ ಇದು ನನಗೆ ಅಗತ್ಯವಿರುವ ವಿಶ್ರಾಂತಿಯನ್ನು ಕೊಡುವುದು. ಒಂದು ವೇಳೆ ಅದು ಕೊಡದಿದ್ದರೂ ಅದೊಂದು ಲಾಭಕರವಾದ ಕೆಲಸ. ಏಕೆಂದರೆ, ಒಂದು ವೇಳೆ ಬಲಗೈ ಕೆಲಸ ಮಾಡಲೊಲ್ಲೆನೆಂದು ಕುಳಿತು ಬಿಟ್ಟರೆ ಆಗ ಹೀಗೆ ಎಡಗೈಗೆ ಅಭ್ಯಾಸ ಮಾಡಿಸಿದ್ದು ಉಪಯೋಗಕ್ಕೆ ಬೀಳುತ್ತದೆ," ಎಂದರು ಬಾಪು.

೧೮—೪—೩೨

"ಯರವಾಡ ಚರಕದ" ಕದಿರನಲ್ಲಿ ಬಾಪು ಬದಲಾವಣೆ ಮಾಡಿದರು. ನಿನ್ನೆಯ ಚಕ್ರದ ಅಡ್ಡಿತಾನಗಳು ತೋರ್ಪಡಿಸಿದ್ದು, ಅದರಿಂದ ಅದರ ತಪ್ಪು ಸ್ಥಾನ ಚಕ್ರವನ್ನು ಎಡಗೈಯಿಂದ ನೂಲಲು ತಪ್ಪು ಪ್ರಯೋಗವನ್ನು ಮುಂದುವರಿಸಿದರು. ಫಲಿತಾಂಶ ನಿಕ್ಕಿ ಗಿಂತ ಉತ್ತಮವಾಯಿತು. ನಿನ್ನೆ ಅವರು ೩। ತಾಸಿನಲ್ಲಿ ೯೫ ಸುತ್ತು ನೂಲು ತೆಗೆದಿದ್ದರು. ಇಂದು ೩। ತಾಸಿನಲ್ಲಿ ೧೫೫ ಸುತ್ತು ನೂತರು. ವಲ್ಲಭಭಾಯಿಯವರು "ಇದು ಬಾಪುವಿನದು ಹೊಸ ಅಭ್ಯಾಸ ಮಾಡಿಕೊಳ್ಳಲು ಈಗ ಕಾಲ ಮೀರಿ ಹೋಗಿದೆ. ಹಳೆಯ ಅಭ್ಯಾಸದಲ್ಲೇ ನೀವು ಓಡಿಯಬೇಕು" ಎಂದರು. ಅದಕ್ಕೆ ಬಾಪು, "ಇದಷ್ಟಾದರೂ ಸುಳ್ಳೆನ್ನಲು— ನಾನು ನಿನ್ನೆಗಿಂತ ಹೆಚ್ಚು ಮುನ್ನಡೆದಿದ್ದೇನೆ" ಎಂದರು. ಆಗ ವಲ್ಲಭಭಾಯಿಯವರು "ಅಕ್ರಮವಾಸಿಗಳಿಗೂ ತಿಳಿದರೆ, ಅವರು ಎಡಗೈಯಿಂದ ನೂಲಲಾರಂಭಿಸಿ ಹೊಸದೊಂದು ಜಾತಿಯೇ ಹುಟ್ಟುವುದು!" ಎಂದು ನುಡಿದರು. ಬಾಪು ಅದಕ್ಕೆ "ಖಂಡಿತವಾಗಿಯೂ, ಅವರಿಗೆ ಗೊತ್ತಾಗಿಯೇ ಆಗುವುದು, ನಾನು ಅವರಿಗೆ ಬರೆಯುತ್ತೇನೆ" ಎಂದರು. ಇದಕ್ಕೆ ವಲ್ಲಭಭಾಯಿಯವರು ಸ್ವಲ್ಪ ಗಂಭೀರ ಭಾವ ತಾಳಿ, [illegible]

[illegible]

—ಮಹಾದೇವ ದೇಸಾಯಿ

(ಗುಜರಾತಿಯಿಂದ ಭಾಷಾಂತರಿಸಿದ್ದು)

ಭಾರತದಲ್ಲಿ ಪಾರಿಭಾಷಿಕ ಶಬ್ದಗಳು

('ಹರಿಜನ'ದಲ್ಲಿ ಶ್ರೀ ಸಿ. ಜೆ. ಶಹ ಅವರು ಬರೆದುದರ ಸಾರ)

ಸ್ವತಂತ್ರ ಹಿಂದುಸ್ತಾನ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅವುಗಳಲ್ಲಿ ತಾಯ್ನುಡಿಯ ಮೂಲಕ ಸಂಪೂರ್ಣ ವಿಜ್ಞಾನಾಭ್ಯಾಸ ಮಾಡಿಸುವುದು ಒಂದು.

ಇಂಗ್ಲೀಷರ ಆಳಿಕೆ ಮುಗಿದ ಈ ಕಾಲದಲ್ಲಿ ಸರಕಾರೀ ಭಾಷೆ ಅಥವಾ ಪ್ರಾದೇಶಿಕ ಭಾಷೆಯ ಮೂಲಕ ವಿದ್ಯಾಭ್ಯಾಸ ಕೊಡುವ ಪ್ರಶ್ನೆಗೆ ಎಲ್ಲೆಲ್ಲೂ ಮಹತ್ವಉಂಟಾಗಿದೆ. ಇಂಗ್ಲೀಷು ಇಂಗ್ಲೀಷರ ಜೊತೆಗೇ ಹೋಯಿತು. ಆದರೆ ಹೊಸ ಸರಕಾರೀ ಭಾಷೆಯನ್ನು ಪ್ರಾದೇಶಿಕ, ಅಂತಃಪ್ರಾಂತೀಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅವಶ್ಯಕತೆಗಳನ್ನು ಪೂರಯಿಸಬರುವಂತೆ ಹೇಗೆ ರೂಪಿಸಬೇಕೆಂಬುದೇ ಇಂದಿನ ಸಮಸ್ಯೆಯಾಗಿದೆ. ೫ ವರ್ಷಗಳಲ್ಲಿ ಇಂಗ್ಲೀಷನ್ನು ಶಾಲೆಗಳಿಂದ ತೆಗೆದುಹಾಕಬೇಕೆಂದು ಅ. ಭಾ. ವಿದ್ಯಾಪರಿಷತ್ತು ನಿರ್ಣಯಿಸಿದೆಟ್ಟಿದೆ. ಈ ಐದುವರ್ಷಗಳಲ್ಲಿ ಪ್ರಾದೇಶಿಕ ರಾಜ್ಯಭಾಷೆಯನ್ನು ಸಂಪೂರ್ಣತೆಗೊಯ್ಯುವಸಿದ್ಧತೆಗಾಗಿ ಬಳಸಬೇಕೆಂದು ಉಪಕುಲಪತಿಗಳ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾಶಾಸ್ತ್ರಿಗಳ ಸಮಿತಿ ಕಳೆದ ಮೇ ತಿಂಗಳಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿತು.

ಈ ಮಧ್ಯಕಾಲವನ್ನು ೫ ವರ್ಷವೆಂದು ನಿರ್ಣಯಿಸಿದ್ದರ ವಿರುದ್ಧ ಉಗ್ರ ಟೀಕೆಬಂದಿದೆ. ಈ ೫ ವರ್ಷ ಬಹಳ ಹೆಚ್ಚಾಯಿತೆಂದೂ ಅಷ್ಟರೊಳಗೇ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ತಾಯ್ನುಡಿಯನ್ನು ಇಂಗ್ಲೀಷಿನ ಸ್ಥಾನದಲ್ಲಿ ಬಳಸಬಹುದೆಂದೂ ಅ. ಭಾ. ಹಿಂದೀ ಸಾಹಿತ್ಯಸಮ್ಮೇಲನದ ಉಪಾಧ್ಯಕ್ಷರಾದ ಪಂಡಿತ ಮೌಲಿಚಂದ್ರ ಶರ್ಮರು ಅಭಿಪ್ರಾಯಪಡುತ್ತಾರೆ. ಈ ವರ್ಗದವರು ಸಂಸ್ಕೃತದ ಸಹಾಯದಿಂದ ಇಡೀ ಹಿಂದುಸ್ತಾನದಲ್ಲಿ ಬಳಸಬಹುದಾದ ಸಾಮಾನ್ಯಪಾರಿಭಾಷಿಕಪದಗಳನ್ನು ಯಶಸ್ವಿಯಾಗಿ ತಯಾರಿಸಬಹುದು ಎನ್ನುತ್ತಾರೆ.

ಇದೇ ಮೇರೆಗೆ ನಾಗಪುರ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಅಭಿಪ್ರಾಯಪಟ್ಟು ಡಾ. ರಘುವೀರರು ತಯಾರಿಸಿದ ರಸಾಯನಶಾಸ್ತ್ರದ ಪಾರಿಭಾಷಿಕ ಕೋಶವನ್ನು ಸ್ವೀಕರಿಸಿದ್ದಾರೆ. ಅದೇನೋ ಚೆನ್ನಾಗಿಯೇ ಇದೆ. ಆದರೆ ಅದರಲ್ಲಿರುವ ಹೈಡ್ರೋಜನ್ ಎಂಬುದಕ್ಕೆ ಉದಜನ, ಆಕ್ಸಿಜನ್ ಎನ್ನಲು ಜಾರಕ, ರೇಡಿಯಂ ಎನ್ನಲು ತೇಜಾತು ಮುಂತಾದ ಶಬ್ದಗಳು ಅಂತಾರಾಷ್ಟ್ರೀಯ ದೃಷ್ಟಿಯಿಂದಲೂ ಸಾಮಾನ್ಯ ಮನುಷ್ಯನ ಅವಶ್ಯಕತೆಯ ದೃಷ್ಟಿಯಿಂದಲೂ ಅಪ್ರಯೋಜಕವೆನಿಸದಿರವು. ಏಕೆಂದರೆ, ಯಾವ ಪಾರಿಭಾಷಿಕ ಕೋಶವೇ ಆಗಲಿ, ಇಂಗ್ಲೀಷು ಮಾತನಾಡುವ ಜಗತ್ತಿನ ರಾಷ್ಟ್ರಗಳೊಡನೆ ಅಂತಾರಾಷ್ಟ್ರೀಯ ಸಂಬಂಧದ ಸಂದರ್ಭಗಳನ್ನು ಸಂಪೂರ್ಣವಾಗಿ ತೊರೆದುಬಿಡಬಾರದು. ಎರಡನೆಯದಾಗಿ ಅದು ಸ್ಥಳೀಯ ಒಕ್ಕಲಿಗರು, ಕಾರಖಾನೆಯ ಕೆಲಸಗಾರರು, ವ್ಯಾಪಾರಿಗಳು ಮತ್ತು ವೃತ್ತಪತ್ರಿಕೆಗಳು ಬಳಸುತ್ತಿರುವ ವೈಜ್ಞಾನಿಕ ಪದಗಳನ್ನು ಅಲಕ್ಷ್ಯ ಮಾಡತಕ್ಕದ್ದು. ಅಷ್ಟಲ್ಲದೆ ಎಷ್ಟೋ ಸರಕಾರೀ ಸಂಸ್ಥೆಗಳು ಆಗಲೇ ಇಂಗ್ಲೀಷನ್ನು ಸಂಪೂರ್ಣ ಹೊರಗೆ ತಳ್ಳಿ ಪ್ರಾದೇಶಿಕ ಭಾಷೆಗಳನ್ನು ದೊಡ್ಡಕ ಭಾಷೆಗಳನ್ನಾಗಿ ಸ್ವೀಕರಿಸಿಕೊಂಡು ಎಷ್ಟೋ ಶಬ್ದಗಳನ್ನು ಬಳಕೆಗೆ ತಂದಿರುವುದರಿಂದ ಅವನ್ನು ಬದಲಿಸಲು ಕಾರಣವಿಲ್ಲ.

ಸ್ವತಂತ್ರ ಭಾರತದ ಅಂತಾರಾಷ್ಟ್ರೀಯ ಸಂಬಂಧದ ಪ್ರಾಧಾನ್ಯವನ್ನು ಅಲ್ಲಗಳೆಯಲಾಗದು. ಜಗತ್ತಿನ ಜನಸಂಖ್ಯೆಯಲ್ಲಿ ಐದರಲ್ಲಿ ಒಂದಂಶದಷ್ಟು ಜನಸಂಖ್ಯೆಯುಳ್ಳ ಭಾರತ ತನ್ನ ವಾಣಿಜ್ಯ, ಉದ್ಯಮ ಮತ್ತು ರಾಜಕಾರಣಗಳಲ್ಲಿ ಮುಂಬರಿಯುತ್ತಿರುವದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಷ್ಟೋ ಸಮಸ್ಯೆಗಳನ್ನು ಚರ್ಚಿಸಬೇಕಾಗುವದು, ತನ್ನ ಸಾಂಸ್ಕೃತಿಕ ಮತ್ತು ರಾಜಕೀಯ ಸ್ಥಾನಮಾನವನ್ನು ಕಾಯ್ದುಕೊಳ್ಳಬೇಕಾಗುವದು. ವೈದ್ಯಕೀಯ, ವಿಜ್ಞಾನ, ವಿಷಯಗಳಲ್ಲಿ, ಕೂಲಿಕಾರರ [illegible] ಯೋಗಕ್ಷೇಮದ ಕ್ಷೇತ್ರಗಳಲ್ಲಿ ಮತ್ತು ಜ್ಞಾನ ವಿಜ್ಞಾನಗಳ ಬೆಳವಣಿಗೆಯಲ್ಲಿ ಅಂತಾರಾಷ್ಟ್ರೀಯ ಮಟ್ಟಗಳನ್ನು ಒಪ್ಪದಿದ್ದರೆ ಅವನ್ನು ಸ್ಥಳೀಯ ಪರಿಸ್ಥಿತಿಗೆ ಹೊಂದಿಸಬೇಕಾಗಿರುವ ಈ ಕಾಲದಲ್ಲಿ ಅಂತಾರಾಷ್ಟ್ರೀಯ ಪಾರಿಭಾಷಿಕ ಕೋಶವನ್ನು ಸಂಪೂರ್ಣವಾಗಿ ಅಲಕ್ಷಿಸುವದು ದೊಡ್ಡ ನಷ್ಟವೆನಿಸೀತು. ಸ್ವಾತಂತ್ರ್ಯ ಪಡೆದ ಉತ್ಸಾಹದಲ್ಲಿ ನಾವು ಒಂದು ರಾಷ್ಟ್ರವೆಂಬ ವ್ಯಕ್ತಿತ್ವ ವೈಶಿಷ್ಟ್ಯವನ್ನು ಒತ್ತಿ ಹೇಳಹೊರಡುವಲ್ಲಿ ವ್ಯವಹಾರ ಮೂಢರಾಗಿಯೋ ಏಕಾಂತಿಕ ಪ್ರತಿಪಾದಕರಾಗಿಯೋ ಇರುವದು ಒಳ್ಳೆಯದಲ್ಲ. ಇದೇ ಮಾತನ್ನು ಪಂ. ಜವಾಹರಲಾಲರೂ ಪಾರಿಭಾಷಿಕ ಕೋಶವನ್ನು ರಚಿಸಿಕೊಳ್ಳುವ ಇಲ್ಲವೆ ಪ್ರಾದೇಶಿಕ ಭಾಷೆಯ ಪ್ರತಿಭೆಯನ್ನು ಮತ್ತು ಹಳೆಯ ಬಳಕೆಯನ್ನು ಅಲ್ಲಗಳೆದ ಮುಖ್ಯಗಳನ್ನು ಹೇಳಿದ್ದಾರೆ.

ವಿಜ್ಞಾನ ಮತ್ತು ಸಾಹಿತ್ಯಗಳಿಗೆ ಹಿಂದೀಯರು ಸ್ವತಃ ಹೊಸ ಕೃತಿಗಳನ್ನು ನೀಡಿಸಲು ತೊಡಗಿದಂತೆ ಅವರು ನೂರಾರು ಶಬ್ದಗಳನ್ನು ಸಿದ್ಧಪಡಿಸುವರು. ಮತ್ತು ಅವನ್ನು ಅವುಗಳ ಅಂತರ್ಗತ ಯೋಗ್ಯತೆಯಿಂದ ಇಡೀ ಜಗತ್ತು ಸ್ವೀಕರಿಸಬೇಕಾಗುತ್ತದೆ. ಪರದೇಶದ ಕೆಲ ಸಾವಿರ ಶಬ್ದಗಳನ್ನು ತೆಗೆದುಕೊಂಡ ಮಾತ್ರದಿಂದ ಭಾರತೀಯ ಭಾಷೆಗಳು ಅಪಭ್ರಂಶವೆನಿಸಲಾರವು; ಅದನ್ನು ಜೀರ್ಣಿಸಿಕೊಳ್ಳುವಷ್ಟು ಶಕ್ತಿ ಮತ್ತು ಜೀವನ ಅವಕ್ಕಿದೆ. ಭಾಷ, ಗುಣ, ಧರ್ಮ, ಘಟನೆ, ವಿಧಾನ ಮುಂತಾದ ವೈಜ್ಞಾನಿಕ ಶಬ್ದಗಳೆಷ್ಟೋ ಇವೆ. ಅವನ್ನು ಸುಲಭವಾಗಿ ನಮ್ಮ ಭಾಷೆಗಳಲ್ಲಿ ಹೊಸ ಪಾರಿಭಾಷಿಕ ಪದಗಳಿಂದ ಅನುವಾದಿಸಿ ಬಿಡಬಹುದು. ವೈಜ್ಞಾನಿಕ ಸಾಧನಗಳು, ಉಪಕರಣ, ಯಂತ್ರ ಸಾಮಗ್ರಿ ಮುಂತಾದವುಗಳನ್ನು ಹಾಗೇ ಸುಲಭವಾಗಿ ದೇಶ ಭಾಷೆಗಳಲ್ಲಿ ಹೊಸ ಶಬ್ದಗಳಿಂದ ಹೇಳಿಬಿಡಬಹುದು.

ಕಡೆಯ ಸಂಗತಿಯನ್ನು [illegible] ಗುಜರಾತಿಯನ್ನು [illegible] ಹಿಂದಿ ಅಥವಾ [illegible] ಪಾರಿಭಾಷಿಕ ಕೋಶಗಳು ತಯಾರಾಗುವವರೆಗೆ ಎಷ್ಟೋ ಹಿಂದೆಯೇ ಗುಜರಾತಿಯಲ್ಲಿ ಪ್ರೊ. [illegible] ಗಜ್ಜರರು [illegible]

—[illegible]

ನಿಜಾಮು-ರಾಜಾಜಿ ಪತ್ರಗಳು

ನಿಜಾಮ ಕಾಲೇ ವಿಪರೀತ ಬುದ್ಧಿ !

ಹೈದರಾಬಾದಿನ ಉಪ ಮುಖ್ಯ ಮಂತ್ರಿಗಳಾದ ಶ್ರೀ ಪಿಂಗಳಿ ವೆಂಕಟರಾಮ ರೆಡ್ಡಿಯವರು ಹೈದರಾಬಾದ ಶಾಸನ ಸಭೆಯಲ್ಲಿ ತಾ. ೬ ಕ್ಕೆ ನಿಜಾಮು-ರಾಜಾಜಿ ಪತ್ರವ್ಯವಹಾರವನ್ನು ಓದಿ ತೋರಿಸಿದರು. ಅವುಗಳ ಸಾರಾಂಶ ಕೆಳಗಿನಂತೆ.

ನಿಜಾಮರ ಅಗಸ್ಟ ೨೩ ರ ತಂತಿ

ಇಂಗ್ಲಂಡಿನ ಜಾರ್ಜ ಅರಸರ ಪತ್ರವೂ ಈಗ ಮುಗಿದಿರುವ ನಿಮ್ಮ ಪತ್ರವೂ ನಿನ್ನೆ ರಾತ್ರಿ ನನ್ನ ಕೈಸೇರಿದವು. ಹೈದರಾಬಾದ-ಹಿಂದುಸ್ತಾನಗಳು ಪರಸ್ಪರರಂತೆ ಬಾಳುವವರಾಗಿರುವದರಿಂದ ಸದಾ ಸ್ನೇಹಾಕಾಂಕ್ಷಿಯಾಗಿರುತ್ತೇನೆಂದು ಆಶ್ವಾಸನ ಕೊಡುತ್ತೇನೆ. ಪರಸ್ಪರರಿಗೂ ಗೌರವವಾಗಿರುವ ಒಪ್ಪಂದಕ್ಕೆ ಸದಾ ಸಿದ್ಧನಿದ್ದೇನೆ.

ತಾ ೨೬ ಕ್ಕೆ ನಿಜಾಮರ ೨ ನೇ ತಂತಿ

ದಿಲ್ಲಿಯಲ್ಲಿ ಹೊಸದಾಗಿ ನೇಮಕರಾದ ನಮ್ಮ ಏಜಂಟ ಜನರಲ ರವರು ಅಲ್ಲಿ ನಡೆದ ಸಂಭಾಷಣೆಯ ಸಾರಾಂಶವನ್ನು ತಿಳಿಸಿದ್ದಾರೆ. ನೀವು ನನ್ನ ಬಗ್ಗೆ ನನ್ನ ಸಂಸ್ಥಾನದ ಬಗ್ಗೆ ಹೊರಸಿದ ಉದಾರ ಸ್ನೇಹಪೂರ್ಣ ಉದ್ಗಾರಗಳಿಗಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ.

ಗವರ್ನರ ಜನರಲರ ತಾ. ೩೧ರ ಉತ್ತರ

ನಮ್ಮ ಮಾತುಕತೆ ನಡೆಸಿದ ಸಂಧಾನ ವಿಫಲವಾದುದಕ್ಕೆ ನನಗೆ ವಿವಂಚನೆಯಾಗಿದೆ. ಹೈದರಾಬಾದದಲ್ಲಿ ಉಂಟಾಗಿರುವ ಭಯಾನಕ ವಾತಾವರಣವನ್ನೂ ಅಸುರಕ್ಷಿತ ಭಾವನೆಯನ್ನೂ ಬೇಗ ಹೋಗಲಾಡಿಸುವದಕ್ಕೆ ನನ್ನ ಸರಕಾರದ ಅಭಿಪ್ರಾಯವೂ ಇದೇ ಆಗಿದೆ. ನಿಮ್ಮ ಸರಕಾರದ ಪ್ರೋತ್ಸಾಹದಿಂದಲೇ ಅನಿರ್ಬಂಧ ಘಾತಕ ಚಟುವಟಿಕೆಯಲ್ಲಿ ತೊಡಗಿದ ಖಾಸಗಿ ಸೈನ್ಯದಿಂದ ಸಂಸ್ಥಾನದಲ್ಲಿಯೂ ಗಡಿಯಲ್ಲಿಯೂ ಭಯೋತ್ಪಾದನೆಯುಂಟಾಗಿದ್ದನ್ನು ಅಲ್ಲಗಳೆಯ ಬರುವಂತಿಲ್ಲ.

ಸಂಸ್ಥಾನದ ಎಲ್ಲ ವರ್ಗದ ಜನರೂ ತಮ್ಮ ಪ್ರಾಣವಿತ್ತಗಳ ಸುರಕ್ಷಿತತೆಗಾಗಿ ತೆರಪಿಲ್ಲದೆ ಹಿಂದಿ ಒಕ್ಕೂಟದ ಪ್ರದೇಶಗಳಿಗೆ ಓಡಬರುತ್ತಿದ್ದು ಹಿಂದೀ ಒಕ್ಕೂಟದ ಸರಕಾರವು ಶಾಂತಿ ಸುವ್ಯವಸ್ಥೆಯನ್ನು ಸಂಸ್ಥಾನದಲ್ಲಿ ನೆಲೆಗೊಳಿಸಲು ಕೈಹಾಕಬೇಕೆಂದು ಅಸಂಖ್ಯಾತ ಬೇಡಿಕೆ ಬರಹತ್ತಿವೆ. ಹೈದರಾಬಾದದ ಅಶಾಂತಿಯು ಇಡೀ ದಕ್ಷಿಣ ಹಿಂದುಸ್ತಾನಕ್ಕೇ ಹಬ್ಬುವ ಭೀತಿಯುದೆ. ಇದನ್ನು ದುರ್ಲಕ್ಷಿಸಿದರೆ ಹಿಂದುಸ್ತಾನ ಸರಕಾರದ ನೈತಿಕ ಚ್ಯುತಿ ಎನಿಸದಿರದು.

ಹೈದರಾಬಾದದ ಜನರು ಗುಳೇ ಕಿತ್ತಿ ಬರುತ್ತಿರುವದರ ಪರಿಣಾಮವಾಗಿ ವ್ಯಾಪಾರ ಉದ್ದಿಮೆ ಹಾಳಾಗಿ ಸಾರಿಗೆ ಸಂಪರ್ಕಗಳ ತೊಂದರೆ ಸಂಭವಿಸಿ ನಾಗರಿಕ ಜೀವನದ ಆರ್ಥಿಕ ವ್ಯವಸ್ಥೆಯೇ ಕುಸಿದುಹೋಗುವದಕ್ಕೆ ಸಹಜವಾಗಿದೆ.

ಈಗಿದ್ದ ಪರಿಸ್ಥಿತಿಯನ್ನು ನಿಯಂತ್ರಿಸಲು ತಕ್ಕ ಉಪಾಯ ಕೈಕೊಳ್ಳದಿದ್ದರೆ ವಿನಾಶ ನಿಶ್ಚಿತವೆಂದು ನನ್ನ ಖಚಿತ ಮತವಾಗಿದೆ. ಜನರಲ್ಲಿಯ ಭಯ ತೊಲಗಿ ಆತ್ಮವಿಶ್ವಾಸ ಹೆಚ್ಚಿ ವ್ಯಾಪಾರ ಉದ್ದಿಮೆಗಳಲ್ಲಿ ಅವರು ಮತ್ತೆ ತೊಡಗುವಂತೆ ಮಾಡಲು ನೀವು ಧೈರ್ಯದಿಂದ ಜಾಣತನದ ಹೆಜ್ಜೆ ಹಾಕಬೇಕೆಂದು ನನ್ನ ಸೂಚನೆ. ಪ್ರಜಾ ಜನರ ಸುಖಕ್ಕಾಗಿ ನೀವು ಯಾವ ಕೆಲಸ ಮಾಡಬೇಕಾಗಿ ಬಂದರೂ ಅದರಲ್ಲಿ ಅಗೌರವವಿಲ್ಲ.

ಸರ್ ಮಿರ್ಝಾ ಇಸ್ಮಾಯಿಲರು ನಿಮ್ಮ ಹಿತೈಷಿಗಳು. ಹೈದರಾಬಾದದ ಅಂತರಂಗವನ್ನೆಲ್ಲ ಬಲ್ಲವರು. ಅವರು ಸೂಚಿಸಿದಂತೆ ಕೂಡಲೆ ಘಾತಕ ರಜಾಕಾರ ಸಂಸ್ಥೆಯನ್ನು ಅಕ್ರಮವೆಂದು ಸಾರಿರಿ. ಮತ್ತು ಸಿಕಂದರಾಬಾದದಲ್ಲಿ ಸೈನ್ಯವನ್ನಿಡಲು ಹಿಂದುಸ್ತಾನ ಸರಕಾರಕ್ಕೆ ಕೇಳಿಕೊಳ್ಳಬೇಕು. ಭಾರತದ ಸೈನ್ಯದಿಂದ ಜನರಲ್ಲಿ ಧೈರ್ಯ ಆತ್ಮವಿಶ್ವಾಸ ಹೆಚ್ಚುವುದೆ ಮಿತ್ರತ್ವದ ಒಪ್ಪಂದವು ಸುಲಭವಾಗುವದು. ಹೈದರಾಬಾದದ ಶಾಂತಿಯು ನಿಮ್ಮ ಪ್ರೇರಣೆಯಿಂದ ಮಾತ್ರ ನೆಲಸಬಲ್ಲದು. ನಿಮ್ಮ ನಿರ್ಧಾರದಿಂದಲೇ ಪರಿಸ್ಥಿತಿಯು ಹದಗೆಟ್ಟಿದೆ. ಒಪ್ಪಂದದ ನಿಮ್ಮ ಧೋರಣ ಈಗ ಪ್ರಯೋಜನವಿಲ್ಲ.

ನಿಮ್ಮ ವೈಯಕ್ತಿಕ ಮಿತ್ರನೆಂಬ ಭಾವನೆಯಿಂದ ನಾನು ಈ ಪತ್ರ ಬರೆದಿದ್ದೇನೆ. ನಿಮ್ಮ ಪ್ರಜಾಹಿತ ನಿಮ್ಮ ಕೈಯಲ್ಲಿಯೇ ಇದೆ. ದೇವರು ನಿಮ್ಮಿಬ್ಬರಿಗೂ ಮಾರ್ಗದರ್ಶನ ಮಾಡಲಿ.

ಸೇವಾಗ್ರಾಮದಲ್ಲಿ ಶ್ರೀ ರಾಜಾಜಿ

ಗಾಂಧಿಜೀಯವರ ನಿಧನಾನಂತರ ಶ್ರೀ ರಾಜಾಜಿ ತಾ ೨೩ ರಂದು ಮೊದಲ ಸಲ ಸೇವಾಗ್ರಾಮಕ್ಕೆ ಭೆಟ್ಟಿಕೊಟ್ಟರು. ಆಗ ವರ್ಧಾ ಮತ್ತು ಸೇವಾಗ್ರಾಮದ ಹತ್ತು ಸಂಸ್ಥೆಗಳ ಕಾರ್ಯಕರ್ತರು ಶ್ರೀ ರಾಜಾಜಿಯವರನ್ನು ಕಾಣಲು ಬಂದರು. ಪ್ರಸಂಗ ಹೀಗೆ ಒಂದಾಗಿ ಗವರ್ನರ್ ಜನರಲರೆಂಬ ಅಧಿಕಾರದಿಂದ ಸಾರ್ವಜನಿಕ ಸಂಸ್ಥೆಯೊಂದಕ್ಕೆ ಕೊಟ್ಟ ಸಂದರ್ಶನದ ಕೃತಾಭಿಲಾಷೆಯೆಂದು ಗ್ರಹಿಸಿ ತಮಗೊಂದು ಇದು ಮಹಾಯಾತ್ರೆಯೆಂದೇ ಶ್ರೀ ರಾಜಾಜಿ ತಿಳಿದರು. ಅವರು ಸೇವಾಗ್ರಾಮದ ವಿವಿಧ ಸಂಸ್ಥೆಗಳನ್ನು ನೋಡುತ್ತ ಆಶ್ರಮವಾಸಿಗಳೊಡನೆ ಹರಟುತ್ತ ನಗುತ್ತ ಕಳೆಯುತ್ತ ನಾಲ್ಕು ತಾಸು ಕಳೆದರು. ಬಾಪೂವಿನ ಕುಟೀರವನ್ನು ಪ್ರವೇಶಿಸುತ್ತಲೇ ರಾಜಾಜಿ ಅತ್ಯಂತ ಭಾವನಾಪರವಶರಾಗಿ ಬಾಪೂವಿನ ಹಾಸಿದ ಹುಲ್ಲು ಚಾಪೆಯ ಮೇಲೆ ಬಿದ್ದುಬಿಟ್ಟರು. ಬಾಪೂ ಈಗ ಬಂದು ಬಿಡುವರೋ ಏನೋ ಎನ್ನುವ ಹಾಗೆ ಈ ಚಾಪೆಯನ್ನು ಬಾಪೂವಿನ ಕಾಲದಲ್ಲಿದ್ದಂತೆ ಓರಣಿಸಿ ಹಾಸಿಯೇ ಇರಿಸಲಾಗಿದೆ. ಕೆಲ ನಿಮಿಷಗಳ ವರೆಗೆ ರಾಜಾಜಿ ನೀರು ತುಂಬಿದ ಕಣ್ಣುಗಳಿಂದ ನಿಶ್ಚಲರಾಗಿದ್ದರು. ಆ ಮೇಲೆ ಮೆಲ್ಲಗೆ ಎದ್ದು ಕುಟೀರದ ಪೂರ್ವ ಭಾಗದ ಗೋಡೆಗೆ ಒರಗಿ ತಟ್ಟೆಯ ಮರೆಗೆ ಕುಳಿತರು. ಆಶ್ರಮವಾಸಿಗಳು ಇನ್ನೊಂದು ಗುಡಿಸಲಲ್ಲಿ ರಾಜಾಜಿಯನ್ನು ಕಾಣಬೇಕೆಂದಿದ್ದರು. ಆದರೆ ಅವರು ಇಲ್ಲಿಯೇ ಕುಳಿತದರಿಂದ ಆಶ್ರಮವಾಸಿಗಳೆಲ್ಲ ಬಾಪೂವಿನ ಕೋಣೆಯಲ್ಲಿಯೇ ಒಟ್ಟುಗೂಡಿದರು. ಶ್ರೀ ಕಾಶೀಬೇನ ಗಾಂಧಿಯವರ ಮತ್ತು ಶ್ರೀ ಪ್ರಭಾಕರಜಿಯವರ ಪ್ರಾರ್ಥನೆಗಳಾದವು. ಎರಡು ನಿಮಿಷದ ಮೌನಾನಂತರ ಶ್ರೀ ಕಾಶೀಬೇನರು ಬಾಪೂವಿನ ಮೆಚ್ಚಿನ "ವೈಷ್ಣವ ಜನತೋ ತೇನೇ ಕಹಿಯೇ" ಗೀತವನ್ನೂ ಪ್ರಭಾಕರಜೀಯು "ರಾಮನಾಮ"ವನ್ನೂ ಹೇಳಿದರು. ಆ ಮೇಲೆ ರಾಜಾಜಿ 'ಬಾ' ಅವರ ಗುಡಿಸಲನ್ನು ಸಂದರ್ಶಿಸಿದರು. ತರುವಾಯ, ತಾಲೀಮೀ ಸಂಘ, ಕಸ್ತೂರಬಾ ಆಸ್ಪತ್ರೆ; ಖಾದಿ ವಿದ್ಯಾಲಯ ಹೀಗೆ ಒಂದಾದ ಮೇಲೆ ಒಂದು ಸಂಸ್ಥೆಯನ್ನು ನೋಡಿದರು. ತಾಲೀಮೀ ಸಂಘದ ವಿದ್ಯಾರ್ಥಿಗಳನ್ನೂ ನಿದಸ್ಯರನ್ನೂ ವರ್ಧಾ ಮತ್ತು ಸೇವಾಗ್ರಾಮದ ಕಾರ್ಯಕರ್ತರನ್ನೂ ಕುರಿತು ಖಾದೀ ವಿದ್ಯಾಲಯದ ಮಹಾದೇವಭವನದಲ್ಲಿ ಭಾಷಣ ಮಾಡಿದರು. ಆಗ ೩-೪ ನೂರು ಜನ ನೆರೆದಿದ್ದರು.

ರಾಜಾಜಿ ಹೀಗೆ ಹೇಳಿದರು.

ನಿಮ್ಮನ್ನೆಲ್ಲ ಕಾಣಲು ತುಂಬ ಆನಂದವಾಗುವದೆಂದು ಬಂದ ಅತಿಥಿ ಹೇಳುವದು ವಾಡಿಕೆಯಾಗಿದೆ. ನಾನು ಈಗ ಹೀಗೆ ಹೇಗೆ ಹೇಳಲಿ? ನಿಮ್ಮನ್ನು ಕಂಡು ನನಗೆ ಆನಂದವೇನೋ ಆಗಿದೆ. ಆದರೆ ಗಾಂಧೀಜಿಯ ವಾಸಸ್ಥಾನವನ್ನು ಕಂಡು ಅದನ್ನು ದುಃಖವೆನಿಸಿದೆ. ಆಂಧ್ರ ಏಧಿಯ ಜೊತೆಜೊತೆಗೆ ವಿವಾಹ ಮಹೋತ್ಸವವನ್ನು ನೆರವೇರಿಸುವದೆಲ್ಲಿಯಾದರೂ ಉಂಟೆ? ಆದರೆ ಜಾಸ್ತಿಗೆ ಬಂಧವು ಹೆಚ್ಚು ಕಡಿಮೆ ಅಂತಹ ಸಂದರ್ಭವಾಗಿಯೇ ಕಾಣುತ್ತದೆ. ಎಂತಹ ದೈವದುರ್ವಿಪಾಕ ಹಳು ಬಂದೊದಗಿದರೂ ಪರಸ್ಪರ ಸಹಕಾರ ಸಹಾನುಭೂತಿಯಿಂದ ಅವನ್ನು ನೀಗಿ ನಿಲ್ಲಬೇಕು. ಈ ಪವಿತ್ರ ಸ್ಥಳದಲ್ಲಿ ಚಿಕ್ಕವರಾಗಿದ್ದವರೆಲ್ಲ ಅತ್ಯಾನಂದ ಅವರ ಕಾರ್ಯರಂಗವಾಗಿದೆ. ನಿಶ್ಚಲ ಕೆಲಸಗಳಲ್ಲಿ ಹೆಚ್ಚು ಹೆಚ್ಚು ಮನಸ್ಸು ತಗಿಸಿ ತಮ್ಮ ದುಃಖವನ್ನು ಮರೆಯಬಹುದು. ಕಾರ್ಯನಿಮಗ್ನತೆಯ ಮೂಲಕ ಉಳಿದದ್ದೆಲ್ಲ ಮರೆಯಬಹುದಾಗಿದೆ. ಆದರೆ ಚಿಕ್ಕವರಲ್ಲಿದ ನನ್ನಂತಹರಿಗೆ ನಮ್ಮ ದುಃಖಗಳನ್ನು ಮರೆವುದು ಕಠಿನವೇ ಎಂದು ಹೇಳಬಲ್ಲೆ.

ನಿಮ್ಮೊಳಗಿನ ಅಸಾಮಾನ್ಯ ಮನುಷ್ಯನೊಬ್ಬನನ್ನು ರಾಷ್ಟ್ರದ ಅತ್ಯುಚ್ಚ ಅಧಿಕಾರಸ್ಥಾನ ವೆನಿಸಿದ ಗವರ್ನರ ಜನರಲ ಪದವಿಗೆ ನಿಯಮಿಸಿದ್ದು ಒಳ್ಳೆ ಆನಂದದ ಸಂಗತಿಯೇ ಸರಿ. ನನ್ನನ್ನು ಗವರ್ನರ ಜನರಲನನ್ನಾಗಿ ನಿಯಮಿಸಿದ್ದರಲ್ಲಿ ಈ ಆನಂದವಿಲ್ಲ. ಆದರೆ ಜನಸಾಮಾನ್ಯರಲ್ಲಿ ಒಬ್ಬನನ್ನು ಈ ಪದದಲ್ಲಿರಿಸಲಾಗಿದೆ ಎಂಬ ಮಾತು ಮಹತ್ವದ್ದು. ನನಗೆ ಗೌರವ ಸಲ್ಲಿಸುವಾಗ ಜನಕ್ಕೆ ಈ ಅಂಶವೇ ಸಂತೃಪ್ತಿಯನ್ನೂ ಹೆಮ್ಮೆಯನ್ನೂ ಉಂಟುಮಾಡುತ್ತದೆ.

ಈ ಚಟುವಟಿಕೆಗಳೆಲ್ಲ ಆಗಿರುವದ ಆ ಮೂಲ ಕಾರಣ ಪುರುಷನಿಂದ ಇಲ್ಲಿಯ ಕಾರ್ಯಕರ್ತರೆಲ್ಲ ತಮ್ಮ ಬಹುಮುಖ ಕಾರ್ಯಕ್ಕಾಗಿ ಸ್ಫೂರ್ತಿಯನ್ನು ಪಡೆಯಬೇಕು. ಬಾಪೂ ತಮ್ಮ ತರುವಾಯ ಅತ್ಯಂತ ನಿಷ್ಠರಾದ ಮತ್ತು ಸೇವಾನಿರತರಾದ ಕಾರ್ಯಕರ್ತರನ್ನು ಬಿಟ್ಟು ಹೋಗಿದ್ದಾರೆ. ಅವರು ಬಾಪೂ ಬದುಕಿದ್ದಾಗಲೂ ನಿಷ್ಠೆಯಿಂದ ಸೇವೆಸಲ್ಲಿಸಿದರು. ಅವರ ನಂತರ ಇನ್ನು ನಿಮಗಾಗಿ ದುಡಿಯುವರು. ನೀವೆಲ್ಲ ಅವರ ಧರ್ಮದರ್ಶಿಗಳಾಗಿ ಅವರಿಗೆ ದಾರಿದೋರಬೇಕಲ್ಲದೆ ರಕ್ಷಣೆಯನ್ನೂ ನೀಡಬೇಕು. ಆದರೆ ಈ ಕಾರ್ಯಕರ್ತರಿಗೆ ದೇವರಲ್ಲಿ ನಂಬುಗೆಯಿದ್ದರೆ ಧರ್ಮದರ್ಶಿಗಳ ಅಗತ್ಯವೇ ಇಲ್ಲ.

ವಾಸನೆಗಳನ್ನೆಲ್ಲ ಜಯಿಸಿ ಅನೂನವಾದ ನಿರ್ಲಿಪ್ತತೆಯನ್ನು ಸಾಧಿಸಿ ಪರಿಪೂರ್ಣತೆಯನ್ನು ಹೊಂದಬೇಕೆಂದು ಗಾಂಧೀಜಿ ಹೆಣಗಿದರು. ಆದರೆ ಅವರಿಗೆ ನಿರೀಕ್ಷಿತ ಅನೂನ ನಿರ್ಲಿಪ್ತತೆಯು ಸಾಧಿಸಲಿಲ್ಲ. ಅವರ ದೇಶ ಬಾಂಧವರ ಸರ್ವಾಂಗೀಣ ಉನ್ನತಿಯನ್ನೂ ಕಲ್ಯಾಣವನ್ನೂ ಕಾಣಬೇಕೆಂಬ ಅವರ ಆಶೆಯು ಕೊನೆತನಕ ಈಡೇರಲೇ ಇಲ್ಲ. ಇದು ಅವರ ಅಪರಿಪೂರ್ಣತೆಯೆಂದೇ ಪರಿಗಣಿಸಬಹುದು. ತನ್ನ ವಾಸನೆಗಳನ್ನು ಪೂರೈಸಿಕೊಳ್ಳದೆ ಪಂಚತ್ವ ಹೊಂದಿದವನ ಆತ್ಮವು, ದೇಹದ ಏಳಿಗೆಗಾಗಿಯೂ ಜನಹಿತಕ್ಕಾಗಿಯೂ ಇನ್ನೂ ಬಗೆ ಬಗೆಯ ಆದರ್ಶಗಳನ್ನು ಸಾಧಿಸಲಿಕ್ಕಾಗಿಯೂ ತಾನು ಸ್ಥಾಪಿಸಿದ ಸಂಸ್ಥೆಗಳ ಸುತ್ತ ಸುಳಿದಾಡುತ್ತಿರುವದೆಂದು ಅವರು ನಂಬಿದ್ದರು. ಅಂದರೆ ಗಾಂಧೀಜಿಯ ಆತ್ಮವು ಚರಖಾಗಳ, ಮಗ್ಗಗಳ, ಆಸ್ಪತ್ರೆಗಳ ಸುತ್ತು ಅಲ್ಲಿಯ ರೋಗಿಗಳ ಸುತ್ತ ಸದಾ ಸುಳಿದಾಡುತ್ತಿರಲಿಕ್ಕೆ ಬೇಕು. ತಮ್ಮ ಆದರ್ಶ ಸಾಧನೆಗಾಗಿ ಮಾಡಿದ ಪ್ರತಿಯೊಂದು ಚಟುವಟಿಕೆಗೂ ಸಂತೋಷ ಪಡುತ್ತ, ಈ ಧ್ಯೇಯಕ್ಕೆ ವಿಘಾತಕವಾಗಿಯೂ ಕಲಂಕಪ್ರಾಯವಾಗಿಯೂ ಯಾರಾದರೂ ವರ್ತಿಸಿದರೆ ಅದಕ್ಕಾಗಿ ವಿಚಲಿತಗೊಂಡು ಅಸಮಾಧಾನ ಪಡುತ್ತ ಅವುಗಳ ಸುತ್ತಲೂ ಸುಳಿಯುತ್ತಿರಬಹುದು. ಕಾರ್ಯಕರ್ತರ ಕರ್ತವ್ಯಚ್ಯುತಿಯಿಂದ ಅವರ ಆತ್ಮಕ್ಕೆ ತಳಮಳವಾಗಿ ಅವರ ಶಾಂತಿಗೆ ಭಂಗ ಬರುವದು. ಮತ್ತು ಒಳ್ಳೆಯ ಕೆಲಸಗಳಿಂದಲೂ ಸದ್ವರ್ತನೆಗಳಿಂದಲೂ ಅವರ ಆತ್ಮವು ಸುಖಿಸುವದು. ಅವರು ಬದುಕಿದ್ದಾಗಿನಂತೆಯೇ ಅವರ ಸಂಸ್ಥೆಗಳನ್ನೆಲ್ಲ ಪರಿಶುದ್ಧವಾಗಿಯೂ ಉಪಯುಕ್ತವಾಗಿಯೂ ಇರಿಸಿದ್ದಾದರೆ ಅವರಿಗೆ ಸಮಾಧಾನವನ್ನು ನೀಡಿದಂತಾಗುವದು. ತಮ್ಮ ಅನುಚಿತ ವಿಚಾರಗಳಿಂದಲೂ ಅಪವಿತ್ರ ಕೃತಿಗಳಿಂದಲೂ ಅವರ ಸಂಸ್ಥೆಗಳನ್ನು ಕೆಡಿಸಿದ್ದಾದರೆ ಕಾರ್ಯಕರ್ತರು ಗಾಂಧೀಜಿಯ ಆತ್ಮಕ್ಕೆ ಶಾಂತಿ ಸಮಾಧಾನಗಳನ್ನು ಕೊಡಬಲ್ಲರೆ? ಅವರ ಆತ್ಮಕ್ಕೆ ಶಾಂತಿ ಸಿಕ್ಕಲಿ ಎಂದು ಅವರು ಕೇವಲ ಪ್ರಾರ್ಥಿಸಿಕೊಂಡರೆ ಅದು ಅಪ್ರಯೋಜಕವೇ.

ಅವರು ಅವಸಾನಗೊಂಡು ಭಸ್ಮೀಭೂತರಾದ ಸ್ಥಳಕ್ಕಿಂತ ತಾವಿದ್ದಲ್ಲಿಯೇ ತಮ್ಮ ಆದರ್ಶಗಳನ್ನೆಲ್ಲ ಕೃತಿಗಿಳಿಸಿ ಸತತವೂ ದುಡಿದ ಹಾಗೂ ಅವರೇ ಸ್ಥಾಪಿಸಿದ ಈ ಸಂಸ್ಥೆಗಳು ಹೆಚ್ಚು ಮಹತ್ವದ ಸ್ಮಾರಕಗಳಾಗಿವೆ. ಗಾಂಧೀಜಿಯವರ ಈ ಕಾರ್ಯಕಲಾಪದ ಕೇಂದ್ರಗಳನ್ನು ಭಾರತೀಯರಷ್ಟೇ ಅಲ್ಲ, ಅಖಿಲ ವಿಶ್ವದ ಜನರೇ ನೋಡಲು ತವಕಿಸುತ್ತಾರೆ ಹಾಗೂ ಅವರು ಪ್ರಾರಂಭಿಸಿದ ಈ ಕೆಲಸಗಳೆಲ್ಲ ರಭಸದಿಂದ ಸಾಗಿರುವದನ್ನು ನೋಡಬಯಸುತ್ತಾರೆ. ಗಾಂಧೀಜಿ ವಾಸಿಸಿದ ಹಾಗೂ ಕೆಲಸ ಮಾಡಿದ ಸ್ಥಳಗಳನ್ನೂ ಸುತ್ತಾಡಿ ನೋಡಲು ಅವರು ಹಾತೊರೆಯುವರು. ಈ ಸಂಸ್ಥೆಗಳ ಪಾವಿತ್ರ್ಯವನ್ನು ಬಾಪೂ ತಮ್ಮ ಆದರ್ಶಕ್ಕನುಗುಣವಾಗಿ ಪ್ರೇಮಮಯ ಹಾಗೂ ಸತತೋದ್ಯೋಗದ ವಾತಾವರಣದಲ್ಲಿ ಇವು ಅಭಿವೃದ್ಧಿ ಹೊಂದುವಂತೆ ಇಲ್ಲಿಯ ಹುಡುಗರು ಹಿರಿಯರು ಸಕಲರೂ ಶಕ್ತಿಮೀರಿ ಹೆಣಗುವರೆಂದು ಗಾಂಧೀಜಿ ಆಶಿಸಿದ್ದರು.

ರಾಜಾಜಿಯು ನಡುಹೊತ್ತಿನ ತಮ್ಮ ಭೋಜನವನ್ನು ಆಶ್ರಮದಲ್ಲಿಯೇ ಮಾಡಿ ೧-೩೦ ಕ್ಕೆ ನಾಗಪುರಕ್ಕೆ ತೆರಳಿದರು.

ವರ್ಧಾ —ಕಿಶೋರಲಾಲ ಮಶ್ರುವಾಲಾ
೨೪-೮-೪೮

ನಿಜಾಮರ ಪ್ರತ್ಯುತ್ತರ

ತಮ್ಮ ಅಗಸ್ಟ ೩೧ ರ ಪತ್ರ ತಲುಪಿತು.

ಹೈದರಾಬಾದದ ಪ್ರಜೆಗಳ ವಿತ್ತ ಜೀವಿತಗಳ ಮತ್ತು ಸುರಕ್ಷಿತತೆಯ ಬಗ್ಗೆ ನಿಮಗೆ ವಿಪರೀತ ಕಲ್ಪನೆಯಾಗಿದೆ. ನೆರೆಹೊರೆಯ ಪ್ರಾಂತಗಳು ದಾಳಿಮಾಡುವದನ್ನು ನಿಲ್ಲಿಸಿದರೆ ಗಡಿ ಪ್ರದೇಶದಲ್ಲಿ ಪರಿಸ್ಥಿತಿಯು ಕೂಡಲೆ ಸುಧಾರಿಸುವದು. ಸರ್ ಮಿರ್ಝಾ ಇಸ್ಮಾಯಿಲರಿಗೆ ಈಗಿನ ಪರಿಸ್ಥಿತಿ ಏನೂ ಗೊತ್ತಿಲ್ಲ. ಅವರ ಸೂಚನೆಗಳಂತೆ ನಡೆದುಕೊಳ್ಳುವದು ತೀರ ಅವ್ಯವಹಾರ್ಯವಾಗಿದೆ.

ನನ್ನ ಪ್ರಜೆಗಳ ರಕ್ಷಣೆಗೆ ನನ್ನ ಸೈನ್ಯವು ಸಮರ್ಥವಿದ್ದ ಕಾರಣ ಹಾಗೂ ಬಂದ ಪರಿಸ್ಥಿತಿಯನ್ನು ಎದುರಿಸಲು ಸುಸಜ್ಜಿತವಾಗಿದ್ದ ಕಾರಣ ಹಿಂದೀ ಸೈನ್ಯವನ್ನು ನನ್ನ ಸಂಸ್ಥಾನದಲ್ಲಿ ತಂದಿಡುವ ಅವಶ್ಯಕತೆಯಿಲ್ಲ.

ಹೈದರಾಬಾದ ಸರಕಾರವನ್ನು ಬದಿಗೊತ್ತಿ ಅಧಿಕಾರವನ್ನೆಲ್ಲ ನಾನೇ ವಹಿಸಿಕೊಳ್ಳಬೇಕೆಂದು ನೀವು ಸೂಚಿಸಿದ್ದೀರಿ. ನನ್ನ ಸರಕಾರ ಬದಿಗೊತ್ತಿ ನಾನು ಏನನ್ನೂ ಮಾಡಲಾರೆ. ಗೌರವಯುತ ಒಪ್ಪಂದಕ್ಕೆ ನಾನು ಉತ್ಸುಕನಾಗಿರುವೆ. ಹೈದರಾಬಾದ ಮತ್ತು ನೆರೆಯ ಪ್ರಾಂತದಲ್ಲಿ ಶಾಂತಿ ಸ್ಥಾಪಿಸಲು ನಾನು ನಿಮ್ಮ ಮಧ್ಯಸ್ಥಿಕೆಯನ್ನು ಕೋರುತ್ತೇನೆ.

ಭಾರತದಲ್ಲಿ ಪಾರಿಭಾಷಿಕ ಶಬ್ದಗಳು

(೯ ನೆಯ ಪುಟದಿಂದ)

ಭಾಷಿಕ ಕೋಶವನ್ನು ರಚಿಸಿಬಿಟ್ಟಿದ್ದರು. ಅದನ್ನು ಬರೋಡದ ಕಲಾಭವನದಲ್ಲಿ ಕೊಡುತ್ತಿದ್ದ ತಾಂತ್ರಿಕ ಶಿಕ್ಷಣ ಕ್ರಮದಲ್ಲಿ ಬಳಸುತ್ತಿದ್ದರು. ಅನೇಕ ಪಠ್ಯಪುಸ್ತಕಗಳು, ಆಧಾರ ಗ್ರಂಥಗಳು, ಕೋಶಗಳು, ಪೃಥಕ ಪಾರಿಭಾಷಿಕಗಳು ಮುಂತಾದವು ಆ ಧೋರಣೆಯೇ ರಚಿತವಾದವು. ಈಗ ಹೊಸದಾಗಿ ಅಂಥ ಪ್ರಯತ್ನದಲ್ಲಿ ಕೈಹಾಕುವವರಿಗೆ ಅವು ಮಾರ್ಗದರ್ಶಿಗಳಾಗಬಲ್ಲವು. ಆದರೆ ಅಲ್ಲಾದರೂ ಇನ್ನು ಮೇಲೆ ಸಂಸ್ಕೃತವೊಂದನ್ನೇ ಅವಲಂಬಿಸಿ ಏರೋಪ್ಯ, ಪಾರಸೀಕ ಅರಬ್ಬೀ ಇಲ್ಲವೆ ಉರ್ದು ಮೂಲಗಳನ್ನು ಪದಗಳನ್ನು ಉಪೇಕ್ಷಿಸಲು ಬರದು. ಹೀಗಿರೆ ಸರಕಾರ ನಿಯಮಿಸಿದ ತತ್ಸಂಬಂಧಿಯಾದ ಸಮಿತಿಯಾದರೂ ಈ ಅಂಶವನ್ನು ಕಡೆಗಣಿಸಿದರೆ ಅದರ ಪ್ರಯತ್ನ ವ್ಯರ್ಥವಾಗುವದು ಖಂಡಿತ.

ಮುಖ್ಯವಾಗಿ ಯಾವ ಪಾರಿಭಾಷಿಕ ಕೋಶಕ್ಕೇ ಆಗಲಿ ಈ ಕೆಳಗಿನ ಅಂಶಗಳು ಅವಶ್ಯಕ:

೧. ಅಂತಾರಾಷ್ಟ್ರೀಯ ಮತ್ತು ಅಂತಃಪ್ರಾಂತೀಯ ವಿಭಾಗ--

(೧) ಇವು ಎಲ್ಲದಕ್ಕೂ ತಳಹದಿ. ರಾಸಾಯನಿಕ ದ್ರವ್ಯಗಳು (ಅಂತಾರಾಷ್ಟ್ರೀಯ ಅಣು ಶಕ್ತಿ ಕೋಲಾಹಲದ ಮಾಪುಗಳೊಡನೆ) ಅವುಗಳ ರಚಕ ಭಾಗಗಳು ಮತ್ತು ಸಂಕೇತಗಳು,

(೨) ಸಸ್ಯ ಮತ್ತು ಪ್ರಾಣಿ ಶಾಸ್ತ್ರದಲ್ಲಿ ವರ್ಗ, ಕ್ರಮ, ಮೂಲ ಜಾತಿ ಮತ್ತು ಜನ್ಯಗಳ ಹೆಸರುಗಳು,

(೩) ಲಾಗ್, ಸೈನ್, ಕಾಸ್, ಟ್ಯಾನ್ ಮುಂತಾದ ಗಣಿತಸಂಕೇತಗಳು,

(೪) ಸೆಕೆಂಡ್, ಇಂಚ್, ಫುಟ್, ಸೆಂಟಿಮೀಟರ್ (ಹೆಚ್ಚಿನ ಮಾಪುಗಳೆಂದು ತೊಲೆ ಮತ್ತು ಸೇರುಗಳನ್ನು ತೆಗೆದುಕೊಂಡ ಕಾಲದಲ್ಲಿ ಹೊರತು) ಮುಂತಾದ ಅಥವಾ ಇಲೆಕ್ಟ್ರಾನ್, ನ್ಯೂಟ್ರಾನ್, ಓಹ್ಮ್, ಆ್ಯಂಪಿಯರ್ ಮುಂತಾದ ದ್ರವ್ಯ ಅಥವಾ ಶಕ್ತಿ ಮಾನಗಳು,

೨ ಪ್ರಾದೇಶಿಕ ವಿಭಾಗ—

(೧) ಮೀಟರ್, ಗುರುತ್ವಾಕರ್ಷಣ ಶಕ್ತಿ, ಕಾವು, ಸಾಂದ್ರತೆ, ಚಲನವೇಗ ಮುಂತಾದ ಭಾವ ಮತ್ತು ಗುಣಗಳನ್ನು ಹೇಳುವ ಶಬ್ದಗಳು,

(೨) ಪೆಡಲ್, ಸ್ಪೋನ್, ಬರ್ನರ್ ಮುಂತಾದ ಅಂಕಿತನಾಮವಿಲ್ಲದ ಸಾಧನ, ಯಂತ್ರಾದಿಗಳನ್ನು ಹೆಸರಿಸುವ ಶಬ್ದಗಳು,

(೩) ವಿಧಾನ, ಘಟನೆ, ರಾಸಾಯನಿಕ ಮತ್ತು ಭೌತಶಾಸ್ತ್ರೀಯ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವ ಶಬ್ದಗಳು.

ಹಿಂದುಸ್ಥಾನಿ ಅಥವಾ ಉರ್ದುವಿನ ಅಡಿಪಾಯದ ಮೇಲೆ ಹಿಂದೀ ಸರ್ಕಾರವು ಸರಕಾರೀ ಭಾಷೆಯೊಂದನ್ನು ರೂಪಿಸಿದರೆ ಮೇಲಿನ ಮಾರ್ಗದಲ್ಲಿ ಮೌಲಿಕ ವೈಜ್ಞಾನಿಕ ಪರಿಭಾಷೆಯನ್ನು ಸಿದ್ಧಗೊಳಿಸಬೇಕಾಗುವದು. ಆದರೆ ಈ ಮೌಲಿಕ ಪರಿಭಾಷೆಯನ್ನು ಮಿಕ್ಕ ಪ್ರಾಂತೀಯ ಇಲ್ಲವೆ ಪ್ರಾದೇಶಿಕ ಭಾಷೆಗಳ ಮೇಲೆ ಒತ್ತಾಯದಿಂದ ಹೊರಿಸಬಾರದು. ಅವಕ್ಕೆ ಮೇಲೆ ಹೇಳಿದ ೨ ನೆಯ ಭಾಗದಲ್ಲಿರುವ ವರ್ಗೀಕೃತ ವಿಷಯಗಳಲ್ಲಿ ತಮ್ಮದೇ ಆದ ಪ್ರತಿಭೆಯನ್ನು ಬೆಳೆಸಿಕೊಳ್ಳಲು ಸಾಕಷ್ಟು ಅವಕಾಶವನ್ನು ಕೊಡಬೇಕು.

ರೂಪರಂಗ

ಕಲ್ಪನಾ

ಜಗತ್ಪ್ರಸಿದ್ಧ ನರ್ತಕಶ್ರೇಷ್ಠರಾದ ಶ್ರೀ. ಉದಯ ಶಂಕರರ "ಕಲ್ಪನಾ" ಎಂಬ ಕಲಾಮಯ ಚಲಚ್ಚಿತ್ರವು ಈಗ ಹುಬ್ಬಳ್ಳಿಯ 'ರೂಪಂ' ರಂಗದಲ್ಲಿ ಪ್ರದರ್ಶಿಸಲಾಗುತ್ತಿದೆ. ಇದರಲ್ಲಿ ಭಾರತೀಯ ಪುರಾತನ ಸಂಸ್ಕೃತಿಯನ್ನು ವಿವಿಧ ನೃತ್ಯಗಳ ಮೂಲಕ ಪ್ರಚಾರಪಡಿಸುವದೇ ಮುಖ್ಯವಾಗಿದೆ.

ಇದರ ಕಥೆ ಬಹಳ ಲಘುವಾದುದು. ಬರಗಾಲಕ್ಕೆ ಬಲಿಯಾದ ಹಳ್ಳಿಯೊಂದರ ಜನರ ಸೇವೆಯನ್ನು ಕಥಾನಾಯಕನಾದ ಉದಯನನು ತನ್ನ ಗೆಳೆಯರೊಡನೆ ಮಾಡುತ್ತಿದ್ದಾಗ ಅವನ ಜೀವನೇತಿಹಾಸವನ್ನು ಕಾಹಿಲೆಯಲ್ಲಿ ಮಲಗಿದ ಒಬ್ಬ ಗೆಳೆಯನಾದ ನೂರನು ಇತರ ಗೆಳೆಯರಿಗೆ ಹೇಳುತ್ತಾನೆ.

ಉದಯನನೊಬ್ಬ ಜಮೀನುದಾರರ ಮಗ. ಅವನಿಗೆ ಉಳಿದ ವಿದ್ಯೆ ರುಚಿಸಲಿಲ್ಲ. ಚಿತ್ರಕಲೆಯೊಂದರಲ್ಲಿ ನಿಷ್ಣಾತನೆನಿಸಿದ. ಅವನಿಗೆ ಸುತ್ತಲಿನವರ ಸಹಾನುಭೂತಿ ಸಿಗಲಿಲ್ಲ. ಬಾಲ್ಯದಲ್ಲಿ ನೆರೆಮನೆಯ ಉಮೆಯೊಬ್ಬಳೇ ಗೆಳತಿಯೂ ಸಹಕಾರಿಯೂ ಆಗಿದ್ದಳು. ಅವಳು ಆಗಲೇ ಉದಯನನ ರೂಪಗುಣಗಳಿಗೆ ಮೆಚ್ಚಿ ಮನಸೋತ ಹುಡುಗಿ. ಒಮ್ಮೆ ಒಂದು ಸಣ್ಣ ಹೊಡೆದಾಟವಾಗಿ ಅವರಿಬ್ಬರೂ ಕೆಲಕಾಲ ದೂರವಾಗುತ್ತಾರೆ.

ಉಚ್ಚ ಶಿಕ್ಷಣಕ್ಕಾಗಿ ಉದಯನ ಕಾಶಿಗೆ ಹೋಗುತ್ತಾನೆ. ಕಾಶಿಯಲ್ಲಿ ಅವನ ಮನಸ್ಸು ನಾಟ್ಯದತ್ತ ಹರಿಯಿತು. ನೂರ ರಮೇಶ ಉದಯನ ಮತ್ತು ಪ್ರತಿಷ್ಠಿತ ಮನೆತನದ ಮೂರು ಕನ್ಯೆಯರು ಸೇರಿ ಒಂದು ನಾಟ್ಯಮಂಡಲಿಯನ್ನು ಸ್ಥಾಪಿಸುತ್ತಾರೆ. ಆಗ ಒಮ್ಮೆ ಅವನಿಗೊಂದು ಕನಸು ಬೀಳುತ್ತದೆ. ಕನಸಿನಲ್ಲಿ ಕಂಡ ಬಾಲ್ಯ ಸ್ನೇಹಿತೆ ಉಮೆಯ ಭೆಟ್ಟಿ ಮರುದಿನವೇ ಆಗುತ್ತದೆ. ಅವಳು [illegible] ಪ್ಪನ ಮಗಳು. ಅವಳೂ ನಾಟ್ಯ ಮಂಡಲಿಯಲ್ಲಿ ಸೇರುತ್ತಾಳೆ.

ನೂರನು ಉದಯನನ ಬಾಲ್ಯದ ಇತಿಹಾಸವನ್ನು ಹೇಳುತ್ತಿದ್ದಾಗ ಉದಯನ [illegible] ಕರಲು ಹೋದ. ಅಲ್ಲಿ ಮಳೆ ಗಾಳಿ ಗುಡುಗು ಸುರಿಮಳೆಗಳಲ್ಲಿ ಸಿಕ್ಕಿದ ಕಾಮಿನಿ ಎಂಬವಳು ಅವನನ್ನು ಬೆನ್ನುಹತ್ತಿದ ಬೇತಾಳದಂತೆ ಬೆನ್ನು ಹತ್ತಿ ಬರುವಳು. ನೂರ ಮಡಿದ. [illegible] ಉದಯನನ ಅಂದಚೆಂದ, ಆಳುಬಲ, ರಸಿಕತೆ, ತೇಜಸ್ಸುಗಳಿಗೆ ಮರುಳಾಗಿ ಅವನನ್ನು ಪ್ರೀತಿಸುತ್ತಾಳೆ. ಅವಳು ಶ್ರೀಮಂತಳು. ಅದರಿಂದ ಇವನ ನಾಟ್ಯಮಂಡಲಿಗೆ ಬೇಕಾದಷ್ಟು ಧನಸಹಾಯ ಪೂರೈಸುತ್ತಾಳೆ. ಉಮೆ ಉದಯನರ ಪರಸ್ಪರ ಪ್ರೇಮದಲ್ಲಿ ಮತ್ಸರತಾಳಿ ಅವಳು ಉಮೆಯನ್ನು ದುಃಖಕ್ಕೆ ಗುರಿಪಡಿಸಿ ಉದಯನನಿಂದ ದೂರ ಪಡಿಸಲು ನಾನಾ ಪ್ರಯತ್ನ ಮಾಡುತ್ತಾಳೆ. ಅಷ್ಟು ಹೊತ್ತಿಗೆ ಉದಯನನ ನಾಟ್ಯಮಂಡಲಿ ಭಾರತದ ಮುಖ್ಯ ನಗರಗಳಲ್ಲಿ ಸಂಚರಿಸಹೊರಟು ಅನೇಕ ಕಡೆ ನೃತ್ಯ ಪ್ರದರ್ಶನ ಮಾಡುತ್ತದೆ. ಮುಂಬಯಿಯಲ್ಲಿ ಉಮೆ ಉದಯನರ ಪುನರ್ಮಿಲನವಾಗುತ್ತದೆ. ಪುನಃ ಉಮಾ ಕಾಮಿನಿಯರ ಮತ್ಸರ ಪ್ರಾರಂಭವಾಗಿ ಉದಯನನು ಬಹಳವಾದ ಮಾನಸಿಕ ಹಿಂಸೆಗೆ ಗುರಿಯಾಗುತ್ತಾನೆ. ಸ್ಪಷ್ಟವಾಗಿ ಅವನು ಉಮೆಯೇ ತನ್ನವಳೆಂದು ತಿಳಿದಿರುವದು ಇಬ್ಬರು ಹೆಂಗಸರಿಗೂ ಗೊತ್ತಾದರೂ ಕಾಮಿನಿಯ ಕಾಟ ತಪ್ಪಲೇ ಇಲ್ಲ.

ಒಂದು ಕಲಾಕೇಂದ್ರವನ್ನು ಸ್ಥಾಪಿಸಲು ಉದಯನ ಪ್ರಯತ್ನಿಸಹೊರಟಾಗ ಕಾಮಿನಿ ತನ್ನ ಶ್ರೀಮಂತರ ಸಭೆಯೊಂದನ್ನು ಧನಸಹಾಯಕ್ಕಾಗಿ ಕೂಡಿಸಿದಳು. ಆ ಸಭೆಯಲ್ಲಿ ಧನಿಕ ಸ್ತ್ರೀ-ಪುರುಷರ ಕರುಣರಹಿತವೂ ಅನೀತಿಕರವೂ ಸ್ವಾರ್ಥಪರವೂ ಆದ ವಿಲಾಸಭೋಗಗಳನ್ನು ಕಂಡು ಸಿಟ್ಟಿನಿಂದ ಉದಯನ ಅವರನ್ನು ಎದುರಾ ಎದುರು ಬೈದುಬಿಡುತ್ತಾನೆ. ಆದರೂ ಒಬ್ಬ ಧನಿಕನು ೫೦ ಲಕ್ಷ ಕೊಡುತ್ತಾನೆ. ಶಿಕ್ಷಣ ಕೇಂದ್ರ ಸ್ಥಾಪಿಸಲ್ಪಡುತ್ತದೆ. ಅದರಲ್ಲಿ ನ್ಯಾಯವಾದ ನಾಗರಿಕ ಜೀವನ ನಡೆಸಲು ಅಗತ್ಯವಾದ ಬುದ್ಧಿ ಭಾವನೆಗಳನ್ನು ನೃತ್ಯದ ಮೂಲಕ ಬೆಳೆಸುವ ಶಿಕ್ಷಣ ಕೊಡಲಾಗುತ್ತದೆ. ಅಲ್ಲಿಯೂ ಕಾಮಿನಿಯ ಕಾಮವು ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡನು- ಎಂಬಂತೆ ಉದಯನ ಉಮೆಯರ ಪ್ರೇಮವನ್ನು ವಿಘಟಿಸಲು ಬೆನ್ನಟ್ಟಿ ಬರುತ್ತದೆ.

ಕಲಾಕೇಂದ್ರಕ್ಕೆ ಧನಸಹಾಯಾರ್ಥ ಒಂದು ವಸಂತೋತ್ಸವ ಪ್ರಾರಂಭಿಸಲ್ಪಡುತ್ತದೆ. ಉತ್ಸವದ ನೃತ್ಯಪ್ರದರ್ಶನದಲ್ಲಿ ಭಾರತದ ಎಲ್ಲ ಬಗೆಯ ನೃತ್ಯಗಳನ್ನೂ ತೋರಿಸುತ್ತಾರೆ. ಅದರಿಂದ ಯಥೇಷ್ಟ ಹಣ ಸಿಗುತ್ತದೆ. ಆದರೆ ಉತ್ಸವದ ನಡುವೆ ಉದಯನ ಮೂರ್ಛಿತನಾಗಿ ಬಿದ್ದುಬಿಡುತ್ತಾನೆ ಮೂರ್ಛೆಯಲ್ಲೇ ಅವನಿಗೊಂದು ಅಲೌಕಿಕ ದೃಶ್ಯ ಗೋಚರವಾಗುವದು. ಅನಂತರ ಅವನು ಒಂದು ನಿರ್ಧಾರಕ್ಕೆ ಬಂದು ಉಮೆಗೆ ತನ್ನ ಪ್ರೀತಿಯನ್ನು ತಿಳಿಸುತ್ತಾನೆ. ಅವಳು ಕೂಡಲೆ ಒಪ್ಪಿಗೆಯನ್ನು ತಿಳಿಸಲು ಸಂಕೋಚಪಟ್ಟುಕೊಂಡು ಸುಮ್ಮನಿದ್ದಳು. ಉತ್ಸವದ ಕಾರ್ಯಕ್ರಮಗಳ ದೆಸೆಯಿಂದ ಅವನಿಗೂ ಅವಳಿಗೂ ಮತ್ತೆ ಬೇಗ ಭೆಟ್ಟಿಯಾಗಲಿಲ್ಲ. ವಿವಿಧ ನೃತ್ಯಗಳು ನಡೆಯುತ್ತಿರುವಾಗ ಉದಯನನ ಮನಸ್ಸು ಉದ್ವಿಗ್ನವಾಗಿ ಗಲಭೆಯೆದ್ದಾಗ ಕಾಮಿನಿ ಆತ್ಮಹತ್ಯ ಮಾಡಿಕೊಳ್ಳುತ್ತಾಳೆ. ಉದಯನ ಹೊರಬಿದ್ದು ಬೀದಿಯಲ್ಲಿ ನಿಂತು "ನನ್ನ ಕಲ್ಪನೆ ನಿಜವಾದೀತೇ" ಎಂದು ರೋದಿಸುವಲ್ಲಿಗೆ ಕಥೆ ಮುಗಿಯುತ್ತದೆ.

ಉದಯನನೊಬ್ಬ [illegible], ಅವನ ವ್ಯಕ್ತಿತ್ವದ ಸೌಂದರ್ಯ, ಕಲ್ಪನೆಯ ದೂರದರ್ಶಿತ್ವ ಅಪಾರವಾದುದು. - ಆ ಕಲ್ಪನೆಯ ಅನೇಕ ಅಂಶಗಳನ್ನು ನೃತ್ಯದ ಮೂಲಕ ಹೊರಗೆಡಹಲಾಗಿದೆ. ಇಂದಿನ ಆಭಾಸಿಕವೆನಿಸುವ ನಾಗರಿಕ ನಡತೆ, ಸ್ತ್ರೀಯರು ನೃತ್ಯಗಳಲ್ಲಿ ಮಾಡುವ ಅನಾಗರಿಕವಾದ ಕಾಮಪ್ರಚೋದನ, ವಿದ್ಯಾಭ್ಯಾಸದ ಅಪ್ರಯೋಜಕತೆ, ಬಂಡವಾಲಿಗರು ಹಿಡಿದ ಶೋಷಣವೃತ್ತಿ, ಡಂಭಾಚಾರ, ಯಾಂತ್ರಿಕತೆ ಇತ್ಯಾದಿಗಳನ್ನು ಕಠೋರವಾಗಿ ಕಣ್ಣೆದುರು ನಿಲ್ಲುವಂತೆ ನರ್ತಿಸಿ ತೋರಿಸಲಾಗಿದೆ. ಶಿವಶಕ್ತಿಯರ ಮತ್ತು ಪುರುಷಪ್ರಕೃತಿಗಳ ಉದಾತ್ತಕಲ್ಪನೆಯನ್ನು ಎಡಿಸುವ ನೃತ್ಯಗಳು ಅದ್ಭುತವೂ ಚಿತ್ತಸುಂದರವೂ ಎನಿಸಿವೆ. ಆದದರಿಂದಲೇ ಪ್ರೇಕ್ಷಕರು ಕಿಕ್ಕಿರಿದು ನೋಡಹೋಗುತ್ತಿದ್ದಾರೆ.

ಪ್ರತಿಯೊಬ್ಬ ರಸಿಕನೂ ಕಲಾಪ್ರೇಮಿಯೂ ಇಂಥ ಸುಂದರ ಚಿತ್ರವನ್ನು ನೋಡುವ ಸಂದರ್ಭವನ್ನು ಕಳೆದುಕೊಳ್ಳಬಾರದು. ಇಲ್ಲಿ ಕಥೆಗಿಂತ ಕಥಾನಾಯಕನ ಕಲ್ಪನಾದರ್ಶನಗಳು ಮತ್ತು ಅವುಗಳನ್ನು ನೃತ್ಯದ್ವಾರಾ ಪ್ರಕಾಶನ ಪಡಿಸುವದು ಇವೇ ಮುಖ್ಯ.

ಇವರಲ್ಲಿ ಉಪದಿಗ್ದರ್ಶಕರೂ ಸಂಗೀತ ನಿರ್ದೇಶಕರೂ ಆದ ವಿಷ್ಣುದಾಸ ಶಿರಾಲಿಯವರು ಕನ್ನಡಿಗರಿದ್ದು ಮೊದಲಿನಿಂದಲೂ ಉದಯಶಂಕರರ ಸಹಕಾರಿಗಳಾಗಿ ಇರುತ್ತಬಂದಿದ್ದಾರೆಂಬುದು ಹೆಮ್ಮೆಯ ವಿಷಯ.

—"ಕರ್ಮವೀರದ" ಪ್ರತಿನಿಧಿಯಿಂದ

[illegible]

... ಲಾಯಿತೆಂಬದನ್ನು ಸೂಚಿಸುವದು. ಪುಣ್ಯದಿನವು ವರ್ಷವರ್ಷವೂ ಆಚರಿಸಲ್ಪಡುತ್ತಿದ್ದರೂ ಅವರ ಅವಸಾನವು ದುಃಖಾಂತವಾದದ್ದೆಂದು ತಿಳಿಯಲಾಗುತ್ತದೆ. ಅಲ್ಲದೆ ಅನೇಕ ಮಹಾವಿಭೂತಿಗಳ ಪುಣ್ಯದಿನವೇ ತಿಳಿದುಬಂದಿಲ್ಲವೆಂಬುದು ಸರ್ವವಿದಿತ ಸಂಗತಿ.

ಸಾಮಾನ್ಯರ ಮಾತು ತದ್ವಿರುದ್ಧವಾಗಿದೆ. [illegible] ತಮ್ಮ ಮಕ್ಕಳ ಹುಟ್ಟಿದ ದಿನವನ್ನೂ ಮದುವೆಯ ದಿನವನ್ನೂ ಆಚರಿಸುತ್ತಾರೆ. [illegible] ಜನರಿಗೆ ಈ ಘಟನೆಗಳ ಸ್ಮರಣೆಯೇ ಇರುವದಿಲ್ಲವೆಂದರೂ ಸಲ್ಲುವದು. ತಮ್ಮ ಮನೆತನದಲ್ಲಿ ಹುಟ್ಟುಹಬ್ಬವನ್ನು ಆಚರಿಸುವ ಪರಿಪಾಠವೇ ಇರಲಿಲ್ಲವೆಂಬುದಾಗಿ ಗಾಂಧೀಜಿ ತಾವೇ ತಮ್ಮ ಬಗ್ಗೆ ಬರೆದಿದ್ದಾರೆ. ಶ್ರೀ. ಕಸ್ತೂರಬಾ ಅವರ ಜನ್ಮದಿನವನ್ನು ಹುಡುಕಿ ತೆಗೆಯುವದು ಈಗಲೂ ಒಂದು ಪರಿಶೋಧನೆಯ ವಿಷಯವಾಗಿದೆ. ಸರದಾರ ವಲ್ಲಭಭಾಯಿ ಪಟೇಲರ ಜನ್ಮದಿನವಾವುದೆಂಬುದನ್ನು ಅವರ ಶಾಲೆಯ ರಜಿಸ್ಟರ ಪುಸ್ತಕವನ್ನು ನೋಡಿಯೇ ತಿಳಿಯಬೇಕಾಯ್ತು. ಸ್ವತಃ ಸರದಾರರಿಗೆ ಹುಟ್ಟಿದ ದಿನದ ನೆನಪಿರಲಿಲ್ಲ. ಮಾನವಮಾತ್ರನ ಜನ್ಮವೇನು ಅಮೋಘ ಘಟನೆಯಲ್ಲವೆಂಬುದೇ ಇದಕ್ಕೆ ಕಾರಣ. ಈ ಅಮೋಘತೆಯು ಹುಟ್ಟಬಂದವನ ಮಹಾಕಾರ್ಯಗಳಿಂದಲೂ ಆದರ್ಶಜೀವನದಿಂದಲೂ ಪ್ರಸ್ಥಾಪಿತವಾಗಬೇಕಾಗುತ್ತದೆ. ಅವನ ಜೀವನವು ಅಮೋಘವಾದುದಾಗಿದ್ದಲ್ಲಿ ಜನರೇ ಅವನು ಅವತರಿಸಿದ ದಿನವನ್ನು ಹುಡುಕಿ ತೆಗೆಯುತ್ತಾರೆ. ಒಂದುವೇಳೆ ಆ ದಿನ ನಿಶ್ಚಿತವಾಗಿ ತಿಳಿಯದೆ ಹೋದಲ್ಲಿ ಯಾವದೋ ಒಂದು ಕಾಲ್ಪನಿಕ ದಿನವನ್ನೇ ಗೊತ್ತುಪಡಿಸಿಕೊಳ್ಳುತ್ತಾರೆ.

ಇದೀ ಜಗವೇ ಅಲ್ಲದಿದ್ದರೂ ಅವರವರ ಹತ್ತಿರದ ರಕ್ತಸಂಬಂಧಿಗಳು ಪುರಾತನರಾದ ತಮ್ಮ ವಂಶಜರ ಪುಣ್ಯದಿನವನ್ನು [illegible]

[illegible]

ಹಿಂದೀ ಚಲಚ್ಚಿತ್ರದಲ್ಲಿ ಕಾಮಸೂತ್ರ

[illegible] ಕಲೆಗೆ ಪಕ್ಷಿಮಾಣೇ ಉಗಸು. [illegible] ಭಾರತದ ಚಲಚ್ಚಿತ್ರಪ್ರಪಂಚದಲ್ಲಿ [illegible] ಕಾಯಿತು. ಅಂಥ ಗುಣದೋಷಗಳಲ್ಲಿ ದೋಷಗಳೇ ಹೆಚ್ಚು ಪ್ರಧಾನವಾಗಿ ನಮ್ಮ ಅನೇಕ ಚಿತ್ರಗಳಲ್ಲಿ ಕಂಡುಬರುತ್ತವೆ. ಸರ್ವದೋಷಗಳಲ್ಲೂ ಕಟುತಮವಾದುದೆಂದರೆ ಕಾಮೋತ್ತೇಜನ ಕ್ರಿಯೆ (Sex-appeal).

ಪುರುಷಜಾಹುಲ್ಯವುಳ್ಳ ಹೊರ ವ್ಯವಹಾರದಲ್ಲಿ ಸ್ತ್ರೀಯರನ್ನು ಉತ್ತೇಜಕ ಶಕ್ತಿಗಳನ್ನಾಗಿ ಬಳಸಿ ಹಣ ಗಳಿಸುವ ದುರ್ಬುದ್ಧಿ ನಿರ್ಮಾಪಕರಲ್ಲಿರುವುದು, ಸಾಮಾಜಿಕ ವಿದ್ರೋಹವೆಂದೇ ತಿಳಿಯಬೇಕು. "ಏಕೋರಸಃ ಕರುಣ ಏವ" ಎಂದು ಭವಭೂತಿ [illegible] "ಶೃಂಗಾರ ಏವ" ಎಂದು ನಮ್ಮ ಚಲಚ್ಚಿತ್ರಗಳು ಹೇಳುತ್ತವೆನ್ನಬಹುದೆ? ಇಲ್ಲ- ಅಷ್ಟು ಅವಕ್ಕೂ ಮುಂದೆ ಸಾಗ್ಗಿ— ದಶಮರಸವೊಂದಿದೆ, ಅದು ಕಾಮರಸ- ಎನ್ನುವಲ್ಲಿಯ ವರೆಗೆ ಹೋಗಿ ಹಾಲಿವುಡ್ಡಿನ ಮಾದರಿಯ ತಿರಾಭರಣ ಸ್ತ್ರೀಗಾತ್ರವನ್ನು ಪ್ರದರ್ಶಿಸುವುದಷ್ಟೇ ಅವುಗಳ ವೈಶಿಷ್ಟ್ಯವನ್ನಾಗಿ ತಿಳಿಸುತ್ತಿರುವಂತಿದೆ.

ಮೇಲಿನ ಅಭಿಪ್ರಾಯಕ್ಕೆ ಆಧಾರವಾಗಿ ನಮ್ಮ ಗವರ್ನರ್ ಜನರಲ್ಲರಾದ ಶ್ರೀ ರಾಜಗೋಪಾಲಾಚಾರ್ಯರು ಈಗ ೩-೪ ವರ್ಷಗಳ ಹಿಂದೆ ಹೇಳಿದ ಮಾತಿದೆ.— "ಅವರ (ಪೌರಾ [illegible] ದಲ್ಲಿ ಈ ಉದಾತ್ತ ಪಾತ್ರಗಳನ್ನು [illegible] ಸಲಾಗುತ್ತದೆ. ಮತ್ತು ಅದರ ಮೇಲೆ ಆಗಾಗ ರಳವೆನಿಸುವ ಕಾಮೋತ್ತೇಜಕ ಕೃತಿಯ ಅಷ್ಟು [illegible]

[illegible]

ಪಿಚ್ಚಾರಪ್ಪ ಚೋದನ

[illegible]

ಕೂಲಿಕಾರರ ಕಾಯದೆ

ಕಾರಖಾನೆಗಳಲ್ಲಿ ಕೆಲಸಮಾಡುವ ಕೂಲಿಕಾರರಿಗೆ ಅನ್ವಯಿಸುವ ಕಾಯಿದೆಯನ್ನು ಸಮೀಕರಿಸುವ ಮತ್ತು ತಿದ್ದುವ ಬಗ್ಗೆ ಶ್ರಮ ಸಮಿತಿಯಿಂದ ಸಿದ್ಧಗೊಳಿಸಲ್ಪಟ್ಟ ಮಸೂದೆಯು ವಿಚಾರಣೆಯು ಭಾರತ ಪಾರ್ಲಿಮೆಂಟದಲ್ಲಿ ಬಹಳ ಚರ್ಚೆಯಾಯಿತು. ಈ ಸಂದರ್ಭದಲ್ಲಿ ಕೂಲಿಕಾರ ಮಂತ್ರಿ ಜಗಜೀವನರಾಮರು ಹೀಗೆ ಹೇಳಿದರು.

"ನಾವು ಕೂಲಿಕಾರರಿಗೆ ವಿಶೇಷ ಸಲಿಗೆ ತೋರಿಸುತ್ತಿದ್ದೇವೆಂದೂ ಈ ಬಗ್ಗೆ ಭರದಿಂದ ಕಾಯಿದೆ ಮಾಡಲಾಗುತ್ತಿದೆಯೆಂದೂ ಉದ್ದಿಮೆದಾರರು ಟೀಕಿಸುತ್ತಾರೆ. ಆದರೆ ಸಾಕಷ್ಟು ಭರದಿಂದ ಈ ಕೆಲಸ ನಡೆದಿಲ್ಲವೆಂದೇ ನನಗೆ ನಿಸುತ್ತದೆ. ದೇಶದ ಇತರ ಪ್ರಜೆಗಳಂತೆ ಕೂಲಿಕಾರರನ್ನೂ ನಾಗರಿಕರೆಂದು ಉದ್ದಿಮೆದಾರರು ಪರಿಗಣಿಸಬೇಡವೇ? ... ಕೂಲಿಕಾರರೂ ಪ್ರಾಮಾಣಿಕ ನಾಗರಿಕರೆನಿಸಿಕೊಂಡು ತಮ್ಮ ಹೊಣೆಯರಿತು ಹೆಜ್ಜೆ ಹಾಕಬೇಕು. ಉದ್ದಿಮೆಗಾರ ಮತ್ತು ಕೂಲಿಕಾರರ ತಿಳುವಳಿಕೆ ತೃಪ್ತಿಕರವಾಗಿರದಿದ್ದರೆ ಪರಸ್ಪರರ ವಿನಾಶ ಕಟ್ಟಿಟ್ಟದ್ದೇ. ಮೊದಲು ೬೨ ಜನ ಫ್ಯಾಕ್ಟರಿ ಇನ್‌ಸ್ಪೆಕ್ಟರರಿದ್ದರು. ಈಗ ೮೬ ಜನರಿದ್ದಾರೆ.

ಕೂಲಿಕಾರರಿಗೆ ತಾಂತ್ರಿಕ ಶಿಕ್ಷಣ ಕೊಡುವ ಬಗ್ಗೆ ಕಾರಖಾನೆಯ ಮಾಲಕರೊಡನೆ ವಿಚಾರ ನಡೆದಿದೆ. ಈ ಮಸೂದೆಯಲ್ಲಿ ಹೆಂಗಸರು ರಾತ್ರಿ ೧೦ ರ ವರೆಗೆ ಕೆಲಸ ಮಾಡಬಹುದೆಂದು ಅನುಕೂಲ ಕಲ್ಪಿಸಿದೆ. ಎರಡನೆ ಪಾಳಿಯಲ್ಲಿ ಕೆಲಸಕ್ಕೆ ಹೋಗದಿದ್ದರೆ ಕಾರಖಾನೆಗಳಲ್ಲಿ ಹೆಂಗಸರಿಗೆ ಕೆಲಸ ಸಿಗುವ ಸಂಭವವಿಲ್ಲವೆಂದು ರಾತ್ರಿ ಕೆಲಸದ ಅನುಕೂಲತೆ ಒದಗಿಸಿ ಕೊಡಲಾಗಿದೆ. ರಾತ್ರಿ ಕಾಲದಲ್ಲಿ ಹೆಂಗಸರು ಕೆಲಸಕ್ಕೆ ಹೋದರೆ ಅವರನ್ನು ಅಪಹರಿಸುವ ಭೀತಿಯಿದೆಯೆಂದು ಓರ್ವ ಸದಸ್ಯರು ನುಡಿದರು. ಆದರೆ ಅಪಹರಣದ ಸಂಖ್ಯೆಯನ್ನು ನೋಡಿದರೆ ಕೆಲಸ ಮಾಡುವ ಹೆಂಗಸರಿಗಿಂತ ಮನೆಯಲ್ಲಿದ್ದ ಹೆಂಗಸರ ಅಪಹರಣವೇ ಹೆಚ್ಚಾಗಿರುವ ಅಂಶ ತಿಳಿಯುವದು. ಬೇರೆ ಜೀವನೋಪಾಯವಿಲ್ಲದ ಹೆಂಗಸರಿಗೆ ದುಡಿಮೆಗೆ ಅನುಕೂಲವಾಗಲೆಂದೇ ಈ ಕಲಮು ಹಾಕಿದ್ದು ಇದರಲ್ಲಿ ಸಮಾಜದ ಹಿತವಿದೆ."

"ಈ ಕಾಯದೆಯ ಮೂರು ಪಾರ್ಟುಗಳ ಮುಖ್ಯಾಂಶಗಳು ಹೀಗಿವೆ. ಸತತ ಕೆಲಸ ಮಾಡುವ ಕಾರಖಾನೆಗಳು ಮತ್ತು ಕೆಲ ಹಂಗಾಮಿನಲ್ಲಿ ಮಾತ್ರ ನಡೆವ ಕಾರಖಾನೆಗಳು ಎಂಬ ಭೇದವನ್ನು ತೊಲಗಿಸಿ, ಕಾರಖಾನೆ ಎಂಬ ಹೆಸರಿನ ಅರ್ಥವನ್ನು ಹಿಗ್ಗಿಸಿ ಬಗೆ ಬಗೆಯ ಔದ್ಯೋಗಿಕ ಕರ್ಮಕಾರರ ಕಾರ್ಮಾಗಾರಗಳನ್ನು ಕಾರಖಾನೆಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಕೆಲಸಗಾರರಿಗೆ ಉಪಹಾರ ಗೃಹ, ಕಾರ್ಮಿಕರ ಬಟ್ಟೆಬರೆಗಳನ್ನು ಇಡಲು ತಕ್ಕ ಸ್ಥಳ, ಕಾರಖಾನೆಗಳನ್ನು ಕಟ್ಟುವ ಮುಂಚೆಯೇ ಅವುಗಳಿಗೆ ಲೈಸೆನ್ಸ ಕೊಡುವದು. ಪ್ರತಿಯೊಬ್ಬ ಕಾರ್ಮಿಕನಿಗೆ ಅವಶ್ಯವಾಗಿ ಬೇಕಾಗುವ ಸ್ಥಳದ ಮರ್ಯಾದೆ, ವಾರಕ್ಕೆ ೪೮ ಗಂಟೆಗಳ ದುಡಿತ ಇವೇ ಮೊದಲಾದ ಸಂಗತಿಗಳು ತಿದ್ದುಪಡಿ ಹೊಂದಿದ ಮಸೂದೆಯಲ್ಲಿವೆ.

ನಾಡಿನ ದುಡಿಮೆಯ ಸಂಘಟನೆಯ ಧ್ಯೇಯವೆಂದರೆ ಕಾರ್ಮಿಕರಿಗೆಲ್ಲ ಒಳ್ಳೆಯ ಜೀವನ ಸೌಕರ್ಯಗಳು ದೊರಕಲೆಂಬುದೇ. ದುಡಿಮೆಗಾರರು ಸಂತುಷ್ಟರಾಗುವದರಿಂದ ದೇಶದ ಉತ್ಪಾದನೆಯು ಶಕ್ತಿ ತಾನಾಗಿ ಹೆಚ್ಚುವದು. ಉತ್ಪಾದನಶಕ್ತಿ ಹೆಚ್ಚಿದರೆ ಕಾರ್ಮಿಕರ ವೇತನ ಪ್ರಮಾಣವನ್ನು ಹೆಚ್ಚಿಸುವದೂ ಕಷ್ಟವಾಗುವದಿಲ್ಲ. ಉತ್ಪಾದನದ ಶಕ್ತಿಯು, ಹೆಚ್ಚಳ, ಕಾರ್ಮಿಕರ ವೇತನ ಪ್ರಮಾಣದ ಹೆಚ್ಚಳ, ಉಚ್ಚ ಜೀವನ ಸೌಕರ್ಯ ಇವುಗಳು ಪರಸ್ಪರಾವಲಂಬಿಯಾಗಿವೆ. ನಾಡಿನ ನಾಗರಿಕರೆಲ್ಲ ಒಪ್ಪಿಸಿ ಒಂದು ಬಗೆಯ ಹೊಟ್ಟೆತುಂಬ ಕೆಲಸ ದೊರೆತು ಕೈತುಂಬ ಸಂಬಳ ದೊರೆತರೆ ಉತ್ಪನ್ನವು ತಾನಾಗಿ ಸಮೃದ್ಧವಾಗುವದು. ಸಣ್ಣವಾದರೂ ಸುಂದರವಾದ ಮನೆಗಳು, ಹಿತವಾದ ಪೌಷ್ಟಿಕ ಆಹಾರ, ಶಿಕ್ಷಣದ ಹಾಗೂ ಆರೋಗ್ಯದ ಇನ್ನಿತರ ಸೌಕರ್ಯಗಳು, ಅವರ ಮಕ್ಕಳು ಮರಿಗಳಿಗೆ ಜೀವನದಲ್ಲಿ ಊರ್ಜಿತಕ್ಕೆ ಬರಲು ತಕ್ಕ ಸಂದರ್ಭಗಳು ಇವೆಲ್ಲ ಕೂಲಿಕಾರರಿಗೆ ಸಿಕ್ಕಲೇಬೇಕೆಂಬದಾಗಿ ಅಮೇರಿಕೆಯೂ ಆದರ್ಶವನ್ನಿಟ್ಟುಕೊಂಡು ಸಾಗಿದೆ. ಮೇಲ್ಕಾಣಿಸಿದ ಸುಖಸೌಕರ್ಯಗಳು ಯಾವ ದೇಶದ ಕೂಲಿಕಾರರಿಗೆ ಬೇಡವಾದಾವು? ಇದೇ ಆದರ್ಶಗಳನ್ನಿಟ್ಟು ಹಿಂದುಸ್ಥಾನವೂ ಸಾಗಿದ್ದಾದರೆ ಹಿಂದುಸ್ಥಾನದಲ್ಲಿ ಕೂಲಿಕಾರನಾಗಿಯೇ ಬಾಳುವದು ಲೇಸೆಂಬ ದಿನಗಳು ಬೇಗ ಬಾರದಿರವು.

ಕೂಲಿಕಾರರಿಗೆ ವಸತಿ

ದಿಲ್ಲಿಯಲ್ಲಿ ರಾಷ್ಟ್ರೀಯ ಮಜದೂರ ಸಂಘದ ಕಾರ್ಯಕಾರೀ ಸಮಿತಿಯು ಶ್ರೀ ಹರಿಹರನಾಥ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಸೇರಿ, ಸರಕಾರವು ಕೂಲಿಕಾರರಿಗಾಗಿ ೧೦ ವರ್ಷಗಳಲ್ಲಿ ೧೦ ಲಕ್ಷ ಮನೆಗಳನ್ನು ಕಟ್ಟಿಸಿಕೊಡುವ ಆಶ್ವಾಸನವನ್ನು ಪೂರೈಸಲು ಸಾಕಷ್ಟು ಪ್ರಯತ್ನಿಸುತ್ತಿಲ್ಲವೆಂದು ವಿಷಾದ ವ್ಯಕ್ತಪಡಿಸಿತು. ಕೂಲಿಕಾರರಿಗೆಲ್ಲ ವಸತಿ ಸೌಕರ್ಯವನ್ನು ಒದಗಿಸುವದು ಔದ್ಯೋಗಿಕ ಒಪ್ಪಂದದ ಮುಖ್ಯಾಂಶಗಳಲ್ಲಿ ಒಂದಾದ್ದರಿಂದ ಈ ಬಗ್ಗೆ ಸರಕಾರವು ಬೇಗ ಕಾರ್ಯಪ್ರವೃತ್ತವಾಗಬೇಕೆಂದು ಒಂದು ಗೊತ್ತುವಳಿಯಾಯಿತು.

ಸಮಿತಿಯು ಸ್ವೀಕರಿಸಿದ ಇನ್ನೊಂದು ಗೊತ್ತುವಳಿಯಲ್ಲಿ ಔದ್ಯೋಗಿಕ ಒಪ್ಪಂದದ ಘೋಷಣೆಯಲ್ಲಿ ವಿಶ್ವಾಸ ವ್ಯಕ್ತ ಮಾಡಲಾಯಿತಲ್ಲದೆ ಉದ್ದಿಮೆಗಳ ಕೆಲ ವಿಭಾಗಗಳಲ್ಲಿಯ ಉತ್ಪಾದನೆಯಲ್ಲಿ ಉಂಟಾದ ಸುಧಾರಣೆಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಲಾಯಿತು.

ಆದರ್ಶ ಗೃಹಿಣಿ


ಅಮೇರಿಕದ ಸಂಯುಕ್ತ ಸಂಸ್ಥಾನದ ಮಿಚಿಗನ್ ಜಿಲ್ಹೆಯಲ್ಲಿ ತಜ್ಞರು ಒಂದು ಸಂಶೋಧನ ನಡೆಸಿದರು. ಅದರ ಪ್ರಕಾರ ಆ ಜಿಲ್ಹೆಯಲ್ಲಿಯ ಗೃಹಿಣಿಯರಲ್ಲಿ ಎಷ್ಟು ಜನ ಗೃಹಲಕ್ಷ್ಮಿಯರಿದ್ದಾರೆ ಎಂಬುದರ ತಪಾಸಣೆಯಾಯಿತು. ಅವರಲ್ಲಿ ಒಬ್ಬಾಕೆ ಪ್ರಥಮ ಸ್ಥಾನವನ್ನು ಪಡೆದಳು. ಅವಳು ಮದುವೆಗೆ ಮೊದಲು ಒಳ್ಳೆಯ ವಿದ್ಯಾಭ್ಯಾಸವನ್ನು ಪಡೆದು ಕೆಲಕಾಲ ಶಿಕ್ಷಕವೃತ್ತಿ, ದಾದಿತನ ಮತ್ತು ಪುಸ್ತಕಭಂಡಾರ ನಿರ್ವಹಣ ಈ ಕೆಲಸವನ್ನು ಮಾಡಿ, ಮದುವೆಯಾದ ಬಳಿಕ ಗೃಹಲಕ್ಷ್ಮೀ ಪದವನ್ನು ಅಲಂಕರಿಸಿದಳು. ಈಕೆ ಮನೆಯ ಆಡಳಿತವನ್ನು ಆದರ್ಶ ರೀತಿಯಿಂದ ನಡೆಸಹೊಡಗಿದಳು. ೩೮ ಪ್ರಶ್ನೆಗಳಿಗೆ ಸಂಪೂರ್ಣ ಸಮರ್ಪಕ ಉತ್ತರವನ್ನು ಕೊಟ್ಟವಳೆಂದರೆ ೩೮೨ ಗೃಹಿಣಿಯರಲ್ಲಿ ಅವಳೊಬ್ಬಳೇ.

ಪ್ರಶ್ನೆಗಳಲ್ಲಿ ಗೃಹಿಣಿಯು ತನ್ನ ಮತ್ತು ತನ್ನ ಮಕ್ಕಳ ಭವಿತವ್ಯದ ಬಗ್ಗೆ ಮಾಡಿದ ಯೋಜನೆಯೇ ಬಹು ಮುಖ್ಯವಾದುದು. ಮಕ್ಕಳ ವಿದ್ಯಾಭ್ಯಾಸ ಮತ್ತು ವ್ಯಕ್ತಿತ್ವ ವರ್ಧನ; ಮನೆಯ ಸುಧಾರಣೆ, ಜೀವವಿಮೆ, ವೈದ್ಯಸಹಾಯ ಮತ್ತು ಜರ್ಜಿನ ಸದಸ್ಯತ್ವ ಇವುಗಳನ್ನು ಸುವ್ಯವಸ್ಥಿತವಾಗಿ ಯೋಜಿಸುವದು ಹೆಂಗಸಿನ ಮುಖ್ಯ ಕರ್ತವ್ಯವೆಂದು ಅವಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲಾಯಿತು.

ಫಲಿತಾಂಶದಲ್ಲಿ ಬೇರೆ ಬೇರೆ ವಯಸ್ಸಿನ ಹೆಣ್ಣುಮಕ್ಕಳು ಬೇರೆ ಬೇರೆ ಕಾರ್ಯಕ್ಷೇತ್ರಗಳಲ್ಲಿ ವಿಶೇಷ ಜಾಣ್ಮೆಯನ್ನು ತೋರಿಸುತ್ತ ಕಂಡು ಬಂದಿತು. ಹಣಕಾಸಿನ ವೆಚ್ಚದಲ್ಲಿ ಬಿಗಿತ ತೋರಿಸಿದವರಲ್ಲಿ ತರುಣಿಯರೇ ಹೆಚ್ಚು. ಅವರು ಆದಾಯವನ್ನೂ ವೆಚ್ಚವನ್ನೂ ಹೆಚ್ಚು ಕಡಿಮೆಯಾಗದಂತೆ ಮೊದಲೇ ಹೊಂದಿಸಿ ಯೋಜನೆಯನ್ನಿಟ್ಟು ವೆಚ್ಚ ಮಾಡುತ್ತಿದ್ದರು. ದೀರ್ಘಕಾಲಿಕ ಹಣಕಾಸಿನ ಯೋಜನೆಯಲ್ಲಿ ಅವರು ವಿಶೇಷ ಲಕ್ಷ್ಯವಿತ್ತಿದ್ದರು. ೬೦ ಮತ್ತು ಅದಕ್ಕೆ ಮೀರಿದ ಗೃಹಿಣಿಯರು ಮನೆಗೆಲಸ ಮತ್ತು ಅಡಿಗೆಗಳನ್ನು ಬಹು ಬೇಗ ಮುಗಿಸಿ ದೇಹಕ್ಕೆ ವಿರಾಮ ತೆಗೆದುಕೊಳ್ಳುವುದರಲ್ಲಿ ಬಹಳ ನಿಪುಣತೆಯನ್ನು ತೋರಿ ಬಂದಿತು.

ಕನ್ನಡ ಜನರಿಗೆಲ್ಲ ಇದರಿಂದ ತಿಳಿಯುವ ಉದಾಹರಣೆಯೆಂದರೆ ನನ್ನ ಭಾವನೆ. ಸಮಾಜದ ಅಭಿಗಮ್ಯದ ಗೃಹದ ರಕ್ಷಣೆ ಗೃಹಿಣಿಯಿಂದಲ್ಲದೆ ಅನ್ಯರಿಂದ ಆಗದೆಂಬುದು ಅನುಭವಸಿದ್ಧವೂ ತರ್ಕಸಿದ್ಧವೂ ಆಗಿದೆ. ಪ್ರತಿಯೊಬ್ಬ ಗೃಹಸ್ಥನೂ ಗೃಹಿಣಿಯಿತ್ವಕ್ಕೆ ಹೆಚ್ಚು ಮರ್ಯಾದೆ ಕೊಡುವನಲ್ಲದೆ ಹೆಂಗಸಿನ ಇತರ ಸಾಹಸಗಳಿಗಲ್ಲವೆಂಬುದು ಜಗತ್ತಿನಲ್ಲಿ ಎಂದಿನಿಂದಲೂ ಸ್ಪಷ್ಟವಾಗಿ ಕಂಡು ಬಂದ ಸಂಗತಿ. ಮೇಲೆ ಹೇಳಿದ ಕರ್ತವ್ಯನಿರ್ವಹಣದಿಂದಲೇ ಹೆಂಗಸಿಗೆ ಸ್ವಾತಂತ್ರ್ಯ ಮತ್ತು ಸಮಾನತೆಗಳು ದೊರಕಬಲ್ಲವಲ್ಲದೆ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲೂ ಗಂಡಸಿನೊಡನೆ ಸ್ಪರ್ಧೆಗೆ ನಿಲ್ಲುವ ಮತ್ಸರಬುದ್ಧಿಯಿಂದಲ್ಲವೆಂಬುದನ್ನು ಇಂದಿನ ಕಲಿತ ಹೆಣ್ಣುಮಕ್ಕಳು ಮನಗಾಣಬೇಕು. ಕರ್ತವ್ಯನಿರ್ವಹಣದಿಂದಲೇ ಹಕ್ಕು ಸಿಗುವುದೆಂಬುದು ಗಾಂಧಿಯುಗದ ನೀತಿವಾಕ್ಯ. ಈಗಿನಂತೆ ಅಧಿಕಪ್ರಸಂಗ ಅಥವಾ ಹಿಂದಿನಂತೆ ದಾಸವೀ ಮೌನ ಈ ಎರಡು ಧ್ರುವಗಳ ಗಂಟಿಕೊಂಡರೆ ಹೆಂಗಸು ಸಮಾಜಕ್ಕೆ ಹಿಡಿದ ಗೆದ್ದಲೆನಿಸುವಳು. ಸ್ವಾಚ್ಛಂದ್ಯ ಮತ್ತು ಅತಿಪರಾವಲಂಬಿತ್ವ ಈ ಎರಡು ಕೊಂಬುಗಳನ್ನು ಅನುಕ್ರಮವಾಗಿ ಇಂದಿನ ಮಾದರಿಯ ಮತ್ತು ಹಿಂದಿನ ಬಗೆಯ ಸ್ತ್ರೀಯರು ಆಶ್ರಯಿಸಿರುವ ವರೆಗೆ ದೇಶಕ್ಕೆ ಹಿತವಾಗದು. ಇದನ್ನು ನಮ್ಮ ಮಹಿಳೆಯರು ಸೆರಗಿಗೆ ಗಂಟು ಹಾಕಿಕೊಳ್ಳಬೇಕು.

— ಸುಭದ್ರೆ



ಹುಬ್ಬಳ್ಳಿ ಶಾಖೆ – ಕೊಪ್ಪಿಕರ ರೋಡ ಹುಬ್ಬಳ್ಳಿ

ಪ್ರತಿಮನೆಯಲ್ಲಿಯೂ ಇರಬೇಕಾದ

TRADE MARK

ಪ್ರಸಿದ್ಧ ಐ. ಟಿ. ಎಲ್. ಔಷಧಗಳು

ಪ್ರಖ್ಯಾತ ಡಾಕ್ಟರರು ಮತ್ತು ರಸಾಯನಿಕ ವಿಜ್ಞಾನಿಗಳಿಂದ ತಯಾರಿಸಿದ ಉಪಯುಕ್ತ ಔಷಧಗಳು

೧. ಗ್ರ್ಯಾಯಿಪ ಸಾಯಿರಪ- I. T. L.	ಮಕ್ಕಳ ಅಪಚನ, ಹೊಟ್ಟೆನೋವು, ಹಲ್ಲು ಬರುವಾಗ ಆಗುವ ಭೇದಿ, ವಾಂತಿ ಕೆಮ್ಮು ಇವುಗಳಿಗೆ ರುಚಿಯಾದ ದ್ರವ.
೨. ಅಸ್ಥಮುಲಿನ್— I. T. L.	ದಮ್ಮು, ಕುಕ್ಕುಸ ಈ ವಿಕಾರಗಳನ್ನು ಶಮನವಾಗಿ ಪೂರ್ಣ ಗುಣಪಡಿಸುವ ರಸಾಯನ.
೩. ಬಿಲ್ಯಾಂಕ್ಸ್— I. T. L.	ನೆಗಡಿ, ಥಂಡಿಜ್ವರ, ಇನ್‌ಫ್ಲ್ಯುಯೆಂಜಾ ಇವುಗಳಿಗೆ ಅಪ್ರತಿಮ ಔಷಧ.
೪. ಲೈಸಾಲ್— I. T. L.	ಉತ್ತಮ ಕ್ರಿಮಿನಾಶಕ ದ್ರಾವಕ. [illegible] ಗಳನ್ನು ಮತ್ತು [illegible] ನಾಶಪಡಿಸುತ್ತದೆ.
೫. ರಿಟ್ರಾಟಿನ್— I. T. L.	ಹೆಂಗಸರ ಮುಟ್ಟಿನ ರೋಗ. ಗರ್ಭರೋಗ ಮತ್ತು ಇತರ ರೋಗಗಳಿಗೆ ಉತ್ತಮ ಔಷಧ.
೬. ಸಾರಿಡ್ಯಾಲ್— I. T. L.	ತಲೆ ನೋವು, ವಾತ, [illegible], [illegible] ಇವುಗಳನ್ನು ಕೆಲವು [illegible] ಗುಣಪಡಿಸುವ ಮಾತ್ರೆಗಳು.
೭. [illegible]— I. T. L.	[illegible]
೮. [illegible]—	[illegible]
೯. [illegible]—	[illegible]

ಎಲ್ಲಾ ಔಷಧಿ ಅಂಗಡಿಗಳಲ್ಲಿ ದೊರೆಯುತ್ತದೆ

ತಯಾರಕರು:—ಮೈಸೂರು ಇಂಡಸ್ಟ್ರಿಯಲ್ & ಟೆಸ್ಟಿಂಗ ಲೆಬೊರೇಟರಿ ಲಿ. ಬೆಂಗಳೂರ

ಮಾರಾಟದ ಏಜೆಂಟರು:— } ದಿ ಕರ್ನಾಟಕ & ಡೆಕ್ಕನ್ ಏಜನ್ಸೀಜ, ಹುಬ್ಬಳ್ಳಿ

ಕರ್ನಾಟಕ

ಧಾರವಾಡ

[illegible]

ವಿಜಾಪೂರ

[illegible]

ಬೆಳಗಾವಿ

[illegible]

ಉತ್ತರ ಕನ್ನಡ

[illegible]

ಬಳ್ಳಾರಿ

[illegible]

[illegible]

ಹಿಂದುಸ್ತಾನ

ಮುಂಬಯಿ

ರಾಷ್ಟ್ರ ಪುರುಷರ ಹೆಸರುಗಳನ್ನು ಹೋಟೆಲ, ಹೇರಕಟಿಂಗ ಸಲೂನ, ಇತರ ಅಂಗಡಿಗಳು ಮೊದಲಾದವುಗಳ ಫಲಗಿಗಳ ಮೇಲೆ ಬರೆಯುವದನ್ನು, ಬೀಡಿ, ಸಿಗರೇಟು, ಬಿಸ್ಕಿಟ, ಬಗೆ ಬಗೆಯ ಪೇಯಗಳಿಗಾಗಿ ಅವರ ಹೆಸರಿಡುವದನ್ನು ಅಪರಾಧವಾಗಿ ಗಣಿಸಬೇಕೆಂದು ಶಾಸಕರಾದ ಶ್ರೀ ಎಂ. ಡಿ. ಜೋಶಿ ಎಂಬವರು ಮುಂಬಯಿ ಶಾಸನ ಸಭೆಯಲ್ಲಿ ಒಂದು ಗೊತ್ತುವಳಿ ಮುಂದಿಸಲಿದ್ದಾರೆಂದು ತಿಳಿಯುತ್ತದೆ. ಸಾಪ್ತಾಹಿಕ ಮತ್ತು ಮಾಸಿಕ ಭವಿಷ್ಯವನ್ನು ಪ್ರಕಟಿಸುವದನ್ನು ಸಹ ತಡೆಯಬೇಕೆಂಬ ಇನ್ನೊಂದು ಗೊತ್ತುವಳಿಯನ್ನು ಅವರು ತರಲಿದ್ದಾರೆ.

ಕೇಂದ್ರ ಸರಕಾರವು ಕೊಡುವ ಎಲ್ಲ ಬಟ್ಟೆಯನ್ನು ಮುಂಬೈ ಸರಕಾರವೇ ತೆಗೆದುಕೊಂಡು ಸರಕಾರೀ ಮನ್ನಣೆ ಪಡೆದ ಅಂಗಡಿಗಳ ಮುಖಾಂತರ ಹಂಚಲಾಗುವದೆಂದು ಮುಂಬಯಿಯ ಪೂರೈಕೆಯ ಮಂತ್ರಿ ಶ್ರೀ ದಿನಕರರಾವ ದೇಸಾಯರು ಸುದ್ದಿಗಾರರ ಸಭೆಯಲ್ಲಿ ಹೇಳಿದರು. ಪ್ರಾಂತದ ಪ್ರತಿಯೊಬ್ಬನಿಗೂ ಸಲ್ಲಬೇಕಾದ ಬಟ್ಟೆಯ ಪ್ರಮಾಣವನ್ನು ಮುಟ್ಟಿಸಲಾಗುವದೆಂದು ಆಶ್ವಾಸನ ಕೊಟ್ಟರು. ಹೊಸ ಬೆಲೆಯು ಬಟ್ಟೆಯ ಮೇಲೆ ಮುದ್ರಿತವಾಗಿರುವದೆಂದೂ ನಗರವಾಸಿಗಳಿಗೆ ವರ್ಷಕ್ಕೆ ಒಬ್ಬನಿಗೆ ೨೪ ಗಜ ಮತ್ತು ಹಳ್ಳಿಗರಿಗೆ ೧೮ ಗಜ ಕೊಡಬಹುದೆಂದು ತಿಳಿಸಿದರು.

ಮುಂಬಯಿ ಪಟ್ಟಣ ಮತ್ತು ಉಪ ನಗರಗಳಲ್ಲಿದ್ದ ಎಲ್ಲ ಪಠಾಣರೂ ತಮ್ಮ ಹೆಸರನ್ನು ೧ ತಿಂಗಳೊಳಗೆ ಗುಪ್ತ ಪೋಲೀಸ ಕೇಂದ್ರದ ಕಚೇರಿಯಲ್ಲಿ ರಜಿಸ್ಟರ ಮಾಡಿಸಬೇಕೆಂದು ಮುಂಬಯಿ ಸರಕಾರವು ಆಜ್ಞೆ ಹೊರಡಿಸಿದೆ. ತಪ್ಪಿದವರ ಬಗ್ಗೆ ಯೋಗ್ಯ ಕ್ರಮ ಕೈಕೊಳ್ಳಲಾಗುವದೆಂದು ಎಚ್ಚರಿಕೆಯನ್ನು ಹೇಳಿದ್ದಾರೆ.

ಮುಂಬೈಯ ಒಂದು ಮೋಟಾರ ಕಂಪನಿ ಮತ್ತು ಹೈದರಾಬಾದ ಸರಕಾರದ ನಡುವೆ ೧ ಕೋಟಿ ರೂ. ಬೆಲೆಯ ಜೀಪಕಾರು, ಟ್ರಕ್ಕು ಮೊದಲಾದವುಗಳನ್ನು ಪೂರೈಸುವ ಬಗ್ಗೆ ಆದ ಕರಾರ ಪತ್ರವನ್ನು ಮುಂಬಯಿ ಸಿ. ಆಯ್. ಡಿ. ಪೋಲೀಸರು ಶೋಧಿಸಿ ವಶಪಡಿಸಿಕೊಂಡಿದ್ದಾರೆ.

ಸಪ್ಟಂಬರ ೧೫ಕ್ಕೆ ಮುಂಬಯಿಗೆ ಬರಲಿರುವ "ದಿಲ್ಲಿ" ಎಂಬ ಹಿಂದುಸ್ತಾನದ ಹೊಸ ಹಡಗವನ್ನು ಸ್ವಾಗತಿಸಲು ಪಂ. ಜವಾಹರಲಾಲರು ಮುಂಬಯಿಗೆ ಬರಲಿರುವರೆಂದು ತಿಳಿಯುತ್ತದೆ. "ದಿಲ್ಲಿ" ಹಡಗವು ೬ ಇಂಚಿನ ತೋಫುಗಳುಳ್ಳ ಕ್ರೂಝರ. ಇದರ ಮೊದಲಿನ ಹೆಸರು "ಆ್ಯಚಿಲಿ" ಎಂದಿತ್ತು. ದ್ವಿತೀಯ ಮಹಾಯುದ್ಧದಲ್ಲಿ ಇದು ಬಹಳ ಪ್ರಖ್ಯಾತವಾಗಿತ್ತು. ಬ್ರಿಟಿಶ್ ನೌಕಾಪಡೆಯಿಂದ ಇದನ್ನು ಕೊಳ್ಳಲಾಗಿದ್ದು ಹಿಂದೀ ನಾವಿಕರೇ ಇದನ್ನು ನಡೆಸುತ್ತಿರುವರು.

ವಿಲೀನ ಹೊಂದಿದ ಸಂಸ್ಥಾನಗಳ ಆಡಳಿತವು ಸುಗಮವಾಗುವಂತೆ ಮುಂಬಯಿ ಪ್ರಾಂತದ ಕಾಯದೆಗಳನ್ನೇ ಆ ಪ್ರದೇಶಗಳಲ್ಲಿಯೂ ಅಮಲಿನಲ್ಲಿ ತರುವ ಬಗ್ಗೆ ಮುಂಬಯಿ ಸರಕಾರವು ಮುಂಬರುವ ಶಾಸನ ಸಭೆಯ ಅಧಿವೇಶನದಲ್ಲಿ ಒಂದು ಮಸೂದೆಯನ್ನು ಮಂಡಿಸಲಿದೆಯೆಂದು ತಿಳಿಯುತ್ತದೆ.

ಸಿಂಧದಲ್ಲಿಯ ೨೦ ಲಕ್ಷ ಹರಿಜನರು ಹಿಂದುಸ್ತಾನಕ್ಕೆ ಗುಳೇ ಬರಲು ಆತುರರಾಗಿದ್ದು ಮಳೆಗಾಲ ಮುಗಿಯುತ್ತಲೆ ಅವರನ್ನು ಸಮುದ್ರಮೂಲಕ ಸ್ಥಾನಾಂತರಿಸಲಾಗುವದೆಂದೂ ಕಾಂಡವಾದ ಬಂದರದ ಅಭಿವೃದ್ಧಿಯ ಕೆಲಸದಲ್ಲಿಯೂ ಮಹಾತ್ಮರ ಸ್ಮಾರಕಕ್ಕಾಗಿ ಕಟ್ಟಲಾಗುವ 'ಗಾಂಧಿ ಧಾಮ' ಎಂಬ ಹೊಸ ನಗರ ರಚನೆಯ ಕೆಲಸದಲ್ಲಿಯೂ ಅವರನ್ನು ತೊಡಗಿಸಲಾಗುವದೆಂದೂ ತಿಳಿಯುತ್ತದೆ.

ಮಧ್ಯಪ್ರಾಂತ

ಮಂತ್ರಿಗಳ ಸಂಚಾರಕ್ಕಾಗಿ ಮಧ್ಯಪ್ರಾಂತ ಸರಕಾರದವರು ಎರಡು ವಿಮಾನಗಳನ್ನು ಕೊಳ್ಳಲು ನಿರ್ಧರಿಸಿದ್ದಾರೆ. ಇವಕ್ಕೆ ೨॥ ಲಕ್ಷ ರೂ. ಬೆಲೆ ಬೀಳಬಹುದು. ವಿಮಾನ ಸಂಚಾರದಿಂದ ಮಂತ್ರಿಗಳ ಸಮಯ ಉಳಿವುದಲ್ಲದೆ ಸರಕಾರದ ಒಡೆತನದ ವಿಮಾನಗಳ ಮೂಲಕ ಸಂಚಾರದ ವೆಚ್ಚವೂ ಬಹಳ ಉಳಿವುದೆಂದು ತಿಳಿಯುತ್ತದೆ.

ಹಿಂದೀ ರಾಷ್ಟ್ರೀಯ ವಿದ್ಯಾರ್ಥಿ ಸೈನ್ಯದ ೧೦೦೦ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಹಿಂದುಸ್ತಾನ ಸರಕಾರದ ಸಂರಕ್ಷಣ ಶಾಖೆಯು ಮೂವರು ಸೈನ್ಯಾಧಿಕಾರಿಗಳನ್ನು ನಾಗಪುರಕ್ಕೆ ಕಳಿಸಿದೆ. ಈ ಕೆಲಸಕ್ಕೆ ಮಧ್ಯಪ್ರಾಂತ ವರ್ಧ್ಯಾದ ಕಾಲೇಜಿನ ೨೦ ಪ್ರಾಧ್ಯಾಪಕರು ಶಿಕ್ಷಣ ಹೊಂದುತ್ತಿದ್ದು ಅವರು ಬೇಗ ಮರಳಿ ವಿದ್ಯಾರ್ಥಿಗಳ ಸೈನ್ಯ ಶಿಕ್ಷಣ ಕಾರ್ಯವನ್ನು ವಹಿಸಲಿದ್ದಾರೆಂದು ತಿಳಿಯುತ್ತದೆ.

ಮದ್ರಾಸ

ಹೊಸಪೇಟೆಯ ಹತ್ತರ ತುಂಗಭದ್ರಾ ಆಣೆಕಟ್ಟು ಕಟ್ಟುವ ಕೆಲಸವು ಹೈದರಾಬಾದ ಸರಕಾರದ ಔದಾಸೀನ್ಯದಿಂದ ಈಗ ನಿಂತು ಹೋಗಿದೆಯೆಂದು ತಿಳಿಯುತ್ತದೆ.

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ಮದ್ರಾಸ ರೋಟರಿಕ್ಲಬ್ಬಿನಲ್ಲಿ ಮಾತಾಡುತ್ತ ಭಾರತದ ಸೈನ್ಯಪಡೆಯು ಬಲಿಷ್ಠವಾಗಬೇಕೆಂದೂ ಒಕ್ಕಲತನಕ್ಕೆ ಭಾರತವು ಆಧುನಿಕ ಉಪಕರಣಗಳನ್ನು ಉಪಯೋಗಿಸಬೇಕೆಂದೂ ದೇಶದಲ್ಲಿ ಬೇಗ ಬೇಗ ಉದ್ಯೋಗೀಕರಣವಾಗಬೇಕೆಂದೂ ಹೇಳಿದರು.

ಮದ್ರಾಸ ಕಡಿತ ಮತ್ತು ಪುನರ್ಘಟನಾ ಸಮಿತಿಯು ತಾ ೩ಕ್ಕೆ ಒಪ್ಪಿಸಿದ ವರದಿಯಲ್ಲಿ ಕಚೇರಿಯನ್ನೊಳಗೊಂಡು ಪ್ರಾಂತಿಕ ಸರಕಾರದ ಎಲ್ಲ ವಿಭಾಗಗಳಲ್ಲಿಯೂ ೧೦೦ಕ್ಕೆ ೧೨॥ ಯಷ್ಟು ಕಡಿತ ಮಾಡಬೇಕೆಂದು ಸೂಚಿಸಿದೆ. ಈ ಕಡಿತವು ಕೆಳತರಗತಿಯ ನೌಕರರಿಗೆ ಅನ್ವಯಿಸದೆ ಉಚ್ಚ ಅಧಿಕಾರಿಗಳಿಗೆ ಮಾತ್ರ ಅನ್ವಯಿಸತಕ್ಕದ್ದೆಂದು ನಿರ್ದಿಷ್ಟಪಡಿಸಲಾಗಿದೆ. ಇದರಿಂದ ಸರಕಾರಕ್ಕೆ ೫ ಕೋಟಿ ರೂ. ಪ್ರತಿವರ್ಷ ಉಳಿತಾಯವಾಗುವ ಅಂದಾಜಿದೆ. ಸರಕಾರವು ಕೆಲ ಸಂದರ್ಭಗಳಲ್ಲಿ ಈ ಸೂಚನೆಯನ್ನು ಈಗಾಗಲೇ ಕೃತಿಯಲ್ಲಿ ಇಳಿಸಿದ್ದು ಉಳಿದವುಗಳ ಬಗ್ಗೆ ವಿಚಾರ ನಡೆಸಿದೆಯೆಂದು ತಿಳಿಯುತ್ತದೆ.

ಮದ್ರಾಸ ಶಾಸನ ಸಭೆಯಲ್ಲಿ ಆಂಧ್ರ ಪ್ರಾಂತ ರಚನೆಯ ಚರ್ಚೆ ನಡೆಯಬೇಕಾದಾಗ ಸಭೆಯಲ್ಲಿ ಕೋರಂ ಇಲ್ಲದ್ದಕ್ಕಾಗಿ ಶಾಸನ ಸಭೆಯು ಮುಂದುವರಿಯಬೇಕಾಯ್ತು. ೧೯೪೬ ರಲ್ಲಿ ಈ ಶಾಸನ ಸಭೆಯು ರಚಿತವಾದ ನಂತರ ಇದೇ ಮೊದಲ ಸಲ ಕೋರಂ ಇಲ್ಲದೆ ಸಭೆ ಮುಂದುವರಿದುದು.

ಮದ್ರಾಸ ನಗರ ಸಭೆಯ ಮುಂಬರುವ ಚುನಾವಣೆಯಲ್ಲಿ ತಮಿಳನಾಡ ಕಾಂಗ್ರೆಸ ಸಮಿತಿಯವರು ತಮ್ಮ ಅಧಿಕೃತ ಹುರಿಯಾಳುಗಳನ್ನು ನಿಲ್ಲಿಸುವದಿಲ್ಲ. ತೆಲುಗರು ತಮಿಳರ ನಡುವೆ ಎದ್ದ ತಿಕ್ಕಾಟವನ್ನು ಅನುಲಕ್ಷಿಸಿ ನಗರ ಸಭೆಯ ಆಡಳಿತೆಯಲ್ಲಿ ಪಕ್ಷಗಳ ರಾಜಕಾರಣ ಬೇಡವೆಂದು ಕಾಂಗ್ರೆಸ ಸಮಿತಿಯು ಈ ನಿರ್ಧಾರಕ್ಕೆ ಬಂದಿದೆ.

ಭಾಷಾವಾರ ಪ್ರಾಂತ ರಚನಾ ಸಮಿತಿಯು ತಾ ೫ಕ್ಕೆ ಮದ್ರಾಸಕ್ಕೆ ಬಂದಿತು. ತಾವು ಮದ್ರಾಸದಲ್ಲಿ ೬ ದಿನ ಇದ್ದು ಈ ಬಗ್ಗೆ ಮಂತ್ರಿಗಳನ್ನೂ ಉಳಿದ ಮುಖಂಡರನ್ನೂ ಕಂಡು ಚರ್ಚಿಸುವದಾಗಿ ಸಮಿತಿಯ ಅಧ್ಯಕ್ಷರು ಸುದ್ದಿಗಾರರಿಗೆ ತಿಳಿಸಿದರು.

ನಿವೃತ್ತರಾಗಲಿರುವ ಮದ್ರಾಸ ಪ್ರಾಂತದ ಗವರ್ನರ ಸರ್ ಆರ್ಚಬಾಲ್ಡನೈ ಅವರು ತಾ ೪ ರಂದು ಮದ್ರಾಸ ಶಾಸನ ಸಭೆ ಮತ್ತು ವಿಧಿ ಮಂಡಲದ ಸಂಯುಕ್ತ ಸಭೆಯಲ್ಲಿ ಭಾಷಣ ಮಾಡುತ್ತ ಭಾರತದ ಮುತ್ಸದ್ದಿಗಳನ್ನೂ ಅವರು ಈ ಒಂದು ವರ್ಷ ಯಶಸ್ವಿಯಾಗಿ ಎದುರಿಸಿದ ಗಂಭೀರ ಸಮಸ್ಯೆಗಳನ್ನೂ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಕಾರ್ಯಕ್ಷಮತೆಯನ್ನೂ ಬಾಯ್ತುಂಬ ಕೊಂಡಾಡಿ ವಿಶ್ವಾಸ ಧೈರ್ಯಗಳಿಂದ ಮುಂದೆ ಹೆಜ್ಜೆ ಹಾಕಿರಿ ಎಂಬುದಾಗಿ ನುಡಿದರು. ಅಧ್ಯಕ್ಷರಾದ ಶ್ರೀ ರಾಮಕೃಷ್ಣ ರಾಜು ಅವರು, ಸರ್ ಆರ್ಚಬಾಲ್ಡ ನೈದಂಪತಿಗಳು ಹಿಂದಿನವರಿಗಿಂತ ಅತ್ಯಂತ ಲೋಕಪ್ರಿಯರಾಗಿದ್ದರೆಂದೂ ಇವರು ಬೇರೆ ಹುದ್ದೆಯಲ್ಲಿ ಬೇಗ ಹಿಂದುಸ್ತಾನಕ್ಕೆ ಬರಲಿದ್ದಾರೆಂದೂ ಹೇಳಿ ಅವರ ಸ್ವದೇಶ ಪ್ರಯಾಣ ಸುಖಕರವಾಗಲೆಂದು ಹಾರೈಸಿದರು.

ಆಂಧ್ರ ಮಹಾಸಭೆಯ ಅಧ್ಯಕ್ಷರು ಭಾಷಾವಾರ ಪ್ರಾಂತ ರಚನಾ ಸಮಿತಿಗೆ ಒಪ್ಪಿಸಿದ ಬಿನ್ನಹ ಪತ್ರದಲ್ಲಿ ಅನೇಕ ಸಂಗತಿಗಳೊಡನೆ ಮೈಸೂರು ಸಂಸ್ಥಾನದ ಕೋಲಾರ ಜಿಲ್ಹೆ, ಬೆಂಗಳೂರು, ತುಮಕೂರು ಚಿತ್ರದುರ್ಗ ಜಿಲ್ಹೆಯ ಕೆಲ ಭಾಗ ಇವನ್ನೆಲ್ಲ ಆಂಧ್ರ ಪ್ರಾಂತಕ್ಕೆ ಸೇರಿಸಬೇಕೆಂದು ಕೇಳಿಕೊಂಡಿದ್ದಾರೆ.

ಹೊಸದಿಲ್ಲಿ

ಹಿಂದುಸ್ತಾನದ ಭಾವೀ ರಾಜ್ಯಘಟನೆಯ ಅಧಿಕೃತ ಭಾಷಾಂತರವು ತಾ. ೫ರ ಮುಂಜಾನೆ ಪ್ರಕಟವಾಯಿತು. ಇದಕ್ಕಾಗಿಯೇ ನಿಯಮಿತವಾದ ಸಮಿತಿಯವರು ಇದನ್ನು ಭಾಷಾಂತರಿಸಿರುವರು. ಉತ್ತರ ದಕ್ಷಿಣ ಭಾರತಗಳ ಭಾಷೆಯನ್ನು ಅನುಲಕ್ಷಿಸಿಯೇ ಈ ಭಾಷಾಂತರವನ್ನು ಸಿದ್ಧಗೊಳಿಸಲಾಗಿದೆ. ಪಾರಿಭಾಷಿಕ ಶಬ್ದಗಳಿಗಾಗಿ ಸಂಸ್ಕೃತದ ಸಹಾಯ ಪಡೆಯಲಾಗಿದೆ. ಘಟನಾಸಮಿತಿಯು ಘಟನೆಯ ಇಂಗ್ಲೀಷ ಆವೃತ್ತಿಯನ್ನು ಅಂಗೀಕರಿಸುವಾಗ ಈ ಹಿಂದೀ ಆವೃತ್ತಿಯನ್ನೂ ಸ್ವೀಕರಿಸಲಾಗುವದು.

ರೋಮದಲ್ಲಿ ನೆರೆಯಲಿರುವ ಅಂತಾರಾಷ್ಟ್ರೀಯ ಪಾರ್ಲಮೆಂಟರಿ ಯೂನಿಯನ್ ಪರಿಷತ್ತಿಗೆ ಹಿಂದುಸ್ತಾನ ಸರಕಾರದ ಪರವಾಗಿ ನಿರೀಕ್ಷಕರೆಂದು ನೇಮಿಸಲ್ಪಟ್ಟ ಶ್ರೀ ರಂಗನಾಥ ದಿವಾಕರರೂ ಶ್ರೀ ಕೇಸ್ಕರರೂ ದಿಲ್ಲಿಯಿಂದ ವಿಮಾನ ಮೂಲಕ ಮುಂಬಯಿ ಮಾರ್ಗವಾಗಿ ರೋಮಕ್ಕೆ ತಾ. ೪ ರಂದು ಪ್ರಯಾಣ ಬೆಳೆಸಿದರು. ಹೊರಡುವಾಗ ಶ್ರೀ ದಿವಾಕರರು "ಕರ್ನಾಟಕ ಒಂದೇ" ಎಂಬುದಾಗಿ ಮೈಸೂರ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗಯ್ಯನವರಿಗೆ ಒಂದು ವಿಶೇಷ ಸಂದೇಶ ಒಪ್ಪಿಸಿದರು. ತಮ್ಮ ಮುಖ್ಯ ಕಾರ್ಯವನ್ನೂ ಯುರೋಪದ ಕಾರ್ಯಕ್ರಮವನ್ನೂ ಮುಗಿಸಿಕೊಂಡು ಇನ್ನು ಒಂದು ತಿಂಗಳಿಗೆ ಶ್ರೀ ದಿವಾಕರರು ಹಿಂದುಸ್ತಾನಕ್ಕೆ ಮರಳುವರೆಂದು ತಿಳಿಯುತ್ತದೆ.

ಶ್ರೀ ಅನಂತಶಯನಂ ಅಯ್ಯಂಗಾರರು ಭಾರತದ ಹಿರಿಯೋಲಗದ ಉಪಾಧ್ಯಕ್ಷರಾಗಿ ಆಯ್ಕೆ ಹೊಂದಿದ್ದಾರೆ. ಹಿರಿಯೋಲಗವು ಅಧಿವೇಶನದಲ್ಲಿದ್ದಾಗ ಇವರಿಗೆ ಪ್ರತಿತಿಂಗಳು ೧ ಸಾವಿರ ರೂ ಸಂಬಳ ಸಿಗುವದಲ್ಲದೆ ಘಟನಾಸಮಿತಿಯ ಸದಸ್ಯತ್ವಕ್ಕಾಗಿ ದೊರೆವ ಪ್ರತಿದಿನದ ೪೫ ರೂ. ಗಳನ್ನೂ ಕೊಡಲಾಗುವದು.

ಕಾಶ್ಮೀರ ರಂಗದ ಪೂಂಚ ವಿಭಾಗದಲ್ಲಿ ವೈರಿಗಳ ಠಾಣ್ಯಗಳ ಮೇಲೆ ಹಿಂದುಸ್ತಾನ ಸೈನಿಕರು ಅನಿರೀಕ್ಷಿತವಾಗಿ ಏರಿಹೋಗಿ ವೈರಿಗಳನ್ನು ಓಡಿಸಿ ಆ ಪ್ರದೇಶವನ್ನೆಲ್ಲ ಆಕ್ರಮಿಸಿಕೊಂಡರೆಂದು ಸಂರಕ್ಷಣ ಶಾಖೆಯ ಪ್ರಕಟನೆ ಹೊರಟಿದೆ.

ಇಂಡಿಯನ್ ಏರ್ ಸರ್ವೀಸ ಮತ್ತು ಪೋಲೀಸ ಸರ್ವೀಸಗಳಲ್ಲಿ ತೆರವಿದ್ದ ೫೪೫ ಸ್ಥಳಗಳಿಗೆ ೧೬೪೦೦ ಅರ್ಜಿಗಳು ಬಂದಿವೆಯೆಂದೂ ಈ ಉಮೇದವಾರರ ಸಂದರ್ಶನ ತೆಗೆದುಕೊಳ್ಳಲು ಆಯ್ಕೆ ಮಂಡಲದವರು ಆಯಾ ಪ್ರಾಂತಗಳಿಗೆ ಹೋಗಲಿರುವರೆಂದೂ ಸರದಾರ ಪಟೇಲರು ಹಿರಿಯೋಲಗದಲ್ಲಿ ತಿಳಿಸಿದರು.

ಸರದಾರ ಸಂತಸಿಂಗರು ಹಿಂದುಸ್ತಾನದ ಹಿರಿಯೋಲಗಕ್ಕೆ ಅಶೋಕ ಸ್ತಂಭದ ಕಾಣಿಕೆ ಕೊಟ್ಟಿದ್ದು ಅದನ್ನು ಕೃತಜ್ಞತಾಪೂರ್ವಕ ಸ್ವೀಕರಿಸಲಾಗಿದೆ. ಸರದಾರ ಸಂತಸಿಂಗರು ಕೇಂದ್ರ ಶಾಸನ ಸಭೆಯಲ್ಲಿ ೧೯೩೦-೪೫ ರ ವರೆಗೆ ಕಾಂಗ್ರೆಸ ಪಕ್ಷದ ಸದಸ್ಯರಾಗಿದ್ದರು.

ಹಿಂದುಸ್ತಾನ ಸರಕಾರದವರು ಕರಾಚಿಯಲ್ಲಿ ಪ್ರಕಟವಾಗುವ "ಡಾನ" ಪತ್ರಿಕೆಗೆ ಪ್ರವೇಶ ನಿರ್ಬಂಧ ಹಾಕಿದ್ದಾರೆ. ಹಿಂದುಸ್ತಾನದ ಬಗ್ಗೆ ಈ ಪತ್ರಿಕೆಯು ಅಪಪ್ರಚಾರ ನಡೆಸಿದ್ದೇ ಈ ಉಗ್ರೋಪಾಯಕ್ಕೆ ಕಾರಣವಾಗಿದೆ.

ಹಿಂದುಸ್ತಾನವು ರಶಿಯಾದೊಡನೆ ಸ್ನೇಹ ಬೆಳೆಸದೆ ಪ್ರಜಾಸತ್ತಾತ್ಮಕ ರಾಷ್ಟ್ರಗಳೊಂದಿಗೆ ಸೇರಿಕೊಂಡರೆ ಪರಸ್ಪರ ಲಾಭವೆಂದು ಊಯಿಫಿಶರರು ದಿಲ್ಲಿಯಲ್ಲಿಯ ಒಂದು ಭಾಷಣದಲ್ಲಿ ಹೇಳಿದರು. ಪಾಕಿಸ್ತಾನದತ್ತ ಹೊರಳಿ, ಪಾಕಿಸ್ತಾನವು ದುಷ್ಟ ತತ್ವದಿಂದ ಅಸ್ತಿತ್ವದಲ್ಲಿ ಬಂದದ್ದರಿಂದ ಕಾಶ್ಮೀರ ಹೈದರಾಬಾದಗಳಲ್ಲಿ ಪಾಕಿಸ್ತಾನಕ್ಕೆ ಜಯ ದೊರೆತರೆ ಏಶಿಯದಲ್ಲೆಲ್ಲ ಅರಾಜಕತೆಯುಂಟಾಗುವದೆಂದೂ ಹೈದರಾಬಾದ ಕಾಶ್ಮೀರ ಸಮಸ್ಯೆಗಳು ಪಾಕಿಸ್ತಾನದಿಂದಲೇ ತಲೆಯೆತ್ತಿವೆಯೆಂದೂ ಸ್ಪಷ್ಟೋಕ್ತಿಗಳನ್ನಾಡಿದರು.

ಗಣಿ ಮತ್ತು ವಿದ್ಯುತ್ ಶಾಖೆಯ ಮಂತ್ರಿಗಳಾದ ಶ್ರೀ ಗಾಡಗೀಳರು ಪ್ರಾಂತೀಕರಣ ಸಮಿತಿಯ ಎದುರು ಸಾಕ್ಷಿ ನುಡಿಯುತ್ತ ಪ್ರಾಂತೀಕರಣವನ್ನು ಮುಂದೂಡಬಾರದೆಂದು ಹೇಳಿದರು.

ಮಾಸ್ಕೋದಲ್ಲಿ ಹಿಂದೀ ರಾಯಭಾರಿಗಳಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ವಿಮಾನ ಮೂಲಕ ತಾ. ೫ ಕ್ಕೆ ದಿಲ್ಲಿಗೆ ತಲುಪಿದರು. ಮುಖ್ಯ ಮಂತ್ರಿ ಪಂ. ಜವಾಹರಲಾಲರೇ ಮೊದಲಾದವರು ಅವರನ್ನು ನಿಲ್ದಾಣದಲ್ಲಿ ಸ್ವಾಗತಿಸಿದರು.

ಕಾಂಗ್ರೆಸ ವರ್ಕಿಂಗ ಕಮೀಟಿಯ ಸಭೆಯು ತಾ ೫ಕ್ಕೆ ಸೇರಿ ಕಾಂಗ್ರೆಸ ಸಂಘಟನೆ ಮತ್ತು ಆಡಳಿತೆಯ ಪ್ರಶ್ನೆಗಳನ್ನು ಚರ್ಚಿಸಿತಲ್ಲದೆ ನವೆಂಬರದಲ್ಲಿ ನಡೆಯಲಿರುವ ಕಾಂಗ್ರೆಸ ಅಧ್ಯಕ್ಷ ಚುನಾವಣೆಯ ಬಗ್ಗೆಯೂ ಚರ್ಚೆ ನಡೆಯಿತೆಂದು ತಿಳಿಯುತ್ತದೆ.

ಇಷ್ಟರಲ್ಲಿ ಹೊಸದಿಲ್ಲಿಯೊಳಗೆ ನಡೆಯಲಿರುವ ಒಕ್ಕಲತನ ಮಂತ್ರಿಗಳ ಪರಿಷತ್ತಿನಲ್ಲಿ ಧಾನ್ಯ ಉತ್ಪಾದಕರಿಗೂ ಗಿರಾಕಿಗಳಿಗೂ ಲಾಭದಾಯಕವಾಗಿರುವಂಥ ದರಗಳನ್ನು ನಿಶ್ಚಯಿಸುವ ಪ್ರಶ್ನೆಯು ಚರ್ಚಿಸಲ್ಪಡುವದೆಂದು ತಿಳಿಯುತ್ತದೆ.

ವಿಶ್ವವಿದ್ಯಾಲಯದ ಅಭ್ಯಾಸಕ್ರಮದಲ್ಲಿ ಇಂಗ್ಲೀಷ ಮಾಧ್ಯಮವನ್ನು ತೆಗೆದುಬಿಡಲು ಕೇಂದ್ರ ಸರಕಾರವು ಸೂಚಿಸಿದ್ದರೂ ೧೯೫೪ರೊಳಗಾಗಿ ಇದು ಸಾಧ್ಯವಾಗಲಿಕ್ಕಿಲ್ಲವೆಂದು ಶಿಕ್ಷಣ ಶಾಖೆಯ ಸ್ಥಾಯಿ ಸಮಿತಿಯು ಸಲಹೆ ಕೊಟ್ಟಿರುವದಾಗಿ ತಿಳಿಯುತ್ತದೆ.

ಶಾಲೆ. ಕಾಲೇಜುಗಳ ಪಠ್ಯಪುಸ್ತಕಕ್ಕಾಗಿ ಕಾಗದದ ಕೊರತೆಯಿದ್ದ ಕಾರಣ ಅಕ್ಟೋಬರದಿಂದ ಡಿಸೆಂಬರದ ವರೆಗೆ ಪಠ್ಯಪುಸ್ತಕಗಳನ್ನು ಮುದ್ರಿಸುವವರಿಗೆ ವೃತ್ತಪತ್ರದ ಕಾಗದವನ್ನು ಕೊಡಬೇಕೆಂದು ಸರಕಾರವು ನಿರ್ಧರಿಸಿರುವದಾಗಿ ಕೇಂದ್ರದಿಂದ ಒಂದು ಪ್ರಕಟನೆ ಹೊರಟಿದೆ.

ಪಶ್ಚಿಮ ಬಂಗಾಲ

ವಿಭಜನಾ ನಂತರ ಬಂಗಾಲದ ಅರಣ್ಯದ ಬಹು ಭಾಗವು ಪಾಕಿಸ್ತಾನಕ್ಕೆ ಹೋಗಿದ್ದರಿಂದ ಪಶ್ಚಿಮ ಬಂಗಾಲಕ್ಕೆ ಅರಣ್ಯ ಸಂಪತ್ತು ಇಲ್ಲವಾಗಿರುವ ಕಾರಣ ಅಂದಮಾನ ದ್ವೀಪದ ಅರಣ್ಯವನ್ನು ತಮಗೆ ಕೊಡಬೇಕೆಂದು ಪ. ಬಂಗಾಲ ಸರಕಾರವು ಕೇಂದ್ರ ಸರಕಾರಕ್ಕೆ ಕೇಳಿಕೊಳ್ಳುವದಾಗಿ ತಿಳಿಯುತ್ತದೆ.

ಬಂದರ ಸಮಿತಿಯವರು, ಕಲಕತ್ತೆಯ ಹತ್ತಿರ ಒಂದು ಹಡಗು ಕಟ್ಟುವ ಕಾರಖಾನೆಯನ್ನು ಪ್ರಾರಂಭಿಸುವ ಬಗ್ಗೆ ಪ. ಬಂಗಾಲದ ಉದ್ದಿಮೆ ಶಾಖೆಯ ಅಧಿಕಾರಿಗಳೊಡನೆ ಪ್ರಾಥಮಿಕ ಚರ್ಚೆ ನಡೆಸಿದರೆಂದು ತಿಳಿಯುತ್ತದೆ.

ಈಗ ಹಿಂದುಸ್ತಾನವು ಬ್ರಿಟಿಶ್ ಕಾಮನವೆಲ್ಥದಲ್ಲಿದ್ದರೂ ಅದಕ್ಕೆ ಕಾಮನವೆಲ್ಥದಿಂದ ಹೊರಬೀಳುವ ಅಧಿಕಾರವಿದೆಯೆಂದೂ ಸ್ವಾತಂತ್ರ್ಯಕ್ಕೂ ಸಾರ್ವಭೌಮತ್ವಕ್ಕೂ ಅಂತರವಿಲ್ಲವೆಂದೂ ಹಿಂದಿನ ಭಾರತ ಸರಕಾರದ ಕಾಯದೆ ಮಂತ್ರಿಗಳೂ ನಿವೃತ್ತ ಅಡ್ವೋಕೇಟ ಜನರಲರೂ ಆದ ಸರ ವೃಜೇಂದ್ರನಾಥ ಮಿತ್ರರು ಕಲಕತ್ತಾ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಹಿಂದಿ ಸಂಸ್ಥಾನ

ಬಡೋದೆಯ ಲಕ್ಷ್ಮೀವಿಲಾಸ ಅರಮನೆಯಲ್ಲಿ ತಾ ೪ಕ್ಕೆ ಸೇರಿದ ವಿಶೇಷ ದರಬಾರದಲ್ಲಿ ಬಡೋದೆಯ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಪೂರ್ಣ ಹೊಣೆಗಾರ ಸರಕಾರವು ಸ್ಥಾಪಿತವಾದುದನ್ನು ಸಾರಿದರು. ೨೫೦ ಜನ ಆಮಂತ್ರಿತ ಸರದಾರರೂ ಪ್ರಮುಖ ನಾಗರಿಕರೂ ಈ ಸಮಾರಂಭಕ್ಕೆ ಬಂದಿದ್ದರು. ಮುಖ್ಯ ಮಂತ್ರಿ ಡಾ. ಜೀವರಾಜ ಮೇಥಾ ಹಾಗೂ ಉಳಿದ ಮಂತ್ರಿಗಳ ಪ್ರತಿಜ್ಞಾವಿಧಿಯೂ ಜರುಗಿತು. ಖಡ್ಗಧಾರಿಗಳಾದ ಮರಾಠಾ ಸರದಾರರ ನಡುವೆ ಗಾಂಧಿ ಟೊಪ್ಪಿಗೆ ಮತ್ತು ಶುಭ್ರ ಖಾದಿ ಧರಿಸಿದವರು ಕಂಡುಬರುತ್ತಿದ್ದುದು ವೈಶಿಷ್ಟ್ಯಪೂರ್ಣವಾಗಿತ್ತು. ಬಡೋದಾ ದರಬಾರದ ಇತಿಹಾಸದಲ್ಲಿ ಈ ನೋಟ ಅಪೂರ್ವವಾದದ್ದು.

ಬಡೋದೆಯ ಹಿಂದು—ಮುಸಲ್ಮಾನರಲ್ಲಿ ಒಡಂಬಡಿಕೆಯಾಗಿ ವಾಸಾ ಮತ್ತು ಧಾಭೋಯದಲ್ಲಿ ಸಂಭವಿಸಿದ ಎಲ್ಲ ಜಾತೀಯ ಗಲಭೆಗಳ ಪ್ರಕರಣಗಳನ್ನು ಹಿಂತೆಗೆದುಕೊಳ್ಳಬೇಕೆಂದು ಗೊತ್ತಾಗಿದೆ. ವಾಸಾದಲ್ಲಿಯ ಹಿಂದುಗಳು ಮುಸಲ್ಮಾನರಿಗೆ ನಷ್ಟ ಭರತಿಯೆಂದು ೧॥ ಲಕ್ಷ ರೂಪಾಯಿಗಳನ್ನೂ ಧಾಭೋಯದಲ್ಲಿಯ ಮುಸಲ್ಮಾನರು ಹಿಂದುಗಳಿಗೆ ೨೦ ಸಾವಿರ ರೂಪಾಯಿಗಳನ್ನೂ ಕೊಡಲೊಪ್ಪಿದ್ದಾರೆ.

ವಾರದ ಭವಿಷ್ಯ

ಜೋತಿಷಿ— ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯ ಕಥನ ಆಫೀಸ ಖಡೇಬಝಾರ, ಬೆಳಗಾವಿ.

ಸಪ್ಟೆಂಬರ ೬ ರಿಂದ ೧೨ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ ಆದರೆ ಮಕ್ಕಳು ಅಗೌರವವುಂಟಾಗುವಂಥ ಕೆಲ ಕೃತ್ಯಗಳನ್ನು ಮಾಡುವ ಸಂಭವ ಮತ್ತು ಅದರಿಂದ ಉಭಯತರ ಮನಸ್ಸು ಬಹಳ ರಂಜಿತವಾಗುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಮಾನ. ಆದರೆ ದ್ರವ್ಯಲಾಭ ಕುಂಟ. ಬಂಧುವರ್ಗದವರಿಂದ ಉಪಹಾಸ. ಸ್ವತಂತ್ರ ಧಂದೆ ಮಾಡುವವರಿಗಿಂತ ನೌಕರವರ್ಗದವರಿಗೆ ತೊಂದರೆ ಕಡಿಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು ಆದರೆ ಯಶಸ್ಸಿನ ಒಲವು ನಿಮ್ಮ ಕಡೆಗೆ. ಪ್ರವಾಸಾದಿ ಕೆಲಸ ತೊಂದರೆಯದು ಅಶ್ವಿನಿಯ ೧ ನೇ ೩ ನೇ ಭರಣಿಯ ೧-೩-೪ನೇ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೩, ೧೬, ೧೭. ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕಸುಖ ಸಾಧಾರಣ ಅನುಕೂಲ. ಆದರೆ ಹೆಂಡತಿ ಉದ್ಯೋಗದ ಮಾತನ್ನುಮೇಲಿಂದಮೇಲೆಆಡಹತ್ತುವದರಿಂದ ಮನಸ್ಸಿನಲ್ಲಿ ಬಹಳ ವಿರಸ. ಆಪ್ತರೊಡನೆ ಬಹಳ ವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಧರ್ಮದ ಹೆಸರಿನಲ್ಲಿ ವಿಪರೀತ ವೆಚ್ಚ. ವಾಹನಕ್ಕಾಗಿ ಹಾನಿ. ನೌಕರಚಾಕರರಲ್ಲಿ ಪರಸ್ಪರ ದ್ವೇಷಬುದ್ಧಿ ಹುಟ್ಟುವದರಿಂದ ನಿಮ್ಮ ಕೆಲಸಕ್ಕೆ ಅಡಚಣೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಆದರೆ ಶತ್ರುಗಳಿಗೆ ಲಾಭ ಕಡಮೆಯೇ. ಮಿತ್ರಸುಖ ಅನುಕೂಲ. ವಿದ್ಯೆಯಲ್ಲಿ ಇಲ್ಲವೆ ಬುದ್ಧಿವಿಷಯಕ ಕೆಲಸದಲ್ಲಿ ಬಹಳ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ರೋಹಿಣಿಗೆ ತೊಂದರೆ ಕಡಮೆ. ತಾ. ೧೬, ೧೭, ೧೮, ೧೯ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ ಆದರೆ ಸ್ತ್ರೀಸುಖದಲ್ಲಿ ಕೆಲವೊಂದು ಇಷ್ಟಾಪತ್ತಿಯಿಂದಲೆ ವ್ಯತ್ಯಯ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ನಿಮ್ಮಿಂದ, ಅದರಂತೆ ಮಕ್ಕಳಿಂದ ವಿಪರೀತ ಸಾಹಸದ ಕೆಲಸಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಬಹಳ ಉತ್ತಮ ಧರ್ಮಕೃತ್ಯದಲ್ಲಿ ಬಹಳ ವೆಚ್ಚ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ. ಮಿತ್ರರಲ್ಲಿ ಒಬ್ಬಿಬ್ಬರಿಗೆ ಆಪತ್ತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರದಲ್ಲಿ ಹೆಚ್ಚು ಅನುಕೂಲ. ಆರಿದ್ರಾಕ್ಕೆ ತೊಂದರೆ ಕಡಮೆ. ತಾ. ೧೩, ೧೬, ೧೭, ೧೮. ಅನುಕೂಲ.

ಕರ್ಕ

ಸ್ವತಃ ನಿಮಗೆ ಮತ್ತು ಹೆಂಡತಿಗೆ ಕಿರುಕಳ ಕಾಯಿಲೆ ಆದರೆ ಬಹುತರ ವಿಷಯಗಳಲ್ಲಿ ಉಭಯತರಲ್ಲಿ ಐಕ್ಯ ಮತ್ತು ಪರಸ್ಪರರಲ್ಲಿ ಗಾಢ ಪ್ರೇಮ. ಆದರೆ ಮಕ್ಕಳು ಮತ್ತು ಇತರ ಆಪ್ತರು ಮನಸ್ಸಿಗೆ ಉದ್ವೇಗವುಂಟಾಗುವಂಥ ಕೆಲ ಕೆಲಸಗಳನ್ನು ಮಾಡುವಯೋಗ. ಸ್ಥಾವರದಲ್ಲಿ ಒಂದು ಅನುಕೂಲ ಅದರೆ ಮತ್ತೊಂದು ಪ್ರತಿಕೂಲ ಹೀಗೆ ಸ್ಪಷ್ಟ ಎರಡು ಬಗೆಯ ಘಟನೆಗಳು ಸಂಭವಿಸುವ ಯೋಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಮನೆಯಲ್ಲಿಯ ಪ್ರತಿಯೊಬ್ಬರು ನಿರರ್ಥಕವೆಚ್ಚ ಮಾಡುವರು. ಮಿತ್ರಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸಾದಿ ಕೆಲಸ ಬಹಳ ಉತ್ತಮ. ಪುಷ್ಯಕ್ಕೆ ತೊಂದರೆ ಕಡಿಮೆ. ತಾ. ೧೪, ೧೫, ೧೮, ೧೯. ಅನುಕೂಲ.

ಸಿಂಹ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಸ್ತ್ರೀಸುಖದಲ್ಲಿ ಕೆಲವೊಂದು ಅಪರಿಹಾರ್ಯ ಕಾರಣಗಳಿಂದ ವಿರಸ. ಮಕ್ಕಳು ಮತ್ತು ಬಂಧುವರ್ಗದವರು ನಿಮ್ಮ ವಿರುದ್ಧ ಕೆಲ ಸಂಗತಿಗಳನ್ನುಮಾಡುವಲ್ಲಿ ಪೂರ್ಣವಾಗಿ ನಿರತರಾಗುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಆದರೆ ಪ್ರತಿಷ್ಠೆ ಕುಂದುತ್ತ ನಡೆವುದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಆದರೆ ವೆಚ್ಚ ಮತ್ತು ತೊಂದರೆ ವಿಪರೀತ. ಮಿತ್ರಸುಖ ಉತ್ತಮ ಚೈನಿಯತ್ತ ಬಹಳ ಒಲವು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮಘಾದ ೧ನೇ ಮತ್ತು ೩ ನೇ ಪೂರ್ವಾದ ೧ ನೇ ೩ ನೇ ೪ ನೇ ಚರಣಗಳಿಗೆ ತೊಂದರೆ ಕಡಮೆ. ತಾ ೧೩, ೧೬, ೧೭. ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಮನೆಯಲ್ಲಿ ಎಲ್ಲರ ಮನಸ್ಸು ಕೆಡುವದು ಮಕ್ಕಳಿಂದ ವಿಶೇಷವಿರೋಧ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಕುಂಟ. ಆದರೆ ವೆಚ್ಚಮಾತ್ರ ಬಹಳ. ಶತ್ರುಗಳು ಬಗೆಬಗೆಯ ಸಂಕಟಗಳನ್ನು ಉದ್ಭೂತಮಾಡಿ ತೊಂದರೆ ಕೊಡುತ್ತ ನಡೆವರು. ಆದರೂ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಆಯಾ ಕೆಲಸಗಳಲ್ಲಿ ಬುದ್ಧಿಗೆ ಅತಿಶಯ ಶ್ರಮ. ಪ್ರವಾಸಾದಿ ಕೆಲಸ ಸಾಧಾರಣ, ಅನುಕೂಲ. ಹಸ್ತಾಕ್ಕೆ ತೊಂದರೆ ಕಡಿಮೆ. ತಾ. ೧೪, ೧೫, ೧೯ ಅನುಕೂಲ.

ತುಲಾ

ಪ್ರಕೃತಿ ಮತ್ತು ಹೆಂಡತಿ ಹಾಗು ಪ್ರಾಪಂಚಿಕ ಸುಖ ಉತ್ತಮ. ಮಕ್ಕಳಲ್ಲಿ ಕೆಲ ಅನುಕೂಲ ಸಂಗತಿಗಳು ಸಂಭವಿಸುವದರಿಂದ ಮನಸ್ಸಿಗೆ ಸಮಾಧಾನ. ಉದ್ಯೋಗದಲ್ಲಿ ಪ್ರಗತಿ ಸಾಮಾನ್ಯ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ, ಮಿತ್ರರಿಂದ ಮೋಸ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ ಸ್ವಾತಿಗೆ ಹೆಚ್ಚು ಅನುಕೂಲ. ತಾ. ೧೩, ೧೬, ೧೭ ಅನುಕೂಲ.

ವೃಶ್ಚಿಕ

ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಗೆ ಬಹಳ ಕುಂದು. ಮಿತ್ರಸುಖ ಉತ್ತಮ. ವೆಚ್ಚ ಹೆಚ್ಚು ಆದರೆ ಅದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಧ್ಯಮ ಅನುಕೂಲತೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಗೆ ತೊಂದರೆ ಕಡಮೆ. ತಾ. ೧೩, ೧೪, ೧೮, ೧೯ ಅನುಕೂಲ.

ಧನು

ಪ್ರಕೃತಿ ಅನುಕೂಲ. ಸ್ತ್ರೀಸುಖ ಉತ್ತಮ. ಮಕ್ಕಳಲ್ಲಿ ಉನ್ನತಿ. ಆದರೆ ಅವರಿಂದ ಮನಸ್ಸಿನ ವಿರುದ್ಧ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಸ್ವಾರ್ಥ ಸಾಧಿಸಿ ಪರಮಾರ್ಥ ಪಡೆಯುವ ಕೆಲವೊಂದು ಕೃತ್ಯ ಮಾಡಲ್ಪಡುವ ಸಂಭವ. ಮೂಲಾದ ೧ ನೇ ೩ ನೇ ಮತ್ತು ಪೂರ್ವಾಷಾಢಾದ ೧ ನೇ ೩ ನೇ ೪ ನೇ ಚರಣಗಳಿಗೆ ತೊಂದರೆ ಕಡಮೆ. ತಾ. ೧೩, ೧೪, ೧೫, ೧೬ ಅನುಕೂಲ.

ಮಕರ

ಹೆಚ್ಚು ಮತ್ತು ಹೆಂಡತಿಯ ಪ್ರಕೃತಿ ಸ್ವಲ್ಪ ಕ್ಷೀಣ. ಪ್ರಾಪಂಚಿಕ ಸುಖ ಸಾಧಾರಣವೇ. ಆದರೆ ಮಕ್ಕಳಲ್ಲಿ ಬಹಳ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಬಹಳ ಹೆಚ್ಚು. ಅದರಂತೆ ಪ್ರತಿಷ್ಠೆ ಮತ್ತು ಲಾಭ [illegible]. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಅವಚಿತ ಲಾಭದ ಸಂಭವ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಶ್ರವಣಕ್ಕೆ ಹೆಚ್ಚು ಅನುಕೂಲ. ತಾ. ೧೬, ೧೭, ೧೫, ೧೯ ಅನುಕೂಲ.

ಕುಂಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಸ್ತ್ರೀಸುಖದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಮೊದಮೊದಲು ಬಹಳ ಅಡಚಣೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಆದರೆ ನಿಮ್ಮ ಜನರೆ ಶತ್ರುಗಳಿಗೆ ಫಿತೂರ ಆಗಹತ್ತಿರುವರೆಂಬ ಸುದ್ದಿ ಬರುವದರಿಂದ ಮನಸ್ಸಿನಲ್ಲಿ ಬಹಳ ಉದಾಸೀನತೆ. ಪತ್ರವ್ಯವಹಾರ ಮತ್ತು ಪ್ರವಾಸಕ್ಕಿಂತ ಭೆಟ್ಟಿ ಅನುಕೂಲ. ಶತತಾರಿಕೆಗೆ ತೊಂದರೆ ಕಡಮೆ. ತಾ. ೧೬, ೧೭, ೧೮, ೧೯ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಮಕ್ಕಳಲ್ಲಿ ಉನ್ನತಿ. ಉದ್ಯೋಗದಲ್ಲಿ ಪ್ರತಿಷ್ಠೆ ಕಡಮೆ. ಆದರೆ ಪ್ರಗತಿ ಮತ್ತು ಲಾಭ ಮನಸ್ಸಿನಂತೆ. ಆಪ್ತರು ಮತ್ತು ನೆರೆಹೊರೆಯವರಿಂದ ವಿಶೇಷ ಸಹಾನುಭೂತಿಯ ವರ್ತನೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಸ್ವಪ್ನಗಳು ಹುರಹುರಿ ಹೆಚ್ಚಿಸುವಂಥವು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾ ಭಾದ್ರಪದಕ್ಕೆ ಹೆಚ್ಚು ಅನುಕೂಲ. ತಾ. ೧೩, ೧೪, ೧೮, ೧೯ ಅನುಕೂಲ.

ಮುನಿಸಿಪಾಲ್ಟಿಯುವರೇನು ಮೂರ್ಖರೆ?

(೨ ನೇ ಪುಟದಿಂದ)

ಲ್ಲಿಯೇ ಹೆಚ್ಚು ಓಡಾಡಹತ್ತಿದರೆ ಮಾತ್ರ ಮುನಸಿಪಾಲಿಟಿಯವರು ಡಾಂಬರ ರಸ್ತೆಯ ವಿಚಾರ ಮಾಡಬಹುದು. ಈ ಸಂದರ್ಭದಲ್ಲಿ ಇನ್ನೊಂದು ವಿಚಾರ ಮಾಡುವಂಥ ವಿಷಯವೆಂದರೆ ನಾವು ಊರಲ್ಲೆಲ್ಲ ಡಾಂಬರ ರಸ್ತೆ ಮಾಡಿದರೆ ನೆಲದಲ್ಲಿ ನೀರು ಇಂಗದೆ ಊರೊಳಗಿನ ಬಾವಿಗಳಿಗೆ ನೀರು ಕಡಿಮೆ ಬರಬಹುದು. ಆದರ ಸಲುವಾಗಿಯೂ ಆ ಯೋಜನೆಯನ್ನು ಮುಂದೆ ಹಾಕಲಾಗಿದೆ.

ನೀರಿನ ಸೌಕರ್ಯದ ಯೋಜನೆ

"ನಿಮ್ಮ [illegible] ಕಾಕಿದ್ದು [illegible] ಗಳು ನಿಮ್ಮ ಕಡೆಗೆ ಅನೇಕ [illegible] ವಿಚಾರವನ್ನು [illegible] ಕೇಂದ್ರ ಸರಕಾರದ ಆರೋಗ್ಯ [illegible] ಪಟ್ಟಣಗಳ ಆರೋಗ್ಯದ [illegible] ನದಿದಿ ಪ್ರಕಟವಾಗಿದೆ. ಅದರಲ್ಲಿ ಒಂದು [illegible] "ಹಿಂದುಸ್ಥಾನದ ಪಟ್ಟಣಗಳ ಆರೋಗ್ಯ ಕೆಡಲಿಕ್ಕೆ ಮುಖ್ಯವಾಗಿ [illegible] ವಿಷ್ಯಾದ್ಯೀನಗಳು [illegible] ಎರಡೆನಿಸಿವೆ" [illegible] ಮೇಲಾಗಿ ನಮ್ಮ [illegible] ಶಾಸ್ತ್ರದವರೂ ಸಮ್ಮ [illegible] ರೋಗ ಪಸ್ತರಿಕ್ಕೆ ಈ ಕರದ [illegible] ಗಳೇ ಕಾರಣವೆಂದು [illegible] ಪಟ್ಟರು. ಈ ಕರದ [illegible] ಗಳಿಂದ [illegible] ಯಾವತರದ [illegible] ಆವರು ತಮ್ಮ ಒಂದೊಂದೇ [illegible] ತೋರಿಸಹತ್ತುವರು. ಹಳ್ಳಿಯಲ್ಲಿ [illegible] ಮೂಲಕ ಪ್ರತಿಯೊಂದು [illegible] ಪುರುಷರು ನೀರು [illegible] ಆರೋಗ್ಯ [illegible] ಗಾಂಧೀಜಿಯವರ ವಿಚಾರಸರಣಿಯು ಇದೇ ರೀತಿಯ [illegible] ದಿಂದು ನನಗನಿಸುತ್ತದೆ. ಅದಕ್ಕಾಗಿ ನಾವು ನಳಗಳನ್ನು ಹೆಚ್ಚಾಗಿ ಕೊಡುವದನ್ನು [illegible] ಯುತ್ತಿದ್ದೇವೆ. ಇದರಲ್ಲಿಯೇ ಸಾರ್ವಜನಿಕರ ಹಿತವಿದೆಯೆಂದು ನನಗನಿಸುತ್ತದೆ.

ವಿದ್ಯುದ್ದೀಪ ಯೋಜನೆ

"ಇದೇ ರೀತಿ ವಿದ್ಯುದ್ದೀಪದ ಬಗ್ಗೆ ಹೇಳಬಹುದು. ಸಿನೇಮಾ, ಕಾರಖಾನೆಗಳಿಗೆ ಮಾತ್ರ ವಿದ್ಯುದ್ದೀಪವನ್ನು ಪೂರೈಸಬೇಕು. ಮನೆ ಅಥವಾ ಅಂಗಡಿಗಳಿಗೆ ಕೊಟ್ಟರೆ ಜನರ ದೃಷ್ಟಿಯು ತೀವ್ರವೇ ಮಂದವಾಗುವ ಸಂಭವವಿದೆ. ಇದಲ್ಲದೆ ವಿದ್ಯುದ್ದೀಪ ಹಾಗು ಕಲ್ಲೆಣ್ಣೆಯ ಅಭಾವದ ಮೂಲಕ ಜನರು ಹಣತೆಯನ್ನು ಉಪಯೋಗಿಸಿ ತನ್ಮೂಲಕ ನಮ್ಮ ಹಿಂದುಸ್ತಾನದಲ್ಲಿ ಗ್ರಾಮೋದ್ಯೋಗಗಳ ಬೆಳವಣಿಗೆಯಾಗಬಹುದೆಂದು ನಾವು ಅದನ್ನು ಅದಷ್ಟು ಬಿಗಿ ಹಿಡಿದಿದ್ದೇವೆ.

"ಒಟ್ಟಿನ ಮೇಲೆ ಹೇಳುವದಾದರೆ ನಾವು ನಗರಪಾಲನದ ಬಗ್ಗೆ ವಿಚಾರ ಮಾಡದೆ ಬಿಟ್ಟ ವಿಷಯವೇ ಇಲ್ಲ. ಎಲ್ಲವನ್ನೂ ವಿಚಾರ ಮಾಡಿ ಈ ಮಟ್ಟಕ್ಕೆ ಇಳಿದಿದ್ದೇವೆ. ಇಂಥ ವಿಷಯಗಳನ್ನು ಪುಸ್ತಕದಲ್ಲಿ ಬರೆದರೆ ಅಥವಾ ಓದಿದರೆ ಬರುವದಿಲ್ಲ. ಅನುಭವದಿಂದ, ಕಂಡು ಹಿಡಿಯಬೇಕಾಗುತ್ತದೆ. ತಿಳಿಯಿತೆ?"

ನನಗೂ ತಿಳಿದಂತೆ ಅನಿಸಹತ್ತಿತು. [illegible]

● ಪಾರೀಸದಲ್ಲಿ ಕೂಡಲಿರುವ [illegible] ಸಮಿತಿಗೆ ಹಿಂದುಸ್ತಾನದ ಪ್ರತಿನಿಧಿಗಳು ಇದೇ ೧೪ ನೇ ದಿನಾಂಕ ಪಾರೀಸಕ್ಕೆ ಹೋಗುವರು.

Reg. No. B. 3148 | LICENCE No. 3 Licenced to Post without Prepayment | KARMAVEER 13-9-48

ಪುಸ್ತಕ ಪರಿಚಯ

[ಪರೀಕ್ಷೆಗೆ ಬಂದ ಎಲ್ಲ ಪುಸ್ತಕಗಳನ್ನು ಸಾಧ್ಯವಿದ್ದಷ್ಟು ಶೀಘ್ರವಾಗಿ ಪರೀಕ್ಷಿಸಿ ಅಭಿಪ್ರಾಯ ಕೊಡುವ ಉದ್ದೇಶವಿದೆ. ಅಲ್ಲಿಯವರೆಗೆ ಸ್ಥಳಾಭಾವದಿಂದ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.]

ಕಾಂಗ್ರೆಸ ರತ್ನಮಹೋತ್ಸವ

ಬರೆದವರು- ಸಂಯುಕ್ತ ಕರ್ನಾಟಕದ ಸಂಪಾದಕ ಮಂಡಲದವರು- ಸಂಪಾದಕರು- ಶ್ರೀ ರಂಗನಾಥ ದಿವಾಕರರು ಪ್ರಕಾಶಕರು- ಲೋಕಶಿಕ್ಷಣ ಟ್ರಸ್ಟ, ಹುಬ್ಬಳ್ಳಿ. ಚಿತ್ರ ಪುಟಗಳನ್ನುಳಿದು ಪುಟ ೨೪೫, ಬೆಲೆ ರೂ ೧೦.

ಮೇಲಿನ ಪುಸ್ತಕವು ಐತಿಹಾಸಿಕ ಪ್ರಾಧಾನ್ಯವುಳ್ಳದ್ದು. ಅದರ ಒಂಬತ್ತು ಅಧ್ಯಾಯಗಳಲ್ಲಿ ಹಿಂದುಸ್ಥಾನದ ಸ್ವಾತಂತ್ರ್ಯ ಸಮರದ ವಿಶ್ವರೂಪ ದರ್ಶನವನ್ನು ಸಂಕ್ಷೇಪವಾಗಿ ಕೊಡಲಾಗಿದೆ. ವಿವರಗಳನ್ನು ಇನ್ನೂ ವಿಸ್ತಾರವಾಗಿ ಕೊಡುತ್ತ ಹೋಗುವುದು ಸಾಧ್ಯವಿಲ್ಲವೆನಿಸಿ, ಕಿರಿದರಲ್ಲಿ ಹಿರಿದನ್ನು ಹೇಳುವ ರೀತಿಯನ್ನು ಕೈಕೊಳ್ಳಲಾಗಿದೆ. ಮೊದಲಿನದಾದ 'ಪ್ರಾಣಪ್ರತಿಷ್ಠೆ' ಎಂಬ ಅಧ್ಯಾಯದಲ್ಲಿ ಹಿಂದುಸ್ಥಾನದ ಸಂಸ್ಕೃತಿಯಲ್ಲಿರುವ Unity in diversity ಮತ್ತು ಮೂಲಗತ ಏಕಸೂತ್ರತೆಯನ್ನೂ ಅದರ ಏಳಿಗೆಯ ಏರಿಳಿತಗಳನ್ನೂ ನಾಡನ್ನು ಗೆದ್ದು ಆಳಿದ ಜನಾಂಗದವರಲ್ಲಿರುವ ತಾರತಮ್ಯಗಳನ್ನೂ ಆ ಆಳ್ವಿಕೆಯ ಪರಿಣಾಮ ವಿಶೇಷಗಳನ್ನೂ ಹೇಳಿ, ಕಾಂಗ್ರೆಸ್ಸಿನ ಉದಯವನ್ನು ಸೂಚಿಸಿ, ಸ್ವಾತಂತ್ರ್ಯಪಿಪಾಸೆ ಜನತೆಯಲ್ಲಿ ಹುಟ್ಟಿದ್ದನ್ನು ಸ್ಥೂಲವಾಗಿ ಅವಲೋಕಿಸಲಾಗಿದೆ.

'ಕಾಂಗ್ರೆಸ್ಸಿನ ಇತಿಹಾಸ' ಎಂಬುದು ಎರಡನೆಯ ಅಧ್ಯಾಯ. ಇದರಲ್ಲಿ ಕಾಂಗ್ರೆಸ್ಸು ಹುಟ್ಟಿ ಸ್ವಾತಂತ್ರ್ಯವನ್ನು ಸಂಪಾದಿಸಲು, ಮೊದಲು ಪ್ರಾರ್ಥನೆ, ಅನಂತರ ಚಳವಳಿ, ಅಸಹಕಾರ, ಕ್ರಾಂತಿ-ಈ ಮಾರ್ಗಗಳಿಂದ ೧೯೪೭ ರ ಅಗಸ್ಟಿನಲ್ಲಿ ಸ್ವಾತಂತ್ರ್ಯದ ಪಡೆದನ್ನು ಹೇಗೆ ಮುಟ್ಟಿತೆಂಬುದನ್ನು ವಿಹಂಗಮಾವಲೋಕನ ಮಾಡಲಾಗಿದೆ.

ಮೂರನೆಯದಾದ 'ಕರ್ನಾಟಕ ಮತ್ತು ಕಾಂಗ್ರೆಸ್ಸು' ಎಂಬ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ವೀರ ಪರಂಪರೆಯುಂಟೆಂಬ ಮಾತೆತ್ತಿ, ಅನಂತರ ಕರ್ನಾಟಕದ ನಾನಾ ಪ್ರದೇಶಗಳಲ್ಲಿ ಕಾಂಗ್ರೆಸ್ಸಿನಲ್ಲಿ ಭಾಗವಹಿಸಿದ ಮುಖಂಡರ ಕಾರ್ಯಗಳನ್ನು ಸಂಕ್ಷಿಪ್ತ ಸರಣಿಯಿಂದ ಹೇಳಿ,ಇಲ್ಲಿ ನಡೆದ ಚಳವಳಿಗಳ ಸ್ವರೂಪವನ್ನು ವಿವರಿಸಲಾಗಿದೆ. ಇದರಲ್ಲಿ ಈ ವಿಷಯದ ಜೊತೆಗೆ ಕರ್ನಾಟಕವು ಸ್ವಾಯತ್ತ ಪ್ರಾಂತವಾಗಬೇಕೆಂದು ಮೋತಿಲಾಲ ನೆಹರುಗಳ ಕಾಲದಲ್ಲೇ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಅಧಿಕೃತ ಮುದ್ರೆ ಬಿದ್ದಿತ್ತೆಂಬುದನ್ನು ನಿರ್ದೇಶಿಸಿ, ಕರ್ನಾಟಕದ ನಾನಾ ಭಾಗಗಳಲ್ಲಿ ನಡೆದ ಸತ್ಯಾಗ್ರಹ, ಕರನಿರಾಕರಣ, 'ಚಲೇಜಾವ' ಚಳವಳಿ, ಅಧಿಕಾರಿಗಳ ಅತ್ಯಾಚಾರ; ವಿವಿಧ ವಿಧಾಯಕ ಕಾರ್ಯಗಳಾದ ಮಾತೃಭಾಷೆಯ ಚಟುವಟಿಕೆ, ಹಿಂದುಸ್ಥಾನೀ ಸೇವಾದಲ, ಸ್ತ್ರೀಜಾಗ್ರುತಿ, ಖಾದಿಪ್ರಚಾರ, ಗ್ರಾಮೋದ್ಯೋಗ, ಮದ್ಯಪಾನನಿಷೇಧ, ಹರಿಜನೋದ್ಧಾರ, ಮೂಲಶಿಕ್ಷಣ ಮುಂತಾದ ವಿಷಯಗಳನ್ನು ಸಾಕಷ್ಟು ಚೆನ್ನಾಗಿ ಚಿತ್ರಿಸಲಾಗಿದೆ.

'ಕಾಂಗ್ರೆಸ್ಸಿನ ಸಾಧನ ಮಾರ್ಗ' ದಲ್ಲಿ ನೀತಿ ಸ್ವಮಾರ್ಗ, ಚಳವಳ, ಅಸಹಕಾರ, ಸತ್ಯಾಗ್ರಹ, ಶಾಸನಭಂಗ ಮುಂತಾದ್ದನ್ನು ವಿವರಿಸಿದ್ದು 'ಕಾಂಗ್ರೆಸ್ಸಿನ ಇತಿಹಾಸ' ಎಂಬುದಕ್ಕೆ ಅನುಬಂಧವೆಂಬಂತಿದೆ. ಇದರಲ್ಲಿ ಅಹಿಂಸಾತ್ಮಕ ಸಮರ ಮಾರ್ಗಕ್ಕೆ ಕಾಂಗ್ರೆಸ್ಸು ಪುರಸ್ಕಾರ ಕೊಟ್ಟಿದ್ದನ್ನು ಉಪಯುಕ್ತ ಎಂದು ಸ್ಥೂಲವಾಗಿ ಸಮರ್ಥಿಸಲಾಗಿದೆಯಲ್ಲದೆ ತತ್ಸಂಬಂಧಿಯಾದ ತತ್ವವಿಮರ್ಶೆ ಮಾಡಿಲ್ಲ.

'ರಾಷ್ಟ್ರ ಪುರುಷರು' ಎಂಬ ಅಧ್ಯಾಯ ಐದನೆಯದು. ಇದರಲ್ಲಿ ಕಾಂಗ್ರೆಸ್‌ ಸಂಸ್ಥೆಯ ಜನಕರಾದ ಅಲನ ಒಕ್ಟೇವಿಯನ್ಸ್ ಹ್ಯೂಮರಿಂದ ಹಿಡಿದು ಕಾಂಗ್ರೆಸ್ಸಿನ ಎಲ್ಲ ಅಧ್ಯಕ್ಷರ ಕತೆಗಳನ್ನೂ ಹೇಳಿ, ಕರ್ನಾಟಕ ಪ್ರಾಂತದ ಕಡೆಗೆ ಇಡೀ ಭಾರತದ ಲಕ್ಷ್ಯವನ್ನು ಸೆಳೆದ "ಹಿಂದುಸ್ಥಾನಿ ಸೇವಾದಲ" ದ ಸಂಸ್ಥಾಪಕ ಮತ್ತು ಸಂಚಾಲಕರಾದ ಡಾ. ನಾ. ಸು. ಹರ್ಡೀಕರರ ಕಾರ್ಯವನ್ನು ವಿವರಿಸಲಾಗಿದೆ.

"ರಚನಾತ್ಮಕ ಕಾರ್ಯಕ್ರಮ" ಎಂಬ ಅಧ್ಯಾಯ ವಿಶಿಷ್ಟವಿದೆ. ಈ ಅಧ್ಯಾಯದಲ್ಲಿ ಬ್ರಿಟಿಶರು ಹೇಗೆ ಪ್ರಾಚೀನ ಭಾರತೀಯ ಪ್ರಜಾತಂತ್ರಪದ್ಧತಿಗೆ ಕೊಡಲಿ ಹಾಕಿದರೆಂಬುದನ್ನೂ ಅದರ ಪುನರುದ್ಧಾರಕ್ಕಾಗಿ ಕಾಂಗ್ರೆಸ್ಸು ರಾಜಕೀಯ ಜಾಗ್ರುತಿ, ಖಾದಿ ಪ್ರಸಾರ, ಹರಿಜನಕಾರ್ಯ, ರಾಷ್ಟ್ರ ಭಾಷಾ ಪ್ರಚಾರ, ಪಾನನಿರೋಧ ಗ್ರಾಮೋದ್ಯೋಗ, ಮೂಲಶಿಕ್ಷಣ, ರೈತ ಮತ್ತು ಕೂಲಿಕಾರ, ವಿದ್ಯಾರ್ಥಿಗಳು, ಸ್ತ್ರೀಯರು, ಜಾತೀಯ ಐಕ್ಯ ಮುಂತಾದವುಗಳ ಮೂಲಕ ಪುನಾರಚನೆಯನ್ನು ಸಾಧಿಸ ಹೊರಟಿತೆಂಬುದನ್ನೂ ವಿವರವಾಗಿ ಬರೆಯಲಾಗಿದೆ.

'ವೀರಸ್ಮರಣೆ' ೭ ನೆಯ ಅಧ್ಯಾಯ. ಇದರಲ್ಲಿ ವೀರನಾರಾಯಣನಿಂದ ಆರಂಭಿಸಿ ಗಣೇಶ ಶಂಕರ ವಿದ್ಯಾರ್ಥಿಯ ವರೆಗಿನ ದಬ್ಬಾಳಿಕೆ ಅತ್ಯಾಚಾರಗಳಿಗೆ ಗುರಿಯಾದ ವೀರರ ಕತೆಯನ್ನು ನಿರೂಪಿಸಲಾಗಿದೆ. ಈ ಅಧ್ಯಾಯ ಇನ್ನೂ ವಿಸ್ತಾರವಾಗಿ ರಸವತ್ತಾಗಿ ಬರೆಯಲ್ಪಟ್ಟಿದ್ದರೆ ಆ ದೇಶಭಕ್ತ ವೀರರ ಸ್ಮರಣೆಯಿಂದ ಓದುಗರು ಇನ್ನೂ ಹೆಚ್ಚು ಸ್ಫೂರ್ತಿ ಪಡೆವಂತಾಗುತ್ತಿತ್ತು.

"ಪ್ರಾಗತಿಕರ ಪಾತ್ರ" ಎಂಬ ೮ ನೆಯ ಅಧ್ಯಾಯದಲ್ಲಿ ಉದಾರವಾದಿಗಳ ಸ್ವಾತಂತ್ರ್ಯ ಸಮರನೀತಿ ಮತ್ತು ಕಾರ್ಯಗಳನ್ನು ವರ್ಣಿಸಲಾಗಿದೆ. ಅದರಲ್ಲಿ ಸೈಮನ್ ಕಮಿಶನ್, ನೆಹರು ಸಮಿತಿ, ಶ್ವೇತಪತ್ರನಾಟಕ, ಕಾಂಗ್ರೆಸ್ಸಿನ ಅಧಿಕಾರಸ್ವೀಕಾರ, ವಿಶ್ವಯುದ್ಧ, ಕ್ರಿಪ್ಸ ಕೊಡುಗೆ ಮುಂತಾದ ಮಹತ್ವದ ಅಂಶಗಳ ಮೇಲೆ ಬೆಳಕನ್ನು ಬೀರಲಾಗಿದೆ ಮತ್ತು ರಾಜಾ ರಾಮಮೋಹನರಾಯರಿಂದ ಭೂಪೇಂದ್ರ ವರೆಗೆ ೩೫ ಜನ ಉದಾರವಾದಿಗಳ ಸಂಗತಿಯನ್ನು ಕೊಡಲಾಗಿದೆ.

ಕೊನೆಯದು "ಕ್ರಾಂತಿಕಾರರು" ಎಂಬ ಅಧ್ಯಾಯ. ಇದರಲ್ಲಿ ಭಾರತದಲ್ಲಿ ಪರರ ಆಳ್ವಿಕೆಯ ವಿರುದ್ಧವಾಗಿ ಸಶಸ್ತ್ರ ಪ್ರತಿಭಟನೆಗೆ ಹೊರಟ ಕ್ಷಾತ್ರ ತೇಜಸ್ಸಿಗಳ ಚರಿತ್ರೆ ಬಂದಿದೆ; ಠಕ್ಕರು, ಸನ್ಯಾಸಿಗಳು, ವಹಾಬಿಗಳು ಇವರ ಆಂದೋಲನ, ನೀಲಿಬಂಡಾಯ, ಗಧಾರಪಕ್ಷದ ಚಟುವಟಿಕೆ ಚಿತಗಾಂಗಿನ ಕ್ರಾಂತಿ ಪ್ರಯತ್ನ, ದ್ವಿತೀಯ ಸ್ವಾತಂತ್ರ್ಯ ಸಮರ ಎಂಬ ವಿಷಯಗಳು ವಿವರಿಸಲ್ಪಟ್ಟಿವೆ.

ಇಲ್ಲಿಗೆ ಪುಸ್ತಕ ಮುಗಿಯಿತೆನ್ನಬೇಕು. ಮುಂದೆ ಕಾವ್ಯಸೇವೆ ಮಂಗಲ ಹಾಡುತ್ತದೆ. ನಡುನಡುವೆ ಮುಖಂಡರ ಭಾವಚಿತ್ರ, ನಕ್ಷೆ ನಕಾಶೆಗಳು ಮುಂತಾದವನ್ನು ವಿವರಗಳೊಡನೆ ಕೊಟ್ಟಿದ್ದು ಬಹಳ ಉಪಯುಕ್ತವಾಗಿದೆ; ಪುಸ್ತಕ ಅದರಿಂದ ಸುಂದರವಾಗುವಂತಾಗಿದೆ.

ಬರಹಗಳ ಶೈಲಿ ಹಳ್ಳಪುಸ್ತಕಕ್ಕೆ ಸಹಜವಾದುದೆನಿಸಿದೆ; ಅಥವಾ ಸಂಕ್ಷೇಪ ಸಂಗತಿಗಳ ಕಥನಕ್ಕೆ ಅನುಗುಣವಾದುದಾಗಿದೆ. ಮತ್ತೆ ಯಾವ ವಿಶೇಷವೂ ಕಾಣಸಿಗದು. ಕೇವಲ ವಿಷಯವಿಮರ್ಶನವೊಂದನ್ನೇ ಗುರಿಯಾಗಿಟ್ಟುಕೊಂಡದ್ದರಿಂದ ರಮ್ಯಮಾನತೆ ಎತ್ತಿತೋರಿಸಿದಂತಿಲ್ಲ. ಅಂತೂ ಉದ್ದೇಶಕ್ಕೆ ತಕ್ಕಮಟ್ಟಿಗೆ ತಕ್ಕಂತಿದೆ ಎಂದು ಹೇಳಬಹುದೆನಿಸುತ್ತದೆ.

ಶಬ್ದಗಳಲ್ಲಿ ಅಲ್ಲಲ್ಲಿ ಅರೂಢತೆ, ಅಪಪ್ರಯೋಗ, ದುಷ್ಟಾರ್ಥ ಸೂಚಕತೆ ಮುಂತಾದ ದೋಷಗಳುಸಲವುತಲೆದೋರಿವೆ. ಇಂಥ ಚಿಕ್ಕ ಪುಟ್ಟ ದೋಷಗಳು ಪತ್ರಿಕಾಶೈಲಿಗೆ ಸಹಜವಾಗಿ ಉಳಿದುಕೊಂಡಿವೆ.

ಒಟ್ಟಿನಲ್ಲಿ ಪುಸ್ತಕವು ಇತಿಹಾಸದ ದೃಷ್ಟಿಯಿಂದ, ದೇಶಪ್ರೇಮವನ್ನು ಜನತೆಯಲ್ಲಿ ಸಜೀವವಾಗಿ ಇಡುವ ಬುದ್ಧಿಯಿಂದ, ದೇಶೋದ್ಧಾರಕರ ನೆನಪು ಉಳಿಯುವಂತೆ ಮಾಡುವ ಉದ್ದೇಶದಿಂದ ಬರೆಯಲ್ಪಟ್ಟಿದೆಯಾಗಿ ಅದು ಸಾರ್ಥಕತೆಹೊಂದಿದೆ ಎಂದೇ ಹೇಳಬೇಕು. ಆದುದರಿಂದ ಬರಹಗಾರರನ್ನೂ ಸಂಪಾದಕರನ್ನೂ ಅಭಿನಂದಿಸದಿರಲಾರೆವು. ಕನ್ನಡ ದೇಶಪ್ರೇಮಿಗಳಿಗೆ ಕೂಡ ಈ ಸ್ಮಾರಕದ ಹೊತ್ತಿಗೆಯು ಅತ್ಯಗತ್ಯವೆಂಬ ಅಂಶವು ಪುಸ್ತಕವನ್ನು ತೆರೆದೊಡನೆಯೇ ತಿಳಿದುಹೋಗುವುದೆಂದು ನಮಗೆ ದೃಢವಾಗಿ ಗೊತ್ತಿದೆ.

ಹೇಮಾವತಿ

ಬರೆದವರು, ಶ್ರೀ ಗೋರೂರು ರಾಮಸ್ವಾಮಯ್ಯಂಗಾರ್. ಪ್ರಕಾಶಕರು ಮತ್ತು ಮುದ್ರಕರು ಶ್ರೀ ಆರ್. ಎನ್. ಪಟ್ಟು ಉಷಾ ಪ್ರೆಸ್, ನೀಲಗಿರಿ ರೋಡ್, ಮೈಸೂರು.

'ಹೇಮಾವತಿ' ಯಲ್ಲಿ ಹೇಮಾವತಿ ಕಥಾನಾಯಿಕೆ. ಅವಳ ಗಂಡ ಸುಂದರ ಕಥಾನಾಯಕ. ಅವನನ್ನು ಹೇಳಹೆಸರಿಲ್ಲದಂತೆ ಚಿತ್ರಿಸಿದ್ದಾರೆ. ಅವಳು ಪತಿವ್ರತಾಶಿರೋಮಣಿ, ಇವನು ಹೊಣೆಗೇಡಿ ಯುವಕ. ಅವರಿಬ್ಬರ ಮಾತಾಪಿತೃಗಳೂ ತಿಳಿಗೇಡಿಗಳು. ಹೇಮಾವತಿ ಅವರ ತಿಳಿಗೇಡಿತನದಿಂದಾದ ದುಷ್ಪರಿಣಾಮಗಳನ್ನು ಸ್ವಬುದ್ಧಿಯಿಂದ ನಿವಾರಿಸಿಕೊಳ್ಳುವ ಆಸೆಯುಳ್ಳವಳು; ಆದರೆ ಸುಂದರ ಹಾಳಲ್ಲ, ತೀರ ಆಕ್ಕಲುಗೇಡಿ, ಮಲತಾಯಿ ಮತ್ತು ಅತ್ತೆಯರೇ ಈ ಗಂಡ ಹೆಂಡಿರ ಹೃದಯಗಳು ಹತ್ತಿರವಾಗದಂತೆ ನೋಡಿಕೊಳ್ಳುವ ಶನಿಗಳಾಗಿದ್ದಾರೆ. ಅವರೇ ಈ ಕಾದಂಬರಿಯಲ್ಲಿಯ ಅನೇಕಾನೇಕ ದುಃಖಕರ ಸನ್ನಿವೇಶಗಳಿಗೆ ಕಾರಣರು.

ಸಿಗರೇಟು ಸೇದುವುದು, ಹೆಣ್ಣಿನ ತಂದೆಯಿಂದ ಅಳಿಯನ ಮನೆಯವರು ಹಣ ಕೀಳುವುದು, ಹೆಣ್ಣು ಅಸಹಾಯಳಾದಾಗ ಅವಳಿಗೆ ಆಸ್ತಿಯ ಪಾಲುಗಾರಿಕೆ ಇಲ್ಲದೆ ದುಷ್ಟರ ಹಿಂದೆ ನೀಚತನಗಳಿಗೆ ತುತ್ತಾಗುವಂತಾಗುವುದು— ಈ ವಿಚಾರಗಳು ಲೇಖಕರಿಗೆ ಗರ್ಹ್ಯವಿದ್ದಂತೆ ತೋರುತ್ತದೆ. ಸ್ತ್ರೀಗೆ ಆಸ್ತಿಯಲ್ಲಿ ಹಕ್ಕು ದೊರೆತಾಕ್ಷಣ ಅವಳಿಗೆ ಆರ್ಥಿಕ ಸುಸ್ಥಿತಿ ಮತ್ತು ವ್ಯಕ್ತಿಸ್ವಾತಂತ್ರ್ಯ ಲಭಿಸಿ ಅವಳು ತನ್ನಷ್ಟಕ್ಕೆ ತಾನು ಆದರ್ಶ ಸ್ತ್ರೀಯಾಗಿ ಇರಬಹುದೆಂದು ಸೂಚಿತವಾಗಿರುವ ಇವರ ಬರಹದಲ್ಲಿ ತಥ್ಯಾಂಶವಿಲ್ಲ. ಹಿಂದುಸ್ಥಾನದಲ್ಲಿ ದೊಡ್ಡ ಆಸ್ತಿವಂತರು ತೀರಾ ಕಡಿಮೆ. ನೂರಕ್ಕೆ ಒಬ್ಬರಾದರೂ ಇದ್ದಾರೋ ಇಲ್ಲವೋ ಸಂಶಯಾಸ್ಪದ. ಆಸ್ತಿಯಿಲ್ಲದವರು, ಹಣ ಕಾಸುಗಳನ್ನು ಕೂಡಿಸಿಡಲಾಗದಿದ್ದವರು ಮಗಳಿಗಷ್ಟೇ ಅಲ್ಲ, ಮಗನಿಗೂ ಕೊಡತಕ್ಕ ಅನಿವಾರ್ಯವಾದ ವರವೆಂದರೆ ವೃತ್ತಿಶಿಕ್ಷಣ. ಇದೊಂದೇ ಯಾವ ವ್ಯಕ್ತಿಗೇ ಆಗಲಿ, ಆರ್ಥಿಕ ಸ್ವಾತಂತ್ರ್ಯಕ್ಕೆ ಹಾದಿ ಹಾಕಿಕೊಡಬಲ್ಲದು, ಸ್ವಾವಲಂಬಿಯನ್ನಾಗಿಸಬಲ್ಲುದು. ಇನ್ನು ಸ್ವಾತಂತ್ರ್ಯವೆಂಬುದು ದಂಪತಿಗಳಲ್ಲಿ ಒಬ್ಬೊಬ್ಬರಿಗೆ ನೂರಕ್ಕೆ ನೂರು ಇರಲಾರದು, ಇದ್ದರೆ ಅವರು ದಂಪತಿಗಳಾಗಿ ಬಾಳಲಾರರು. ದಾಂಪತ್ಯವೆಂದರೆ ೫೦-೫೦ ಪಾಲುಗಾರಿಕೆ. ದಂಪತಿಗಳಲ್ಲಿ ಇಬ್ಬರ ವೃತ್ತಿಯೂ ಒಂದೇ, ಇಬ್ಬರೂ ಸಾಹಿತ್ಯಾದಿಗಳನ್ನು ಅಭ್ಯಸಿಸಿ ರಸಿಕತನ ಪಡೆದವರೇ ಆಗಿರುವುದು ಆದರ್ಶ. ವರ್ಣಾಶ್ರಮ ಧರ್ಮದ ಮೂಲದ್ರಷ್ಟಾರರು ಕಸಬಿನಂತೆ ಜಾತಿ ನಿರ್ದೇಶ ಮಾಡಿದ್ದು ಗಂಡ ಹೆಂಡಿರು ಊಟ ಪಾಠ, ವಿನೋದ ವಿಹಾರಗಳಲ್ಲಲ್ಲದೆ, ನಿತ್ಯದ ಉದ್ಯೋಗದಲ್ಲೂ ಭುಜಕ್ಕೆ ಭುಜ ಕೊಟ್ಟು ಒಬ್ಬರಿಗೊಬ್ಬರು ನೆರವಾಗಿ ಒಟ್ಟಿಗೇ ಬಾಳಬೇಕೆಂಬ ಆದರ್ಶ ಮಾನಸ ಶಾಸ್ತ್ರೀಯ ದೃಷ್ಟಿಯಿಂದಲೇ ಆದರೆ ಮಿಶ್ರಜಾತೀಯ ವಿವಾಹದಿಂದ ಹುಟ್ಟಿದವರನ್ನು ಭಿನ್ನ ಭಿನ್ನ ಜಾತಿಗಳಿಗೆ ಸೇರಿಸಿದ್ದು ಧರ್ಮಶಾಸ್ತ್ರಕಾರರ ಘೋರಾಪರಾಧ. ಹಾಗಲ್ಲದೆ, ಇಂದಿಗೂ ನವನವೀನವೆನಿಸುವ 'ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ' ಎಂಬುದನ್ನು ನಂಬಿ, ಏಕವೃತ್ತಿ, ಏಕ ಸಂಸ್ಕಾರವುಳ್ಳ ಹೆಣ್ಣು ಗಂಡುಗಳ ವಿವಾಹವನ್ನು ಪ್ರೋತ್ಸಾಹಿಸುವುದೇ ದಾಂಪತ್ಯದಲ್ಲಿ ವಿರಸಕ್ಕೆ ತಡೆಗಟ್ಟುವ ಕ್ರಮ. ದಾಂಪತ್ಯದಲ್ಲಿ ಪ್ರೇಮಬಂಧವಿರುವುದು ಅತಿ ಮುಖ್ಯ. ಅದಿದ್ದರೆ ಆದಿದರ, ಅವರಿಗರ ಸ್ವಾತಂತ್ರ್ಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಲ್ಲಿ ಯಾವ ವಕೀಲನಾರದನಿಗೂ ಬಾಯಿ ಹಾಕಲು ಎಡೆಯಿಲ್ಲ. ಆ ಶಿಕ್ಷಣ ಕೊಡಬೇಕು ತರುಣ ತರುಣಿಯರಿಗೆ ತಾಯ್ತಂದೆಯರು.

ಭಾರತದ ರಾಜ್ಯಘಟನೆಯ ಕರಡು

ಡೆಮಿ. ಅಷ್ಟಪತ್ರದ ೮೪+೧೪ ಪುಟಗಳು ಅನುವಾದಕರು ಶ್ರೀ. ನಾಡಗೇರ ಶಿವರಾಯರು ಮತ್ತು ಶಂಕರ ವೆಂಕಟೇಶ ಪಾಟೀಲರು. ಧಾರವಾಡ ಕಿತಾಬಮಿನಾರ ಪ್ರಕಾಶನ. ಬೆಲೆ ೧-೮-೦

ಸ್ವಾತಂತ್ರ್ಯವನ್ನು ಪಡೆದ ಭಾರತವು ಘಟನಾ ಸಮಿತಿಯನ್ನು ರಚಿಸಿಕೊಂಡು ತನ್ನ ಘಟನೆಯ ಕರಡನ್ನು ಸಿದ್ಧಪಡಿಸಲು ಉಪಸಮಿತಿಯನ್ನು ರಚಿಸಿದ್ದಿತಷ್ಟೇ. ಆ ಉಪಸಮಿತಿಯವರು ಸಿದ್ಧಪಡಿಸಿದ ಘಟನೆಯ ಕರಡಿನ ಕನ್ನಡ ಅನುವಾದವಿದು. ವಸ್ತುತಃ ಸರಕಾರದವರೇ ಆಯಾ ದೇಶಭಾಷೆಗಳಲ್ಲಿ ಆ ಕರಡಿನ ಅನುವಾದವನ್ನು ಪ್ರಸಿದ್ಧಿಸಬೇಕಿದ್ದಿತು.ಆದರೂ ಕಿತಾಬ ಮಿನಾರದವರು ಕರಡಿನಲ್ಲಿಯ ಮುಖ್ಯಾಂಶಗಳು ಬರುವಂತೆ ಈ ಕೆಲಸವನ್ನು ಮಾಡಿ ಕೆಲಮಟ್ಟಿಗೆ ಈ ಕೊರತೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾರೆ.

ಶ್ರೀ ಶಂಕರ ಕುರ್ತಕೋಟಿಯವರು ಪುಸ್ತಕದ ಉಪಯುಕ್ತತೆಯನ್ನು ಬಣ್ಣಿಸಿದ್ದಾರೆ.

ರಾಜ್ಯಘಟನೆಯಂಥಗಹನವಿಷಯವನ್ನು ಅನುವಾದಿಸುವಾಗ ಹೆಚ್ಚು ಜಾಗ್ರತೆ ವಹಿಸಬೇಕಾದುದು ಅವಶ್ಯ. ಈ ಅನುವಾದವನ್ನು ಕೂಲಂಕಷವಾಗಿ ಓದಿನೋಡಿದರೆ ಆ ಬಗೆಯ ಜಾಗ್ರತೆಯನ್ನು ಅನುವಾದಕರು ವಹಿಸಿಲ್ಲೆಂದು ವಿಷಾದಿಸಬೇಕಾಗುತ್ತದೆ. ಅಲ್ಲಲ್ಲಿ ಅರ್ಥವಾಗದ ವಾಕ್ಯಗಳು, ಅಪಶಬ್ದಗಳು,ವ್ಯಾಕರಣ ದೋಷಗಳು ಕಂಡುಬರುತ್ತವೆ. ಕನ್ನಡಿಗರಿಗೆ ಬೇಗನೆ ರಾಜ್ಯಘಟನೆಯ ಕರಡಿನ ಪರಿಚಯ ಮಾಡಿಕೊಡಬೇಕೆಂದು ಅನುವಾದಕರು ಈ ವಿಷಯದ ಕಡೆಗೆ ಅಷ್ಟೊಂದು ಗಮನಕೊಟ್ಟಿಲ್ಲೆಂದು ತೋರುತ್ತದೆ. ಮುಂದಿನ ಆವೃತ್ತಿಯನ್ನು ಹೊರಡಿಸುವಾಗ ಈಗಾದ ತಪ್ಪುಗಳಾಗದಂತೆ ಮಾಡುವರೆಂದು ನಂಬಿದ್ದೇವೆ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತ ಅವರಿಂದ ಮುದ್ರಿತ ಪ್ರಕಟಿತವಾಯಿತು.